# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 10–02–2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಪರಿಷತ್/ಕೌನ್ಸಿಲ್ ಕಾರ್ಯದರ್ಶಿ |
| ಕೆ.ಚಂದ್ರಶೇಖರ್ – ಸದಸ್ಯರು | ಅಪರ ಆಯುಕ್ತರು(ಆರೋಗ್ಯ/ಕಲ್ಯಾಣ/ಆಸ್ತಿಗಳು) |
| ಎನ್.ವೀರಣ್ಣ – ಸದಸ್ಯರು | ಅಧೀಕ್ಷಕ ಅಭಿಯಂತರರು(ಬೃಹತ್ ರಸ್ತೆಗಳು) |
| ಜಿ.ಮಂಜುನಾಥ ರಾಜು – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಭೂಸ್ವಾಧೀನ) |
| ಎಂ.ಜಿ.ಜಯರತ್ನ – ಸದಸ್ಯರು | ಸಹಾಯಕ ಆಯುಕ್ತರು (ಆಸ್ತಿಗಳು) |
| ಶಕೀಲಾ.ಎಂ – ಸದಸ್ಯರು | ಮುಖ್ಯ ಅಭಿಯಂತರರು (ರಾಜರಾಜೇಶ್ವರಿ ನಗರ), (ಬೊಮ್ಮನಹಳ್ಳಿ) |
| ಟಿ.ಎ.ಗಾಯಿತ್ರಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಪಶ್ಚಿಮ), (ವಿದ್ಯುತ್–ಬೊಮ್ಮನಹಳ್ಳಿ), (ಬೃಹತ್ ರಸ್ತೆಗಳು), |
| | ಸಹಾಯಕ ಕಾರ್ಯಪಾಲಕ ಅಭಿಯಂತರರು (ಮಹದೇವಪುರ) (ಹೆರೋಹಳ್ಳಿ–ಉಪ ವಿಭಾಗ) |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## <u>01]. ವಿಷಯದ ಸಂಖ್ಯೆ :–ತೆಆಸ್ಥಾಸ/164/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)76/10–11ದಿನಾಂಕ:10–01–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಅಖಿಲ ಕರ್ನಾಟಕ ವಾದ್ಯಗೋಷ್ಠಿ ಕಲಾವಿದರ ಮಹಾಸಂಘ (ರಿ), ನಂ. 114, ಹಯವದನರಾವ್ ರಸ್ತೆ, (ರಾಮಕೃಷ್ಣ ಆಶ್ರಮ ಹಿಂಬಾಗ) ಗವಿಪುರಂ, ಬೆಂಗಳೂರು ರವರು ಪೂಜ್ಯ ಮಹಾಪೌರರಿಗೆ ಸಲ್ಲಿಸಿರುವ ಮನವಿಯಲ್ಲಿ ಕರ್ನಾಟಕದಲ್ಲಿ ಸುಮಾರು 200 ಕ್ಕೂ ಹೆಚ್ಚು ವಾದ್ಯ ಗೋಷ್ಠಿಗಳಿದ್ದು, ವಾದ್ಯ ಗೋಷ್ಠಿಗಳಿಗಾಗಿ ಹೆಚ್ಚಿನ ಬೇಡಿಕೆಗಳು ಇಲ್ಲದೇ ಇರುವುದರಿಂದ ಇದೇ ಪ್ರವೃತ್ತಿಯನ್ನೇ ಅವಲಂಬಿಸಿರುವ 1500 ಕ್ಕೂ ಹೆಚ್ಚು ಕಲಾವಿದರನ್ನು ಒಳಗೊಂಡ ಕುಟುಂಬ ವರ್ಗದವರು ಸೇರಿ ಸಂಕಷ್ಟದಲ್ಲಿ ಇರುವುದಾಗಿ, ಸಂಘದ ವಿವಿದೋದ್ದೇಶ ಕಾರ್ಯಕ್ರಮಗಳಿಗಾಗಿ ಪಾಲಿಕೆ ವತಿಯಿಂದ ರೂ. 10,00,000/– ಗಳ ಅನುದಾನವನ್ನು ಮಂಜೂರು ಮಾಡಲು ಕೋರಿ, ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಪೂಜ್ಯ ಮಹಾಪೌರು ರೂ. 5.00 ಲಕ್ಷಗಳ ಹಣ ಬಿಡುಗಡೆ ಮಾಡುವಂತೆ ಸಮಿತಿಗೆ ಒಕ್ಕಣೆಯನ್ನು ಬರೆದು ಕಳುಹಿಸಿರುತ್ತಾರೆಂದು ತಿಳಿಸಿ, ಪೂಜ್ಯ ಮಹಾಪೌರರ ಸೂಚನೆಯ ಮೇರೆಗೆ ಸದರಿ ಸಂಸ್ಥೆಗೆ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಪ್ರಸ್ತಾವಿತ ಸಂಘದವರು ಸುಮಾರು 10 ವರ್ಷಗಳಿಂದ 1500 ಕ್ಕೂ ಹೆಚ್ಚು ಕಲಾವಿದರಿಗೆ ಮತ್ತು ಅವರ ಕುಟುಂಬ ವರ್ಗದವರ ಜೀವನೋಪಾಯಕ್ಕೆ ಓರಿಯಂಟಲ್ ಇನ್‌ಶೂರೆನ್ಸ್ ಸಂಸ್ಥೆಯ ಅಪಘಾತ ಪರಿಹಾರ ವಿಮೆಯನ್ನು ಮಾಡಿಸಲಾಗಿದ್ದು, ಸಂಘದ ಯಾವುದೇ ಸದಸ್ಯ ಅಪಘಾತಕ್ಕೀಡಾಗಿ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ವಿಮಾ ಸಂಸ್ಥೆ ವತಿಯಿಂದ ರೂ.40,000/– ಮೃತ ಪಟ್ಟಲ್ಲಿ ರೂ. 2,00,000/– ದೊರಕಿಸಿಕೊಡುವ ವ್ಯವಸ್ಥೆ ಮಾಡಲಾಗಿದ್ದು, 60 ವರ್ಷ ಮೀರಿದ ಸದಸ್ಯರಿಗೆ ರೂ. 500/– ಗಳ ಮಾಸಿಕ ಪಿಂಚಣಿ ನೀಡಲು ನಿರ್ಧರಿಸಿದ್ದು, ಈ ಎಲ್ಲಾ ಯೋಜನೆಗಳ ಅನುಷ್ಠಾನಕ್ಕೆ ಅಪಾರ ಹಣದ ಅವಶ್ಯಕತೆ ಇದ್ದು, ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು

ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಘಕ್ಕೆ ರೂ. 5.00 ಲಕ್ಷ (ಐದು ಲಕ್ಷಗಳು ಮಾತ್ರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿನಾಂಕ 10–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.2.00 ಲಕ್ಷಗಳ (ಎರಡು ಲಕ್ಷ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿ ತೀರ್ಮಾನಿಸಿದೆ.**

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/186/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)124/10–11 ದಿನಾಂಕ : 21–01–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ. ರೇವಣ್ಣ, ಅಧ್ಯಕ್ಷರು, ಭಾಗವತರು, ಸಾಂಸ್ಕೃತಿಕ ಸಂಘಟನೆ, ನಂ. 269, 3ನೇ ಮುಖ್ಯರಸ್ತೆ, 13ನೇ ಬ್ಲಾಕ್, ನಾಗರಬಾವಿ 2ನೇ ಹಂತ ಬೆಂಗಳೂರು – 560 072. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಭಾಗವತರು ಸಾಂಸ್ಕೃತಿಕ ಸಂಘಟನೆ ಕಳೆದ ಹತ್ತು ವರ್ಷಗಳಲ್ಲಿ ನಾಟಕೋತ್ಸವ, ವಿಚಾರ ಸಂಕಿರಣ, ಸಂಗೀತ ಮುಂತಾದ ವಿಭಿನ್ನ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದು, ಕನ್ನಡ ರಂಗಭೂಮಿಯ ಸೇವೆಗಾಗಿ ಗೌರವ ಡಾಕ್ಟರೇಟ್ ಪಡೆದಿರುವ ಎಂ.ಎಸ್. ಸತ್ಯು, ಮಾಸ್ಟರ್ ಹಿರಣ್ಣಯ್ಯ, ಬಿ. ಜಯಶ್ರೀ ಹಾಗೂ ಮುಖ್ಯಮಂತ್ರಿ ಚಂದ್ರು ಇವರುಗಳನ್ನು ಗೌರವಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಿದೆ. ಹಾಗೂ ಇದೇ ಸಂದರ್ಭದಲ್ಲಿ ರಂಗೋತ್ಸವ ಮತ್ತು ರಂಗಗೀತೆಗಳ ಕಾರ್ಯಕ್ರಮಗಳನ್ನು 2011 ಫೆಬ್ರವರಿ 1 ರಿಂದ 3 ರವರೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿರುವುದಾಗಿ ತಿಳಿಸಿ, ಪಾಲಿಕೆ ವತಿಯಿಂದ ಸದರಿ ಕಾರ್ಯಕ್ರಮಕ್ಕೆ ರೂ. 5,26,000/–(ರೂ. ಐದು ಲಕ್ಷದ ಇಪ್ಪತ್ತಾರು ಸಾವಿರ) ಗಳ ಧನ ಸಹಾಯವನ್ನು ನೀಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 108.35 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 21–01–2011ರ ಟಿಪ್ಪಣಿಯನ್ನು ಒಪ್ಪುತ್ತಾ ರೂ.2.00ಲಕ್ಷ (ಎರಡು ಲಕ್ಷ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/187/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ/ಅ)ಪಿಎಸ್ಆರ್(4)44/10–11 ದಿನಾಂಕ : 20–01–2011ರಲ್ಲಿ ವಿವರಿಸಿರುವಂತೆ, ಶ್ರೀ ಬಿ.ಎನ್. ವಾಸು, ಬೆಂಗಳೂರು ನಗರ ಸಲಹಾ ಸಮಿತಿ, ದಲಿತ ಸಂಘರ್ಷ ಸಮಿತಿ – ಕರ್ನಾಟಕ (ರಿ), ನಂ. 126, 1ನೇ ಕ್ರಾಸ್, ಬೃಂದಾವನ ನಗರ, ತಾವರೇಕೆರೆ, ಬೆಂಗಳೂರು–29. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, "ಅಸ್ಪೃಶ್ಯತೆಯನ್ನು ನಿರ್ಮೂಲನೆ ಸಾಪ್ತ:" ಜಾಗೃತಿ ಮೂಡಿಸಲು ಸಾಂಸ್ಕೃತಿಕ

ಕಾರ್ಯಕ್ರಮ ಹಾಗೂ ಬೀದಿ ನಾಟಕವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೊಳಗೇರಿ ಪ್ರದೇಶಗಳಲ್ಲಿ, ದಲಿತ ಕಲಾ ತಂಡದ 15 ಜನ ಕಲಾವಿದರಿಂದ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು, ಸಹಾಯ ಧನ ಬಿಡುಗಡೆ ಮಾಡಬೇಕೆಂದು ಮಾನ್ಯ ಕಾರ್ಯದರ್ಶಿಗಳಲ್ಲಿ ಮನವಿ ಮಾಡಿ, ಒಂದು ತಾಲ್ಲೂಕಿಗೆ ಕಾರ್ಯಕ್ರಮದ ಅಂದಾಜು ವೆಚ್ಚ ರೂ. 75,000/– ವಾಗಿದ್ದು, 5 ವಿಧಾನ ಸಭಾ ಕ್ಷೇತ್ರಗಳಿಗೆ ರೂ. 3,75,000/– ಗಳು ವೆಚ್ಚವಾಗಲಿರುವುದಾಗಿ ತಿಳಿಸಿ, ದಶಕಗಳಿಗೂ ಮೇಲ್ಪಟ್ಟು ದಲಿತರಲ್ಲಿ ಸ್ವಾಭೀಮಾನದ ಚಳುವಳಿಯನ್ನು ಕಟ್ಟುತ್ತಿರುವುದಾಗಿ, ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ನಡೆಸಿದ ನಿರಂತರ ಹೋರಾಟಗಳಲ್ಲಿ ನೋವು–ನಲಿವುಗಳನ್ನು ಕಂಡಿದ್ದೇವೆಂದು ಮೇಲಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂವಿಧಾನದನ್ವಯ ನ್ಯಾಯ ಮತ್ತು ಸಮತೆಯನ್ನು ಪಾಲಿಕೆ ವತಿಯಿಂದ ಆಶಿಸುತ್ತಿರುವುದಾಗಿ ತಿಳಿಸುತ್ತಾ, ಸಹಾಯ ಧನ ನೀಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000 (ರೂ. ಹತ್ತು ಸಾವಿರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ : 20–01–2011ರ ಟಿಪ್ಪಣಿಯನ್ನು ಒಪ್ಪಿದೆ.</u>

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/188/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)122/10–11 ದಿನಾಂಕ:20–01–2011ರಲ್ಲಿ ವಿವರಿಸಿರುವಂತೆ, ಪದ್ಮಶ್ರೀ ಡಾ॥ ಬಿ. ಎಲ್. ಎಸ್. ಮೂರ್ತಿ, ಅಧ್ಯಕ್ಷರು, ಅಶಕ್ತ ಪೋಷಕ ಸಭಾ, ಅಶಕ್ತ ಪೋಷಕ ಸಭಾ ರಸ್ತೆ, ವಿ.ವಿ. ಪುರಂ, ಬೆಂಗಳೂರು – 560 004. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ಕಳೆದ 87 ವರ್ಷಗಳಿಂದ ಹಿರಿಯ ನಾಗರೀಕರಿಗೆ ಮತ್ತು ಅನಾಥ ಮಕ್ಕಳಿಗೆ ಉಚಿತ ಊಟ, ವಸತಿ, ಬಟ್ಟೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದ್ದು, 168 ಹಿರಿಯ ನಾಗರೀಕರು ಮತ್ತು 39 ಅನಾಥ ಮಕ್ಕಳು ಆಶ್ರಯ ಪಡೆದಿದ್ದಾರೆಂದು ತಿಳಿಸಿ, ಪಾಲಿಕೆ ವತಿಯಿಂದ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸಲು ರೂ. 5.00 ಲಕ್ಷಗಳ ಸಹಾಯಧನವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ

ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (34) ರಲ್ಲಿ ಅಶಕ್ತ ಪೋಷಕ ಸಭಾ ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಮಾನ್ಯ ಆಯುಕ್ತರ ದಿನಾಂಕ : 20–01–2011ರ ಟಿಪ್ಪಣಿಯನ್ನು ಒಪ್ಪಿದೆ.

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/189/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಉ.ಎ3(4)/ಪಿ.ಆರ್/137/10–11, ದಿನಾಂಕ:18–01–2011ರಲ್ಲಿ ವಿವರಿಸಿರುವಂತೆ, ಹೊಂಬೇಗೌಡ ನಗರದಲ್ಲಿ ನಗರ ಪಾಲಿಕೆಯ 116+148/2X120+124/2 ಅಡಿಗಳ ನಿವೇಶನವನ್ನು 20 ವರ್ಷಗಳ ಅವಧಿಗೆ 07–11–1956ರಿಂದ ಗುತ್ತಿಗೆ ನೀಡಲಾಗಿತ್ತು ತದನಂತರ ಮತ್ತೆ 30 ವರ್ಷಗಳ ಅವಧಿಗೆ ಒಟ್ಟಾರೆ ನಿವೇಶನ 172+144/2 x 127+124/2 ಅಳತೆಯನ್ನು ದಿ: 27–12–1995ರ ಸರ್ಕಾರಿ ಅದೇಶದಂತೆ ಪ್ರಸ್ತುತ ಮಾರುಕಟ್ಟೆ ಬೆಲೆಯ ಮೇಲೆ ಶೇ 12%ರಷ್ಟು ವಾರ್ಷಿಕ ಗುತ್ತಿಗೆ ನಿಗದಿಪಡಿಸಿ ನವೀಕರಿಸಲಾಗಿರುತ್ತದೆ. ತದನಂತರ ಪಾಲಿಕೆಯ ಆಯುಕ್ತರು ಹೆಚ್ಚಿನ ದರ ನಿಗದಿಪಡಿಸಲು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ದಿನಾಂಕ: 30–03–2001ರಲ್ಲಿ ಮೊದಲು ಗುತ್ತಿಗೆಗೆ ನೀಡಿದ ಆದೇಶವನ್ನು ರದ್ದುಪಡಿಸಿದೆ. ಕ್ಲಬ್‌ನವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ದಿನಾಂಕ:15–10–2003ರಲ್ಲಿ ಅಂತಿಮವಾಗಿ ಆಗಿರುವ ಆದೇಶದಲ್ಲಿ ಪರಿಷ್ಕೃತ ಸರ್ಕಾರಿ ಆದೇಶ ರದ್ದುಪಡಿಸಿ ಹೊಸದಾಗಿ ನೋಟಿಸ್ ನೀಡಿ ತಿರ್ಮಾನಿಸಲು ಆದೇಶಿಸಿರುತ್ತದೆ. ಈ ಆದೇಶದನ್ವಯ ಸರ್ಕಾರವು ಸಂಸ್ಥೆಗೆ ನೋಟಿಸ್ ನೀಡಿ ವಿಚಾರಣೆಯ ನಂತರ ದಿನಾಂಕ: 04–03–2004ರ ಆದೇಶದಲ್ಲಿ ಪ್ರಸಕ್ತ ಮಾರುಕಟ್ಟೆ ಬೆಲೆಗೆ ವಿಲೆವಾರಿ ಮಾಡಲು ಆದೇಶಿಸಿದೆ. ಅಲ್ಲದೆ ದಿ: 07–11–1976ರಿಂದ ಸ್ವತ್ತಿನ ಕ್ರಯಪತ್ರ ಮಾಡುವವರೆಗೆ ಮಾರುಕಟ್ಟೆ ಬೆಲೆಯ 12ರಷ್ಟನ್ನು ಬಾಡಿಗೆ ರೂಪದಲ್ಲಿ ಪಾವತಿಸುವಂತೆ ಸಂಸ್ಥೆಗೆ ಆದೇಶಿಸಿದೆ.

ದಿನಾಂಕ 29–08–2008ರಲ್ಲಿ ಮತ್ತು 17–03–2009ರಲ್ಲಿ ಸಹಾಯಕ ಕಂದಾಯ ಅಧಿಕಾರಿ (ಹೊಂಬೇಗೌಡ ನಗರ) ಇವರು ರೂ. 21415320/– ಸ್ವತ್ತಿನ ಮುಖ ಬೆಲೆಯನ್ನಾಗಿ ಹಾಗೂ 76–77ರಿಂದ 2009ರ ವರೆಗೆ ಸರ್ಕಾರಿ ಆದೇಶದಂತೆ ರೂ. 37543424/– ಪಾವತಿಸಲು ಸಂಸ್ಥೆಗೆ ತಿಳಿಸಲಾಗಿರುತ್ತದೆ. ವಿಲ್ಸನ್ ಗಾರ್ಡನ್ ಕ್ಲಬ್‌ನವರು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಡಬ್ಲ್ಯು ಎ ನಂ1779/2007 (LBRES) ಸರ್ಕಾರಿ ಆದೇಶದ ವಿರುದ್ದ ಸಲ್ಲಿಸಿದ ಮೇಲ್ಮನವಿಯನ್ನು ದಿನಾಂಕ 30–07–2008ರ ಆದೇಶದಲ್ಲಿ ಮೇಲ್ಮನವಿಯನ್ನು ತೀರಸ್ಕರಿಸಿ ಎರಡು ತಿಂಗಳ ಅವದಿಯ ಒಳಗಡೆ ಸರ್ಕಾರಿ ಆದೇಶದಂತೆ ಹಣ ಸಂದಾಯ ಮಾಡಲು ಸೂಚಿಸಿದೆ.

ದಿನಾಂಕ 15–09–2010ರಂದು ಸಂಸ್ಥೆಯು ಮತ್ತೆ ಮನವಿ ಸಲ್ಲಿಸಿ ಸಂಸ್ಥೆಯು ಸಮಾಜಿಕ ಚಟುವಟಿಕೆಗಳಲ್ಲಿ ನಿರತವಾಗಿದ್ದು, ಲಾಭದಾಯಕ ಕಾರ್ಯಕ್ರಮಗಳನ್ನು ಹೊಂದಿರದೇ ಇರುವುದರಿಂದ ಸರ್ಕಾರವು ಬೆಂಗಳೂರಿನ ಇಂಡಿಯನ್ ಜಿಮ್‌ಖಾನಾ ಕ್ಲಬ್‌ಗೆ ಪ್ರತಿ ಎಕರೆಗೆ ರೂ.60,000/–ಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ನಿಗದಿಪಡಿಸಲು ಅಥವಾ 1976ರಲ್ಲಿ ಜಮೀನಿನ ಬೆಲೆ ಪ್ರತಿ ಚದರ ಅಡಿಗೆ ರೂ.30ರ ಲೆಕ್ಕದಂತೆ ಆಗುವ ರೂ. 2427069/– ನಿಗದಿಪಡಿಸಲು ಕೋರಿರುತ್ತಾರೆ.

ಸ್ಥಳೀಯ ಅಧಿಕಾರಿಗಳು ಸಂಸ್ಥೆಯ ಮನವಿಯನ್ನು ಪಾಲಿಕೆ ಮತ್ತು ಆಯುಕ್ತರ ಅವಗಾಹನೆಗೆ ತರಲು ಕೋರಿರುತ್ತಾರೆ. ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ದಿನಾಂಕ: 30–07–2008ರಲ್ಲಿ ನೀಡಿರುವ ನಿರ್ದೇಶನ ಹಾಗೂ ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಪಾಲಿಕೆಯ ಹಿತವನ್ನು ಗಣನೆಗೆ ತೆಗೆದುಕೊಂಡು ಸಂಸ್ಥೆಯ ಮನವಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾಪಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

–ಮುಂದೂಡಿದೆ–

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/190/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಸಿ.ಎ.ಒ/ಪಿಆರ್/20/2010–11 ದಿನಾಂಕ:25–01–2011ರಲ್ಲಿ ವಿವರಿಸಿರುವಂತೆ, ನಿಮಾನ್ಸ್ ರಸ್ತೆಯಲ್ಲಿ ನೀರಿನ ಕೊಳವೆಸೋರುವಿಕೆಯಿಂದ ಆಗಾಗ್ಗೆ ಹಾಳಾಗುತ್ತಿರುತ್ತದೆ. ಈ ವಿಷಯವನ್ನು ಮನಗೊಂಡು ಜಲ ಮಂಡಳಿಯವರಿಗೆ ಈ ಕೊಳವೆಗಳನ್ನು ಬದಲಾಯಿಸಲು ಪತ್ರಗಳನ್ನು ಬರೆಯಲಾಗಿ, ನೀರಿನ ಲೀಕೆಜ್‌ನ್ನು ತಡೆಗಟ್ಟಲು ಹೊಸದಾಗಿ ಕೊಳವೆಗಳನ್ನು ಅಳವಡಿಸಲು ರಸ್ತೆಯನ್ನು ಅಗೆದಿರುತ್ತಾರೆ. *ಈ* ಸಂಬಂಧ ಸಂಚಾರಿ ಪೋಲಿಸ್ ಹಾಗೂ

ನೀರು ಸರಬರಾಜು ಮಂಡಳಿ, ಮಹಾನಗರ ಪಾಲಿಕೆ ಸಮನ್ವಯ ಸಮಿತಿಯಲ್ಲಿ ನೀರು ಕೊಳವೆ ಮಾರ್ಗ ಬದಲಿಸುವ ಕಾರ್ಯವನ್ನು ಜಲ ಮಂಡಳಿ ತೆಗೆದುಕೊಳ್ಳುವುದು, ರಸ್ತೆ ರಿಪೇರಿ ಕಾರ್ಯ, ಮೀಡಿಯನ್ ಹಾಗೂ ಪಾದಚಾರಿ ರಸ್ತೆಯ ಅಭಿವೃದ್ಧಿ ಕಾರ್ಯವನ್ನು ಮಹಾನಗರ ಪಾಲಿಕೆಯು ತೆಗೆದುಕೊಳ್ಳಲು ಹಾಗೂ ಬದಲಿ ಮಾರ್ಗವನ್ನು ಸಂಚಾರಿ ಪೋಲೀಸ್ ನವರು ತೆಗೆದುಕೊಳ್ಳಲು ತೀರ್ಮಾನಿಸಲಾಗಿರುತ್ತದೆ. ಅದರಂತೆ, ಬೆಂಗಳೂರು ಜಲ ಮಂಡಳಿಯವರು ಕೊಳವೆ ಬದಲಾಯಿಸುವ ಕಾರ್ಯವನ್ನು ತೆಗೆದುಕೊಂಡಿರುತ್ತಾರೆ. ಪ್ರಸ್ತುತ ಮಹಾನಗರ ಪಾಲಿಕೆಯಿಂದ ರಸ್ತೆ ರಿಪೇರಿ ಕಾರ್ಯವನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಇದಕ್ಕಾಗಿ ರೂ.165.50ಲಕ್ಷಗಳು ಅಗತ್ಯವಾಗಿರುತ್ತದೆ.

ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ–0541 ಲೆಕ್ಕ ಶೀರ್ಷಿಕೆಯಲ್ಲಿ ಅನುದಾನ ಲಭ್ಯವಿಲ್ಲದ ಕಾರಣ, ಈ ವರ್ಷದ ಪರಿಷ್ಕೃತ ಆಯವ್ಯಯದಲ್ಲಿ ಹೊಂದಾಣಿಕೆ ಮಾಡಿಕೊಂಡು ಕಾಮಗಾರಿಯನ್ನು ನಿರ್ವಹಿಸಬೇಕಾಗಿರುತ್ತದೆ, ಆದ್ದರಿಂದ ಈ ಹೊಂದಾಣಿಕೆ ಮಾಡಿಕೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮತಿ ಕೋರಿ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 25–01–2011ರ ಟಿಪ್ಪಣಿಯನ್ನು ಒಪ್ಪಿದೆ.

## 07]. ವಿಷಯದ ಸಂಖ್ಯೆ :–ತೆಆಸ್ಥಾಸ/191/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ರಾರಾನ/ಪಿಆರ್/ಸಾ/10–11/2827 ದಿನಾಂಕ: 01–02–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ, 40 ದೊಡ್ಡ ಬಿದರಕಲ್ಲು ಇದು ರಾಜರಾಜೇಶ್ವರನಗರ ವಲಯಕ್ಕೆ ಸಂಬಂದಿಸಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುತ್ತದೆ. ಇಲ್ಲಿ ಸಾರ್ವಜನಿಕರಿಗೆ ಅತ್ಯಗತ್ಯವಾಗಿ ಬೇಕಾಗಿರುವ ಅಭಿವೃದ್ಧಿ ಕೆಲಸಗಳು ಸಾಕಷ್ಟು ಆಗಬೇಕಾಗಿದ್ದು, ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಾಗಿರುತ್ತದೆ. ಈ ಬಗ್ಗೆ ಸ್ಥಳೀಯ ನಗರ ಪಾಲಿಕೆ ಸದಸ್ಯರು ಮನವಿ ಪತ್ರವನ್ನು ನೀಡಿ ಈ ವಾರ್ಡಿನಲ್ಲಿ ಕುಡಿಯುವ ನೀರಿಗೆ ತುಂಬಾ ಅಭಾವ ವಿದ್ದು ಸದರಿ ಪ್ರದೇಶವು ಗ್ರಾಮ ಪಂಚಾಯ್ತಿ ವ್ಯಾಪ್ತಿಯಿಂದ ಹೊಸದಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸೇರ್ಪಡೆಯಾಗಿದ್ದು, ಬಹಳ ಹಿಂದುಳಿದ ಪ್ರದೇಶವಾಗಿದ್ದು ಇಲ್ಲಿನ ನಿವಾಸಿಗಳು ಮೂಲಭೂತ ಸೌಕರ್ಯದಿಂದ ವಂಚಿತರಾಗಿದ್ದು, ಮುಖ್ಯವಾಗಿ ಕುಡಿಯುವ ನೀರಿನ ವ್ಯವಸ್ಥೆ ಮುಖ್ಯವಾಗಿ ಆಗಬೇಕಾಗಿರುತ್ತದೆ ಎಂದು ಕೋರಿರುತ್ತಾರೆ. ಈ ಬಗ್ಗೆ ಉಪ ಆಯುಕ್ತರು (ಭೂಸ್ವಾಧೀನ)ರವರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿ ಒಂದು ಟಿಪ್ಪಣಿಯನ್ನು ಸಹ ಮಂಡಿಸಿರುತ್ತಾರೆ. ಸದರಿ ಟಿಪ್ಪಣಿಯಲ್ಲಿ ಈ ವಿಭಾಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯು ಜರೂರಾಗಿ ಕೈಗೊಳ್ಳಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಈ ಹಿನ್ನಿಲೆಯಲ್ಲಿ, 2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ 93ರಲ್ಲಿನ ನೀರು ಸರಬರಾಜು ಹೊಸ ಪ್ರದೇಶಗಳು ಪಿ–1802 ಲೆಕ್ಕಶೀರ್ಷಿಕೆಯಡಿ ಕಾಮಗಾರಿ ಸಂಕೇತ (ಜಾಬ್ ಕೋಡ್) ನೀಡಲು ಸದರಿ ವಲಯಲ್ಲಿ ಅನುಬಂಧಲ್ಲಿ ತೋರಿಸಿರುವ 16 ಕಾಮಗಾರಿಗಳಿಗೆ ಕೊಳವೆಬಾವಿ ಕೊರೆಯುವ ಹಾಗೂ ಪೈಪ್ ಲೈನ್ ಅಳವಡಿಸುವ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆ ಬೆಂಗಳೂರು ವೃತ್ತ ರವರ 2010–11ನೇ ಸಾಲಿನ ದರಪಟ್ಟಿಗಳ ದರಗಳನ್ನು ಅಳವಸಿಕೊಂಡು ಅಂದಾಪಟ್ಟಿಯನ್ನು ತಯಾರಿಸಿದ್ದು. ಮೊತ್ತ ರೂ. 159.65ಲಕ್ಷಗಳು ಎಂದು ನಮೂದಿಸಲಾಗಿದ್ದು. ವಾರ್ಡ್ ಸಂಖ್ಯೆ 40 ದೊಡ್ಡಬಿದರಕಲ್ಲು ವಿಭಾಗಕ್ಕೆ 16 ಕಾಮಗಾರಿಗಳಲ್ಲಿ ಅಗತ್ಯವಾಗಿ ಬೇಕಾಗಿರುವ ಒಟ್ಟು ಕೊಳವೆ ಬಾವಿಗಳನ್ನು ಜರೂರಾಗಿ ಕೊರೆದು ಅದಕ್ಕೆ ಸಂಬಂಧಪಟ್ಟ ಪಂಪ್ ಮೋಟರು, ಪೈಪ್‌ಗಳನ್ನು, ಟ್ಯಾಂಕುಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಹಾಗೂ ಇತ್ಯಾದಿ ಸಲಕರಣೆಗಳನ್ನು ಒದಗಿಸಿ ನೀರು ಸರಬರಾಜು ಮಾಡುವ ಒಟ್ಟಾರೆ ಕಾಮಗಾರಿಗೆ ತಗಲುವ ವೆಚ್ಚ ರೂ. 159.65ಲಕ್ಷಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

ನಿರ್ಣಯ :– ಆಯುಕ್ತರ ದಿನಾಂಕ : 01–02–2011ರ ಟಿಪ್ಪಣಿಯನ್ನು ಒಪ್ಪಿದೆ.

## 08]. ವಿಷಯದ ಸಂಖ್ಯೆ :–ತೆಆಸ್ಥಾಸ/192/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/132/10–11, ದಿನಾಂಕ:9–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ಸಂಖ್ಯೆ:154ರಲ್ಲಿರುವ 3ನೇ ಮುಖ್ಯರಸ್ತೆ ಟಾಟಾ ಸಿಲ್ಕ್ ಫಾರಂ, ಕೆ.ಆರ್.ರಸ್ತೆಯಲ್ಲಿರುವ ಪಾಲಿಕೆಯ ಶಿಶುವಿಹಾರದಲ್ಲಿನ 400 ಚದರ ಅಡಿ ಕಟ್ಟಡವನ್ನು ಮನೋನಂದನ ಟ್ರಸ್ಟ್ (ರಿ) ರವರಿಗೆ ಬುದ್ದಿಮಾಂದ್ಯ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಸಲುವಾಗಿ ದಿನಾಂಕ:01–01–2007 ರಿಂದ 3 ವರ್ಷಗಳ ಅವಧಿಗೆ ಉಚಿತವಾಗಿ ಗುತ್ತಿಗೆ ನೀಡಿದ್ದು, ದಿನಾಂಕ:31–12–2009 ಕ್ಕೆ ಅವಧಿ ಮುಕ್ತಾಯಗೊಂಡಿರುತ್ತದೆ.

ಸದರಿ ಮನೋನಂದನ ಟ್ರಸ್ಟ್ (ರಿ) ರವರು ಮನವಿಯಲ್ಲಿ ಈ ಸಂಸ್ಥೆಗೆ ನೀಡಿದ್ದ ಗುತ್ತಿಗೆ ಅವಧಿ ಮುಗಿದಿದ್ದು, ಈ ಸಂಸ್ಥೆಯು ಬುದ್ದಿಮಾಂದ್ಯ ಮಕ್ಕಳಿಗೆ ಶಿಕ್ಷಣವನ್ನು ಉಚಿತವಾಗಿ ನೀಡುತ್ತಿರುವುದರಿಂದ ಮತ್ತೆ ಮೂರು ವರ್ಷಗಳ ಅವಧಿಗೆ ಉಚಿತವಾಗಿ ಗುತ್ತಿಗೆ ನವೀಕರಿಸುವಂತೆ ಕೋರಿರುತ್ತಾರೆ.

ವಲಯಾಧಿಕಾರಿಗಳು ಟ್ರಸ್ಟ್ ವತಿಯಿಂದ ಬುದ್ಧಿಮಾಂದ್ಯ ಮಕ್ಕಳಿಗೆ ಉಚಿತವಾಗಿ ಶಿಕ್ಷಣ ತರಬೇತಿ ಕಾರ್ಯಕ್ರಮ ನಡೆಸುತ್ತಿದ್ದು, ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆಯಾಗಿರುವುದಿಲ್ಲ. ಆದುದರಿಂದ, ಗುತ್ತಿಗೆ ಅವಧಿಯನ್ನು ಉಚಿತವಾಗಿ ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸದರಿ ಸಂಸ್ಥೆಯು ಸಾಮಾಜಿಕ ಕಳಕಳಿಯಂತಹ ಕಾರ್ಯಕ್ರಮ ನಡೆಸುತ್ತಿದ್ದು, ಗುತ್ತಿಗೆ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಜಾರಿಗೆ ಬರುವಂತೆ ನಾಮಮಾತ್ರ ಮಾಸಿಕ ಗುತ್ತಿಗೆ ಹಣ ರೂ.100/– ಗಳನ್ನು ನಿಗಧಿಪಡಿಸಿ, 5 ವರ್ಷಗಳ ಅವಧಿಗೆ ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯವರಿಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:9–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

ನಿರ್ಣಯ :– ಆಯುಕ್ತರ ದಿನಾಂಕ : 09–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.

## 09]. ವಿಷಯದ ಸಂಖ್ಯೆ :–ತೆಆಸ್ಥಾಸ/193/2010–11

ಮಾನ್ಯ ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/161/10–11, ದಿನಾಂಕ:27–12–2010 ರಲ್ಲಿ ವಿವರಿಸಿರುವಂತೆ, ದಕ್ಷಿಣ ವಲಯ ವಾರ್ಡ್ ಸಂಖ್ಯೆ:155 ಗವಿಪುರ ಗುಟ್ಟಹಳ್ಳಿ ನಗರ ಪಾಲಿಕೆ ಸಮುದಾಯ ಭವನದಲ್ಲಿನ ತಳ ಮಹಡಿ ಕಟ್ಟಡದ ವಿಸ್ತೀರ್ಣ 6500 ಚದರ ಅಡಿ ಹಾಗೂ ಪೂರ್ವ ಭಾಗದ ಖಾಲಿ ನಿವೇಶನ 13885 ಚದರ ಅಡಿಗಳನ್ನು ಅದಮ್ಯ ಚೇತನ ಫೌಂಡೇಷನ್‌ರವರಿಗೆ ಮಕ್ಕಳಿಗೆ ಬಿಸಿಯೂಟ ತಯಾರಿಸಿ ಉಚಿತವಾಗಿ ಶಾಲೆಗಳಿಗೆ ಸರಬರಾಜು ಮಾಡುವ ಉದ್ದೇಶಕ್ಕೆ 2004 ರಿಂದ 5 ವರ್ಷದ ಅವಧಿಗೆ ಉಚಿತವಾಗಿ ಗುತ್ತಿಗೆ ಆಧಾರದ ಮೇಲೆ ನೀಡಿದ್ದು, ದಿನಾಂಕ:25–05–2009 ರಿಂದ ಮತ್ತೆ 5 ವರ್ಷದ ಅವಧಿಗೆ ಮಾಸಿಕ ಗುತ್ತಿಗೆ ರೂ.1000/– ಗಳಿಗೆ ಗುತ್ತಿಗೆ ನೀಡಲಾಗುತ್ತಿದೆ. ಈ ಗುತ್ತಿಗೆ ಅವಧಿಯು ದಿನಾಂಕ : 24–5–2014 ಕ್ಕೆ ಮುಕ್ತಾಯಗೊಳ್ಳಲಿದೆ.

ಅದಮ್ಯ ಚೇತನ ಫೌಂಡೇಷನ್ ರವರು ನಿಗದಿಪಡಿಸಲಾಗಿರುವ ಗುತ್ತಿಗೆ ಹಣಕ್ಕೆ ವಿನಾಯಿತಿ ನೀಡಿ ಗುತ್ತಿಗೆ ಅವಧಿಯು 30 ವರ್ಷಗಳಿಗೆ ಮುಂದುವರೆಸಲು ಕೋರಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಪ್ರಸ್ತಾವನೆಗೆ ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾಪಿಸಿರುತ್ತಾರೆ. ಈಗಾಗಲೇ ಮಾಸಿಕ ಗುತ್ತಿಗೆ ರೂ.1000/– ಗಳಿಗೆ ನಿಗದಿಪಡಿಸಿರುವಂತೆ ಮೇ 2014 ರ ನಂತರದ 5 ವರ್ಷಗಳಿಗೆ ನವೀಕರಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:27–12–2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

ನಿರ್ಣಯ :– ಆಯುಕ್ತರ ದಿನಾಂಕ : 27–12–2010ರ ಟಿಪ್ಪಣಿಯನ್ನು ಒಪ್ಪುತ್ತಾ ಗುತ್ತಿಗೆ ಅವಧಿಯನ್ನು 30ವರ್ಷಗಳ (ಮೂವತ್ತು ವರ್ಷಗಳ) ಅವಧಿಗೆ ನೀಡುವುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.

## 10]. ವಿಷಯದ ಸಂಖ್ಯೆ :–ತೆಆಸ್ಥಾಸ/194/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎಲ್.ಎ.ಕ್ಯೂ/ಸಿಆರ್/32/2010–11, ದಿನಾಂಕ:6–1–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜರಾಜೇಶ್ವರಿನಗರ ವಾರ್ಡ್ ಸಂಖ್ಯೆ: 129ರ ವ್ಯಾಪ್ತಿಯಲ್ಲಿ ಬರುವ ಯಶವಂತಪುರ ಹೋಬಳಿ, ಮಲ್ಲತ್‌ಹಳ್ಳಿ ಗ್ರಾಮದ ಸ.ನಂ.42 ರ ಜ್ಞಾನಭಾರತಿ ಬಡಾವಣೆಯ ಜ್ಞಾನಜ್ಯೋತಿನಗರದ ಸ್ವತ್ತಿನ ಸಂಖ್ಯೆ: 47 ರಲ್ಲಿ 288.25 ಚ.ಅ. ಜಾಗವನ್ನು ರಸ್ತೆ ನಿರ್ಮಾಣಕ್ಕೆ ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು, ಲಗ್ಗೆರೆ ಉಪವಿಭಾಗ ಹಾಗೂ ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು ಶಿಫಾರಸ್ಸು ಮಾಡಿರುತ್ತಾರೆ.

ಈ ಪ್ರಸ್ತಾವನೆ ಪರಿಶೀಲಿಸಲಾಗಿ ಮಲ್ಲತ್‌ಹಳ್ಳಿ ಗ್ರಾಮದ ಸ.ನಂ. 42 ರ ಪೈಕಿ 2.2 ಗುಂಟೆ ಜಮೀನನ್ನು ಶ್ರೀ ಶಿವಾನಂದ ಬಿನ್ ಮರಿಲಿಂಗಪ್ಪನವರು ಶ್ರೀ ಡಿ.ಕೆ.ನಾಗರಾಜ ಬಿನ್ ಕಪನೀಪತಿಶಾಸ್ತ್ರಿ ಇವರಿಂದ ಎಸ್.ಆರ್.ನಂ. 6949/80–81, ದಿನಾಂಕ: 25–08–1980 ರಂದು ಕ್ರಯಕ್ಕೆ ಪಡೆದಿರುತ್ತಾರೆ. ನಂತರ, ಶ್ರೀ ಶಿವಾನಂದ ಬಿನ್ ಮರಿಲಿಂಗಪ್ಪನವರು ಶ್ರೀ ಎಸ್.ನಟರಾಜ್ ಬಿನ್ ಎಸ್.ಸಿದ್ದಪ್ಪ ಇವರಿಗೆ ಎಸ್.ಆರ್.ನಂ. 31765/2004–05, ದಿನಾಂಕ: 23–10–2004 ರಂದು ಮಲ್ಲತ್‌ಹಳ್ಳಿ ಗ್ರಾಮದ ಗ್ರಾಮಠಾಣಕ್ಕೆ ಸೇರಿದ ಖಾತೆ ನಂ. 42, ಅಸೆಸ್‌ಮೆಂಟ್ ನಂ. 42 ರಲ್ಲಿರುವ ಸ್ವತ್ತಿನ ಪೈಕಿ 47 ನೇ ನಂಬರಿನ. 57 X (27+18)/2 = 1282.5 ಚ.ಅ. ಜಾಗವನ್ನು ಕ್ರಯಕ್ಕೆ ನೀಡಿರುತ್ತಾರೆ. ಈ ಆಸ್ತಿಯನ್ನು ಕಂದಾಯಾಧಿಕಾರಿಗಳು, ರಾಜರಾಜೇಶ್ವರಿನಗರ ಸಭೆ, ಬೆಂಗಳೂರು. ಇವರು ದಿನಾಂಕ: 08–12–2006 ರಂದು ನಮೂನೆ–III ರಲ್ಲಿ ನೀಡಿರುವ ದಾಖಲಾತಿಯಲ್ಲಿ ಕ್ರಮಸಂಖ್ಯೆ: 117 ರಲ್ಲಿ ನಟರಾಜ ಬಿನ್ ಸಿದ್ದಪ್ಪ ಇವರ ಹೆಸರಿಗೆ ದಾಖಲು ಮಾಡಿರುತ್ತಾರೆ.

ಆದರೆ ಮಲ್ಲತ್‌ಹಳ್ಳಿ ಗ್ರಾಮದ ಸ.ನಂ.42 ರ 2009–10 ನೇ ಸಾಲಿನ ಆರ್.ಟಿ.ಸಿ ಪರಿಶೀಲಿಸಲಾಗಿ, ಈ ಸ.ನಂ.ನಂಬರ್‌ನ ವಿಸ್ತೀರ್ಣ 2 ಎಕರೆ ಇದ್ದು ಆಕಾರ 6 ರೂ. 72 ಪೈಸೆ ಇರುತ್ತದೆ. ಇದು ಶ್ರೀ ವೆಂಕಟೇಶ್ ಇವರ ಖಾತೆಯಲ್ಲಿ ದಾಖಲಾಗಿರುತ್ತದೆ. ಆದರೆ ಮೇಲ್ಕಂಡ ಶ್ರೀ ಶಿವಾನಂದ ಬಿನ್ ಮರಿಲಿಂಗಪ್ಪನವರು ಮತ್ತು ಶ್ರೀ ಎಸ್.ನಟರಾಜ್ ಬಿನ್ ಎಸ್.ಸಿದ್ದಪ್ಪನವರು ನಿವೇಶನಗಳನ್ನು ಕ್ರಯಕ್ಕೆ ಪಡೆದಿದ್ದರೂ, ಅವರುಗಳ ಹೆಸರುಗಳು ಪಹಣಿಯಲ್ಲಿ ನಮೂದಾಗಿರುವುದಿಲ್ಲ. ಭೂಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಿರುವ ಈ ಸ್ವತ್ತಿನ ಸ್ಥಳ ತನಿಖೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು ದಿನಾಂಕ: 13–9–2010 ರಂದು ನಡೆಸಲಾಗಿದೆ.

ಸ್ವತ್ತಿನ ಮಾಲೀಕರು ಸಲ್ಲಿಸಿರುವ ಕ್ರಯ ಪತ್ರದಂತೆ ಸದರಿ ನಿವೇಶನದ ಅಳತೆ ಒಟ್ಟು: 1282.50 ಚ.ಅ. ಇದ್ದು, ಸ್ಥಳದಲ್ಲಿ ಅಳತೆ ಮಾಡಿದಾಗ, ಹಾಲಿ ನಿವೇಶನದಲ್ಲಿರುವ ಮನೆ ಮತ್ತು ತಾತ್ಕಾಲಿಕ ಶೆಡ್ ಇರುವ ಒಟ್ಟು ವಿಸ್ತೀರ್ಣ ಕ್ರಯ ಪತ್ರದ ಅಳತೆಗೆ ತಾಳೆಯಾಗುತ್ತದೆ ಹಾಗೂ ತಾತ್ಕಾಲಿಕ ಶೆಡ್ ರಸ್ತೆಯ ಮಧ್ಯದವರೆಗೂ ಬಂದಿರುತ್ತದೆ. ಇದು ಅನುಮೋದಿತವಲ್ಲದ ಖಾಸಗಿ ಲೇಔಟ್‌ನಲ್ಲಿರುವ (unapproved revenue layout) ನಿವೇಶನವಾಗಿದ್ದು,

ಕ್ರಯ ಪತ್ರದ ಚಕ್ಕುಬಂದಿಯಲ್ಲಿ ಉತ್ತರಕ್ಕೆ ಮಾತ್ರ ರಸ್ತೆ ಇದ್ದು, ಉಳಿದ ಮೂರು ಕಡೆ ಬೇರೆಯವರ ಸ್ವತ್ತುಗಳು ಇರುತ್ತವೆ. ಈ ಖಾಸಗಿ ಲೇಔಟನ ಹಿಂಭಾಗ (ದಕ್ಷಿಣ) ಹಾಗೂ ಪಶ್ಚಿಮಕ್ಕೆ ಬೇರೆ ಎರಡು ಅನುಮೋದಿತವಲ್ಲದ ಖಾಸಗಿ ಲೇಔಟ್‌ಗಳು ನಿರ್ಮಾಣವಾಗಿದ್ದು, ಆ ಲೇಔಟ್‌ಗಳ ರಸ್ತೆಗಾಗಿ ನನ್ನ ಜಾಗದಲ್ಲಿದ್ದ ಕಾಂಪೌಂಡ್ ಹೊಡೆದು ಹಾಕಿ, ರಸ್ತೆ ನಿರ್ಮಾಣ ಮಾಡಿರುತ್ತಾರೆಂದು ಸ್ವತ್ತಿನ ಮಾಲೀಕರು ತಿಳಿಸಿರುತ್ತಾರೆ. ಆದರೆ ಸದರಿ ನಿವೇಶನವನ್ನು ನಾನು ಕ್ರಯಕ್ಕೆ ಕೊಂಡಿದ್ದು, ಕಾನೂನಿನಂತೆ ಪರಿಹಾರ ನೀಡದೆ ಬಿಟ್ಟುಕೊಡಲು ಸಾಧ್ಯವಿಲ್ಲವೆಂದೂ, 2006 ರವರೆಗೂ ಕಂದಾಯ ಕಟ್ಟಿದ್ದು, ಹಿಂದಿನ ರಾಜರಾಜೇಶ್ವರಿನಗರ ನಗರಸಭೆಯ ಕಂದಾಯ ರಶೀತಿ ದಾಖಲೆ ಪ್ರತಿಯನ್ನು ಸಲ್ಲಿಸಿರುತ್ತಾರೆ. ಹಿಂದಿನ ನಗರ ಸಭೆಯಲ್ಲಿ ಕಟ್ಟಡ ಕಟ್ಟಲು ಪರವಾನಗಿ ಸಹ ಪಡೆದಿದ್ದು, ಆ ಬಗ್ಗೆ ಸಹ ದಾಖಲೆ ಹಾಜರು ಪಡಿಸಿರುತ್ತಾರೆ.

ಸ್ಥಳ ತನಿಖೆಯಲ್ಲಿ ಕಂಡು ಬಂದಂತೆ, ಖಾಸಗಿ ಲೇಔಟ್‌ನಲ್ಲಿ ನಿರ್ಮಾಣ ಮಾಡಲಾಗಿರುವ 30 ಅಡಿ ರಸ್ತೆಗೆ ಅಡ್ಡಲಾಗಿರುವ ಶ್ರೀ ನಟರಾಜ್ ರವರ ನಿವೇಶನವನ್ನು ತೆರವುಗೊಳಿಸುವುದು ಸೂಕ್ತವಾಗಿರುತ್ತದೆ. ಸದರಿ ನಿವೇಶನ ನಟರಾಜ್ ರವರಿಗೆ ಕ್ರಯ ಪತ್ರದ ಮೂಲಕ ನೊಂದಣಿಯಾಗಿರುವುದರಿಂದಲೂ, ಪ್ರಸ್ತುತ ಈ ಪ್ರದೇಶ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಬಂದಿರುವುದರಿಂದಲೂ, ಈ ಸ್ವತ್ತಿನಲ್ಲಿ ರಸ್ತೆಗೆ ಅವಶ್ಯವಿರುವ ಭಾಗಶ: 288.25 ಚ.ಅ ವಿಸ್ತೀರ್ಣವನ್ನು ಭೂಸ್ವಾಧೀನ ಪಡಿಸಿಕೊಂಡು ಭೂಪರಿಹಾರ ಪಾವತಿಸಬೇಕಾಗುತ್ತದೆ.

ಇದು ಪರಿವರ್ತನೆಯಾಗದ/ ಅನುಮೋದನೆಯಾಗದ ಖಾಸಗಿ ಬಡಾವಣೆಯ ನಿವೇಶನವಾಗಿದ್ದರೂ ಸಹ ಹಿಂದಿನ ನಗರಸಭೆಯಲ್ಲಿ ಖಾತೆಯಾಗಿರುವುದರಿಮದ, ಈ ನಿವೇಶನಕ್ಕೆ ವಾಸೋಪಯೋಗಿ ನಿವೇಸನಗಳಿಗೆ ನಿಗದಿಪಡಿಸಲಾಗಿರುವ ದರವನ್ನು ನೀಡುವುದು ಸೂಕ್ತವಾಗಿರುತ್ತದೆ. ಆದುದರಿಮದ, ಈ ನಿವೇಶನಕ್ಕೆ ಸರ್ಕಾರದ ದಿನಾಂಕ:19–4–2007 ರ ಮಾರ್ಗಸೂಚಿ ಬೆಲೆಯನ್ವಯ ಚ.ಅ. ಒಂದಕ್ಕೆ ರೂ.600/– ಗಳನ್ನು ಪರಿಗಣಿಸಲಾಗಿದೆ. ಅದರಂತೆ, ಈ ಸ್ವತ್ತಿನ ಭೂಪರಿಹಾರ ಮತ್ತು ಇತರೆ ವೆಚ್ಚಗಳ ವಿವರಗಳು ಈ ರೀತಿ ಇರುತ್ತವೆ.

| | ಅ | |
|---|---|---|
| 1 | ಚದರ ಅಡಿ 1ಕ್ಕೆ 600/– ರಂತೆ 288.25 ಚ.ಅ ಗಳಿಗೆ | ರೂ.1,72,950.00 |
| 2 | ಈ ಮೊಬಲಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.23(2) ರನ್ವಯ ಶೇ. 30 ರಂತೆ ಶಾಸನಬದ್ಧ ಭತ್ಯೆ | ರೂ.51,885.00 |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ. 23(1)(ಎ) ರನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇ. 12ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (1ವರ್ಷಕ್ಕೆ) | ರೂ.20,754.00 |
| | **ಒಟ್ಟು** | **ರೂ.2,45,589.00** |

| | 'ಆ' | |
|---|---|---|
| 1 | ಸಿಬ್ಬಂದಿ ವೆಚ್ಚ ಶೇ. 10 ರಷ್ಟು | ರೂ.24,558.00 |
| 2 | ಆಡಿಟ್ ವೆಚ್ಚ ಶೇ. 1 ರಷ್ಟು | ರೂ.2455.00 |
| 3 | ಪ್ರಕಟಣಾ ವೆಚ್ಚ | ರೂ.1,00,000.00 |
| | **ಒಟ್ಟು** | **ರೂ.1,27,013.00** |

**(ಅ+ಆ) ಒಟ್ಟು ರೂ.3,72,602.00**

**(ರೂಪಾಯಿ ಮೂರು ಲಕ್ಷದ ಎಪ್ಪತ್ತೆರಡು ಸಾವಿರದ ಆರುನೂರಾ ಎರಡು ರೂಪಾಯಿಗಳು ಮಾತ್ರ)**

ಆದುದರಿಂದ ಮೇಲೆ ನಮೂದಿಸಿರುವ ಆಸ್ತಿಯನ್ನು ಭೂಸ್ವಾಧೀನಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಂಡು, ಸ್ವತ್ತಿನ ಖಾತೆದಾರರಿಗೆ ಭೂಪರಿಹಾರವನ್ನು ಪಾವತಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:6–1–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

ನಿರ್ಣಯ :– ಆಯುಕ್ತರ ದಿನಾಂಕ : 06–01–2011ರಲ್ಲಿ ಟಿಪ್ಪಣಿ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.

**11]. ವಿಷಯದ ಸಂಖ್ಯೆ :–ತೆಆಸ್ಥಾಸ/195/2010–11**

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(1)ಪಿಆರ್/16/10–11, ದಿನಾಂಕ:31–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 27, ಗಾಂಧಿನಗರ, ಬಾಲಕಿಯರ ಪ್ರೌಢಶಾಲೆಯ ಪಕ್ಕದ 15X50 ಅಡಿಗಳ ಎ.ಸಿ. ಸೀಟಿನ ಪಾಲಿಕೆ ಕಟ್ಟಡವನ್ನು ಕರ್ನಾಟಕ ಚಲನಚಿತ್ರ ಕಾರ್ಮಿಕರ ಕಲಾವಿದರ ತಂತ್ರಜ್ಞರ ಒಕ್ಕೂಟ (ರಿ) ರವರಗೆ ದಿನಾಂಕ:19–11–1997 ರಿಂದ ಒಂದು ವರ್ಷದ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.2000/–ಗಳ ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿರುತ್ತದೆ. ತದ ನಂತರದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:11–11–1999 ರ ವಿಷಯದ ಸಂಖ್ಯೆ: ತೆ: ಆ: 07:99–2000 ರ ತೀರ್ಮಾನದಂತೆ ಗುತ್ತಿಗೆ ಅವಧಿಯನ್ನು ಪುನಃ ಮುಂದಿನ 3 ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.3500/–ಗಳ ಆಧಾರದ ಮೇಲೆ ನವೀಕರಿಸಲು ಹಾಗೂ ಹಾಲಿ ಗುತ್ತಿಗೆ ಅವಧಿ ಅಂತ್ಯವಾದ ನಂತರ ಮತ್ತೆ ಮುಂದುವರೆಸದೇ ಕಟ್ಟಡವನ್ನು ನಗರಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರು ಧೀರ್ಘಾವಧಿಗೆ ನವೀಕರಿಸಲು ಕೋರಿದ ಮೇರೆಗೆ ಮಾಸಿಕ ಗುತ್ತಿಗೆ ರೂ 25,188ರೂ ಗಳಾಗಿದ್ದು ಎಂಬ ಮಾರ್ಪಾಡುಗಳೊಂದಿಗೆ ಪಾಲಿಕೆಯ ನಿರ್ಣಯವಾಗಿರುತ್ತದೆ ದಿನಾಂಕ:19–05–2010ರಲ್ಲಿ ಗುತ್ತಿಗೆಯನ್ನು ಮುಂದುವರಿಸುವ ಬಗ್ಗೆ ಚಲನಚಿತ್ರ ಕಾರ್ಮಿಕರ ಹಿತದೃಷ್ಟಿಯಿಂದ ಗುತ್ತಿಗೆಯನ್ನು ಮುಂದುವರಿಸಲು ಕೋರುತ್ತಾ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಪತ್ರದ ದಿನಾಂಕ 30–08–2010ರಲ್ಲಿ ಸ್ವತ್ತಿನ ಪರಿಷ್ಕೃತ ಮಾರುಕಟ್ಟೆ ದರದಲ್ಲಿ ಲೆಕ್ಕಚಾರ ಮಾಡಿ ಕಡಿಮೆ ಅವಧಿ ಇರುವಂತೆ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದೆ ದಿನಾಂಕ:26–10–2010ರಂದು ನಡೆದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಡೆದ ಸಲಹ ಸಮಿತಿ ಸಭೆಯಲ್ಲಿ ಸಹ ಗುತ್ತಿಗೆ ಮುಂದುವರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯ ಸುತ್ತೋಲೆ ಸಂಖ್ಯೆ ಪಿಆರ್/115/01–02 ರಂತೆ ದಿನಾಂಕ: 01/03/2002 ರಂತೆ ಸ್ವತ್ತಿನ ಪ್ರಸಕ್ತ ಮಾರುಕಟ್ಟೆ ಬೆಲೆಯಲ್ಲಿ ಕನಿಷ್ಟ ಶೇ.10% ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಲು ಹಾಗೂ ಶೇಕಡ 100 ರಷ್ಟು ಸಮಾಜಸೇವೆ ಸಲ್ಲಿಸುತ್ತಿರುವ ಸಂಘಸಂಸ್ಥೆಗಳಿಗೆ ಈ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವವರೆಂದಿದೆ.

2007ನೇ ಸಾಲಿನ ಸರ್ಕಾರ ಆದೇಶದಂತೆ ದರವು ಚದರ ಅಡಿ ಒಂದಕ್ಕೆ ವಸತಿಗೆ 4000/– ರೂ. ಗಳಿದ್ದು, ವಸತಿಯೇತ್ತರ ಚದರ ಅಡಿ ಒಂದಕ್ಕೆ 5600/– ರೂ. ಗಳಾಗಿರುತ್ತದೆ. ಸ್ವತ್ತಿನ ಅಳತೆ 15X50=750 ಚದರ ಅಡಿಗಳಾಗಿದ್ದು, ಒಟ್ಟು ನಿವೇಶನದ ಬೆಲೆ 750X5600= ರೂ. 42,00000/– ಗಳಾಗಿದೆ. ಕಟ್ಟಡದ ಬೆಲೆ ಚದರ ಅಡಿ ಒಂದಕ್ಕೆ 250/– ರೂ ಗಳಾಗಿದ್ದು ಅದರಂತೆ ಲೆಕ್ಕಾಚಾರ ಮಾಡಿ ಕಟ್ಟಡದ ಬೆಲೆ 1,87,500/– ರೂ ಗಳಾಗುತ್ತದೆ. ಈ ರೀತಿ ನಿವೇಶನ ಮತ್ತು ಕಟ್ಟಡದ ಒಟ್ಟು ಬೆಲೆ ರೂ.43,87,500/– ಗಳಾಗಿದ್ದು, ಶೇಕಡ 10 ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ ಹಣವು ರೂ.4,38,750/ ಗಳಾಗಿದ್ದು, ಮಾಸಿಕ ಗುತ್ತಿಗೆ ಹಣವು ರೂ.36,565/–ಗಳಾಗುತ್ತದೆ.

ಈ ಸಂಸ್ಥೆಯು ಸಂಘದ ಕಾರ್ಯಾಲಯಕ್ಕೆ ಮಾತ್ರ ಉಪಯೋಗಿಸುತ್ತಿರುವುದರಿಂದ ಹಾಗೂ ಯಾವುದೇ ವಾಣಿಜ್ಯ ಚಟುವಟಿಕೆಗಳಿಗೆ ತೊಡಗದೆ ಇರುವುದರಿಂದ ದಿನಾಂಕ:19–11–2001 ರಿಂದ ಗುತ್ತಿಗೆ ನವೀಕರಿಸುವ ಇಂದಿನ ದಿನಾಂಕದವರೆಗೆ ಮಾಸಿಕ ಗುತ್ತಿಗೆ ದರ ರೂ 3,500ರಂತೆ ವಸೂಲಿ ಮಾಡಿ ಮುಂದಿನ 5 ವರ್ಷದ ಅವಧಿಗೆ ಮಾಹೆಯಾನ ರೂ.7500/– ರಂತೆ ಪರಿಗಣಿಸಿ ದರ ನಿಗಧಿಪಡಿಸಿ 5 ವರ್ಷದ ಅವಧಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ನವೀಕರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:31–12–2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

ನಿರ್ಣಯ :– ಆಯುಕ್ತರ ದಿನಾಂಕ : 31–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.

**12]. ವಿಷಯದ ಸಂಖ್ಯೆ :–ತೆಆಸ್ಥಾಸ/196/2010–11**

ಮಾನ್ಯ ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(1)ಪಿಆರ್/51/10–11, ದಿನಾಂಕ:23.11.2010 ರಲ್ಲಿ ವಿವರಿಸಿರುವಂತೆ ಪಾಲಿಕೆಯ ವಾರ್ಡ್ ಸಂಖ್ಯೆ: 64 (ಹಳೆಯದು–99), ರಾಜಮಹಲ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ ಆವರಣದಲ್ಲಿ 593 ಚದರ ಅಡಿ ಜಾಗವನ್ನು ಅಂಚೆ ಇಲಾಖೆಗೆ ಮಾಸಿಕ ರೂ.1000/– ರಂತೆ 1997 ರಲ್ಲಿ 5 ವರ್ಷಗಳಿಗೆ ಗುತ್ತಿಗೆ ನೀಡಿದ್ದು, ಇದರ ಅವಧಿಯು 2002 ರಲ್ಲಿ ಮುಕ್ತಾಯವಾಗಿದ್ದು, ಗುತ್ತಿಗೆ ಅವಧಿ ಮುಗಿದ ನಂತರ ಅಂಚೆ ಇಲಾಖೆಯು ಪ್ರಸ್ತುತ ಸ್ಥಳದಲ್ಲಿ ಮುಂದುವರೆಸಿಕೊಂಡು ಬಂದಿರುತ್ತದೆ. ಈಗಲೂ ಸಹ ತಿಂಗಳಿಗೆ ರೂ.1000/– ರಂತೆ ದಿನಾಂಕ:31–8–2008 ರವರೆಗೆ ಹಣವನ್ನು ಅಂಚೆ ಇಲಾಖೆಯು ಪಾವತಿಸಿದ್ದು, ಇಲ್ಲಿಂದ ಮುಂದಿನ ಅವಧಿಯ ಗುತ್ತಿಗೆ ಹಣವನ್ನು ಪಾವತಿಸಬೇಕಾಗಿರುತ್ತದೆ. ಈಗ ಅಂಚೆ ಇಲಾಖೆಯು ಗುತ್ತಿಗೆ ಅವಧಿಯನ್ನು ಮುಂದುವರೆಸುವಂತೆ ಕೋರಿರುತ್ತಾರೆ. ಆದುದರಿಂದ ಗುತ್ತಿಗೆ ದರವನ್ನು ದಿನಾಂಕ: 1–9–2008 ರಿಂದ 30–9–2010 ರವರೆಗೆ ಮಾಹೇಯಾನ ರೂ.2000/– ರಂತೆ ನಂತರದ ದಿನಾಂಕ: 1–10–2010 ರಿಂದ ಮಾಹೇಯಾನ ರೂ.2500/– ಗಳಂತೆ ಗುತ್ತಿಗೆ ದರವನ್ನು ಹೆಚ್ಚಿಸಿ ನವೀಕರಿಸಬಹುದೆಂದು ಉಪ ಆಯುಕ್ತರು (ಪಶ್ಚಿಮ) ರವರು ಕಂಡಿಕೆ 96 ರಲ್ಲಿ ತಿಳಿಸಿರುತ್ತಾರೆ. ಅಂಚೆ ಕಾರ್ಯಾಲಯವು ಸಾರ್ವಜನಿಕರಿಗೆ ಅನುಕೂಲವಾಗುವ ಕಛೇರಿಯಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಮೇಲಿನಂತೆ ಗುತ್ತಿಗೆ ದರವನ್ನು ಪರಿಷ್ಕರಿಸಿ ಗುತ್ತಿಗೆ ಅವಧಿಯನ್ನು ಮುಂದುವರೆಸಬಹುದೆಂದು ಉಪ ಆಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ಸಿಫಾರಸ್ಸು ಮಾಡಿರುತ್ತಾರೆ.

ಕರ್ನಾಟಕ ಮುನ್ಸಿಪಲ್ ಕಾಯ್ದೆ 1976 ಕಲಂ 176 ರ (6) ಹಾಗೂ (ಬಿ)ii ಪ್ರಕಾರ ಒಂದು ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ, ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿ ಮತ್ತು ಮಹಾನಗರ ಪಾಲಕೆಯ ಸಭೆಯ

ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯಕವಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ129 ಟಿ.ಎಂ.ಡಿ 2002 ದಿನಾಂಕ:2-6-2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರ ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದಲ್ಲಿ ನೀಡಿದ್ದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆ ಸಂಖ್ಯೆ:ಆ.ಕಂ./ಪಿಆರ್/115/01-02 ದಿನಾಂಕ:1-3-2002 ರ ಪ್ರಕಾರ ಬೆಂಗಳೂರು ಮಹಾನಗರ ಪಾಲಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸ್ತುತ ಮಾರುಕಟ್ಟೆ ಬೆಲೆಗೆ ಕನಿಷ್ಠ ಶೇ.10% ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವನ್ನು ನಿರ್ಧರಿಸತಕ್ಕದ್ದು ಎಂದು ಇದೆ.

2007 ರ ಮಾರ್ಗಸೂಚಿ ದರದಂತೆ ಆರ್.ಎಂ.ವಿ. ಗುಟ್ಟಹಳ್ಳಿ ಪ್ರದೇಶದಲ್ಲಿ ಖಾಲಿ ನಿವೇಶನಕ್ಕೆ ಚ.ಅ. ಒಂದಕ್ಕೆ ರೂ.3000/- ಬೆಲೆ ಇರುತ್ತದೆ. ರೂ.3000/- ಕ್ಕೆ ಶೇ.10% ಅಂದರೆ ರೂ.300/- ಹೀಗೆ ಒಟ್ಟು ಮೊತ್ತ ರೂ.3300/- ಗಳಾಗಿರುತ್ತದೆ.

ನಿಗದಿಪಡಿಸಿದ ಗುತ್ತಿಗೆ ಕರಾರಿನ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾಹೇಯಾನ ರೂ.3000/- ಗಳಂತೆ ನವೀಕರಿಸಲು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿರುವ ಮಾನ್ಯ ಆಯುಕ್ತರವರ ದಿನಾಂಕ: 23-11-2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯ.

ನಿರ್ಣಯ :- ಆಯುಕ್ತರ ದಿನಾಂಕ : 23-11-2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯವನ್ನು ಒಪ್ಪಿದೆ.

**13]. ವಿಷಯದ ಸಂಖ್ಯೆ :-ತೆಆಸ್ಥಾಸ/197/2010-11**

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(1)ಪಿಆರ್/63/10-11 ದಿನಾಂಕ:6-1-2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಚಾಮರಾಜಪೇಟೆ ವಲಯದ ವಾರ್ಡ್ ನಂ:141, ಆಜಾದ್‌ನಗರ 7ನೇ ಕ್ರಾಸ್ ಸ್ವತ್ತಿನ ಸಂಖ್ಯೆ:33, ಶ್ರೀ ರಾಮ್‌ಸಿಂಗ್‌ರವರಿಗೆ 10x60 ಅಡಿಗಳ ಜಾಗವನ್ನು ದಿನಾಂಕ:16-10-1976 ರಿಂದ 15-10-1981 ರವರೆಗೆ 5 ವರ್ಷಗಳ ಅವಧಿಗೆ ವಾರ್ಷಿಕ 134 ರಂತೆ ಗುತ್ತಿಗೆಗೆ ನೀಡಿದ್ದು, ದಿ:15-10-1981 ರಲ್ಲಿ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುತ್ತದೆ. ಈಗ ಶ್ರೀ ರಾಮ್‌ಸಿಂಗ್‌ರವರು ಗುತ್ತಿಗೆ ನೀಡಲಾಗಿದ್ದ ಜಾಗದಲ್ಲಿ ವಾಸಿಸುತ್ತಿಲ್ಲವಾದ್ದರಿಂದ, ಸದರಿ ಜಾಗವನ್ನು ಅರ್ಜಿದಾರರಾದ ಶ್ರೀಮತಿ ರಾಧಮ್ಮರವರೇ ಅನುಭವಿಸುತ್ತಿದ್ದು, ಅದನ್ನು ತಮಗೆ ಕ್ರಯಕ್ಕೆ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರದೇಶದಲ್ಲಿ ಈ ಹಿಂದೆ ಶ್ರೀ. ಸಿ. ಚೆನ್ನಯ್ಯ ಎಂಬುವವರಿಗೆ 30x60 ಅಡಿಗಳ ಜಾಗವನ್ನು ನಗರಪಾಲಿಕೆಯು ಕ್ರಯಕ್ಕೆ ನೀಡಿದ್ದು, ಇದಾದ ನಂತರದಲ್ಲಿ ಮೇಲೆ ತಿಳಿಸಿರುವ ಗುತ್ತಿಗೆದಾರರಾದ ಶ್ರೀ ರಾಮ್‌ಸಿಂಗ್‌ರವರಿಗೆ ಕ್ರಯವಾಗಿದ್ದು, ಶ್ರೀ ರಾಮ್‌ಸಿಂಗ್‌ರವರು ಇದನ್ನು 15x60 ಅಡಿಗಳಂತೆ ಎರಡು ಭಾಗವನ್ನಾಗಿ ಮಾಡಿ, ಒಂದು ಭಾಗವನ್ನು ಅರ್ಜಿದಾರರಾದ ಶ್ರೀಮತಿ ರಾಧಮ್ಮರವರಿಗೆ ಮಾರಾಟ ಮಾಡಿದ್ದು, ಮತ್ತೊಂದು ಭಾಗವನ್ನು ಮತ್ತೊಬ್ಬರಿಗೆ (ಶ್ರೀ ಆರ್.ಟಿ.ಮೂರ್ತಿ) ಮಾರಾಟ ಮಾಡಿರುವುದಾಗಿ ಕಂಡು ಬರುತ್ತದೆ. ಇದರಲ್ಲಿ 1976ರಲ್ಲಿ ಶ್ರೀ.ರಾಮ್‌ಸಿಂಗ್‌ರವರಿಗೆ ಗುತ್ತಿಗೆ ನೀಡಿರುವ 10x60 ಅಡಿಗಳ ಜಾಗವು ಸೇರಿರುವುದಿಲ್ಲವೆಂದು ವಲಯಾಧಿಕಾರಿಗಳು ತಿಳಿಸಿರುತ್ತಾರೆ. ಈ 10x60 ಅಡಿ ಜಾಗವನ್ನು ಇದರ ಪಕ್ಕದಲ್ಲಿರುವ ಅರ್ಜಿದಾರರಾದ ಶ್ರೀಮತಿ ರಾಧಮ್ಮರವರೇ ಉಪಯೋಗಿಸುತ್ತಿದ್ದು, ಇದನ್ನು ಅವರಿಗೆ ಈಗಿನ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಬಹುದೆಂದು ವಲಯಾಧಿಕಾರಿಗಳು ಜಂಟಿ ಆಯುಕ್ತರು ಮತ್ತು ಉಪ ಆಯುಕ್ತರು ತಮ್ಮ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ:07–12–2010 ರಂದು ಚಾಮರಾಜಪೇಟೆ, ಆಜಾದ್‌ನಗರದಲ್ಲಿರುವ ಸ್ವತ್ತಿನ ಸ್ಥಳವನ್ನು ಸಹಾಯಕ ಆಯುಕ್ತರು (ಆಸ್ತಿ) ಮತ್ತು ಸ್ಥಳೀಯ ಅಧಿಕಾರಿಗಳೊಂದಿಗೆ ಉಪ ಆಯಕ್ತರು (ಆಸ್ತಿ) ಸ್ಥಳ ಪರಿಶೀಲನೆ ಮಾಡಲಾಗಿದ್ದು ಸದರಿ ಪ್ರದೇಶದ 10X60 ಅಡಿ ಜಾಗದಲ್ಲಿ ಕಾಂಪೌಂಡ್ ಗೋಡೆ ನಿರ್ಮಿಸಿದ್ದು, ಆ ಕಾಂಪೌಂಡ್ ಗೋಡೆ ಒಳಭಾಗದಲ್ಲಿ ಅಂದಾಜು 30 ವರ್ಷಗಳ ಕಾಲದ ತೆಂಗಿನಮರ ಮತ್ತು ಮಾವಿನಮರ ಇರುತ್ತದೆ. ಈ ಮಧ್ಯೆ ಕಬ್ಬಿಣದ ಶೀಟ್‌ವುಳ್ಳ ಚಿಕ್ಕದಾದ ಶೆಡ್ ನಿರ್ಮಿಸಿದ್ದು, ಮೇಲ್ಭಾಗದಲ್ಲಿ ಸಿಮೆಂಟ್ ಶೀಟ್ ಹಾಕಲಾಗಿರುತ್ತದೆ, ಅದರ ಪಕ್ಕದಲ್ಲಿ ಚಿಕ್ಕ ಶೌಚಾಲಯವು ಇರುತ್ತದೆ, ಸದರಿ ಶೆಡ್ಡಿನ ಪೂರ್ವದ ಕಡೆ ಖಾಲಿ ಜಾಗವಿದ್ದು, ಬಟ್ಟೆ ತೊಳೆಯಲು ಉಪಯೋಗಿಸುತ್ತಿರುವುದು ಕಂಡು ಬರುತ್ತದೆ. ಈ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ ಶ್ರೀಮತಿ ಲಿಂಗಮ್ಮರವರ ನಗರ ಪಾಲಿಕೆಯಿಂದ ಗುತ್ತಿಗೆಗೆ ನೀಡಿರುವ ಖಾಲಿ ನಿವೇಶನ ಪಶ್ಚಿಮಕ್ಕೆ ಶ್ರೀಮತಿ ರಾಧಮ್ಮರವರ ಮನೆ, ಉತ್ತರಕ್ಕೆ ಖಾಸಗಿ ಸ್ವತ್ತು, ದಕ್ಷಿಣಕ್ಕೆ ರಸ್ತೆ, ಈ ಮಧ್ಯೆ 10x60 ಅಡಿಗಳ ಸ್ವತ್ತಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸಂಪೂರ್ಣ ವಾಸದ ಮನೆಗಳು ನಿರ್ಮಾಣವಾಗಿದ್ದು, ಈ ಜಾಗವು ಶ್ರೀಮತಿ ರಾಧಮ್ಮರವರ ಮನೆಗೆ ಲಗತ್ತಾಗಿದ್ದು, ಹಾಗೂ ಅವರ ಅನುಭವದಲ್ಲಿರುತ್ತದೆ. ಪ್ರಸ್ತುತ ಜಾಗವು ಸಾರ್ವಜನಿಕ ಉಪಯೋಗಕ್ಕಾಗಲೀ ಅಥವಾ ಪಾಲಿಕೆ ಉಪಯೋಗಕ್ಕಾಗಲೀ ಬರುವುದಿಲ್ಲವೆಂದು ಕಂಡು ಬಂದಿರುತ್ತದೆ. ಆದ್ದರಿಂದ ಈ ಸ್ವತ್ತನ್ನು ಸಾರ್ವಜನಿಕ ಹರಾಜು ಮೂಲಕ ಅಥವಾ ಸರ್ಕಾರದ ಮಾರ್ಗಸೂಚಿ ಪ್ರಕಾರ ಈಗಿನ ಮಾರುಕಟ್ಟೆ ದರದಂತೆ ನಿಗಧಿಪಡಿಸಿ ವಿಲೇ ಮಾಡಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

ಸರ್ಕಾರದ 2007ರ ಮಾರ್ಗಸೂಚಿ ದರದಂತೆ ವಸತಿಗೆ ಚದರ ಅಡಿ ಒಂದಕ್ಕೆ 700/–ರೂ ಗಳಾಗಿದ್ದು ಸರ್ಕಾರದ ದಿನಾಂಕ:09–07–2001ರ ಸುತ್ತೋಲೆಯಲ್ಲಿನ ಸೂಚನೆಯಂತೆ ಇದಕ್ಕೆ ಶೇ 20% ರಷ್ಟು ಹೆಚ್ಚಿಸಿದಾಗ ರೂ 840/– ಗಳಾಗುತ್ತದೆ. ಇದರಂತೆ 10x60=600 ಚದರ ಅಡಿ ಸ್ವತ್ತಿನ ವಿಸ್ತೀರ್ಣವಾಗಿದ್ದು ಅದರಂತೆ 840X600=5,04000 ರೂ ಬೆಲೆ ಆಗುತ್ತದೆ ಈ ಹಣವನ್ನು ಕಟ್ಟಿಸಿಕೊಂಡು ಕ್ರಯಕ್ಕೆ ನೀಡಲು ಅಥವಾ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿರುವ ಸಲಹಾ ಸಮಿತಿ ಹಾಗೂ ಸರ್ಕಾರಕ್ಕೆ ಪ್ರಸ್ತಾಪಿಸಲು ಸೂಕ್ತ ತಿರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:6–1–2011 ರ ಟಿಪ್ಪಣಿಯನ್ನು ಒಪ್ಪುತ್ತಾ ನೊಂದಾಣಿ ಮಾರ್ಗಸೂಚಿ ಬೆಲೆ ಅಥವಾ ಹರಾಜಿನ ಮೂಲಕ ವಿಲೇ ಮಾಡಿ ಯಾವುದು ಹೆಚ್ಚು ಬೆಲೆ ಗಳಿಸುವುದೋ ಆ

ಬೆಲೆಗೆ ವಿಲೇ ಮಾಡುವಂತೆ ತಿರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ:25–01–2011ರ ನಿರ್ಣಯ.

<u>ನಿರ್ಣಯ :– ಆಯುಕ್ತರ ದಿನಾಂಕ : 06–01–2011ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.</u>

## 14]. ವಿಷಯದ ಸಂಖ್ಯೆ :–ತೆಲಆಸ್ಥಾಸ/198/2010–11

ಮಾನ್ಯ ಆಯುಕ್ತರವರ ಟಿಪ್ಪಣೆ ದಿನಾಂಕ:7–1–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:111 ರ ರೆಸ್ಟ್ ಹೌಸ್, ಕ್ರಿಸೆಂಟ್ ರಸ್ತೆಯ ಹ್ಯಾಂಡ್‌ಲೂಮ್ ಹೌಸ್ ಬಳಿಯಲ್ಲಿ 4x6 ಅಡಿಗಳ ಪಾಲಿಕೆ ಜಾಗವನ್ನು ದೂರವಾಣಿ ಭೂತ್ ನಡೆಸುವ ಸಲುವಾಗಿ ಶ್ರೀಮತಿ ರೇಷ್ಮಾ ಕೌಸರ್ ಎಂಬುವವರಿಗೆ ಪ್ರಥಮವಾಗಿ ದಿನಾಂಕ:3–8–1998 ರಲ್ಲಿ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ದಿನಾಂಕ:1–8–2001 ರಿಂದ 3 ವರ್ಷಗಳ ಅವಧಿಗೆ ಮಾಸಿಕ ರೂ.600/– ಗಳ ಗುತ್ತಿಗೆ ಹಣ ನಿಗದಿಪಡಿಸಿ ಗುತ್ತಿಗೆ ನವೀಕರಿಸಲಾಗಿದ್ದು, ದಿನಾಂಕ:1–8–2004 ರಿಂದ 3 ವರ್ಷಗಳ ಅವಧಿಗೆ ಮಾಸಿಕ ರೂ.600/– ಗಳ ಗುತ್ತಿಗೆ ಹಣ ನಿಗದಿಪಡಿಸಿ ನವೀಕರಿಸಲಾಗಿದ್ದು, ಪುನ: ದಿನಾಂಕ:1–8–2007 ರಿಂದ 3 ವರ್ಷಗಳ ಅವಧಿಗೆ ಮಾಸಿಕ ರೂ.1120/– ಗಳ ಗುತ್ತಿಗೆ ಹಣ ನಿಗದಿಪಡಿಸಿ ಗುತ್ತಿಗೆ ನವೀಕರಿಸಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:27–8–2010 ರಂದು ಮುಕ್ತಾಯಗೊಂಡಿರುತ್ತದೆ. ಗುತ್ತಿಗೆದಾರರು ದಿನಾಂಕ:9–8–2010 ಮತ್ತು 11–10–2010 ರಂದು ಮನವಿ ಸಲ್ಲಿಸಿ ಸದರಿ ಗುತ್ತಿಗೆಯನ್ನು ಪುನಃ 3 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ. ವಾಸ್ತವವಾಗಿ ಸ್ಥಳವನ್ನು ಪರಿಶೀಲಿಸಿದಾಗ ಪ್ರಸ್ತುತ ಜಾಗದಲ್ಲಿ ಟೆಲಿಫೋನ್ ಭೂತ್ ನಡೆಸಲಾಗುತ್ತಿದ್ದು, ಈ ಸ್ಥಳವು ಎಂ.ಜಿ. ರಸ್ತೆಯಲ್ಲಿರುವ ಟೈಮ್ಸ್ ಆಫ್ ಇಂಡಿಯಾ ಕಟ್ಟಡ ಮತ್ತು ನವರತ್ನ ಜೂವೆಲ್ಲರ್ಸ್ ರವರ ಅಂಗಡಿಯ ಮಧ್ಯದಲ್ಲಿರುವ ರೆಸ್ಟ್ ಹೌಸ್, ಕ್ರೆಸೆಂಟ್ ರಸ್ತೆಯ ಮಾರ್ಜಿನಲ್ ನಲ್ಲಿ ಎಂ.ಜಿ. ರಸ್ತೆಗೆ ಎದುರಾಗಿ ಪೆಟ್ಟಿಗೆ ಅಂಗಡಿ ಇರುತ್ತದೆ. ಇದರಲ್ಲಿ ಎಸ್.ಟಿ.ಡಿ. ಜೊತೆಗೆ ಕಾಫಿ, ಟೀ ಮತ್ತು ಇತರೆ ವಸ್ತುಗಳನ್ನು ಕೂಡ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ.

ಸದರಿ ಸ್ವತ್ತನ್ನು ಹರಾಜಿನ ಮೂಲಕ ವಿಲೇವಾರಿ ಮಾಡಲು ಸೂಚಿಸಲಾಗಿತ್ತು. ಆದರೆ ಸದರಿ ಅರ್ಜಿದಾರರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿ ಪತ್ರದಲ್ಲಿ ಪೂಜ್ಯ ಮಹಾಪೌರರು ಸ್ಥಾಯಿ ಸಮಿತಿ ರಚನೆಯಾದ ನಂತರ ಸಂಬಂಧಪಟ್ಟ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ.

ಮೇಲ್ಕಂಡ ವಾರ್ಡ್–111 ರ ರೆಸ್ಟ್ ಹೌಸ್, ಕ್ರೆಸೆಂಟ್ ರಸ್ತೆಯ ಹ್ಯಾಂಡ್‌ಲೂಮ್ ಹೌಸ್ ಬಳಿ 4x6ಅಡಿಗಳ ಪಾಲಿಕೆ ಜಾಗವನ್ನು ಗುತ್ತಿಗೆಯನ್ನು ಮುಂದಿನ 3 ವರ್ಷಗಳ ಅವಧಿಗೆ ನವೀಕರಿಸಲು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 7–1–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

<u>ನಿರ್ಣಯ :– ಆಯುಕ್ತರ ದಿನಾಂಕ : 07–01–2011ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.1120/– (ಸಾವಿರದ ನೂರ ಇಪ್ಪತ್ತು ರೂಗಳ) ಗುತ್ತಿಗೆ ಹಣವನ್ನು ನಿಗಧಿಪಡಿಸುವುದೆಂದು ಸಮಿತಿ ತೀರ್ಮಾನಿಸಿತು.</u>

## 15]. ವಿಷಯದ ಸಂಖ್ಯೆ :–ತೆಲಆಸ್ಥಾಸ/199/2010–11

ಮಾನ್ಯ ಆಯುಕ್ತರ ದಿನಾಂಕ:12–11–2010ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್‌ಸಂಖ್ಯೆ:33ರ ಮಾಗಡಿರಸ್ತೆ ಟೋಲ್‌ಗೇಟ್ ಬನಶಂಕರಿ ದೇವಸ್ಥಾನದ ಪಕ್ಕದಲ್ಲಿ ಸಾರ್ವಜನಿಕ ದೂರವಾಣಿ ಬೂತ್ ನಡೆಸುವ ಸಲುವಾಗಿ ನಗರಪಾಲಿಕಯ 3X3 ಅಡಿಗಳ ಜಾಗವನ್ನು ಮಾಸಿಕ ರೂ.302/–ಗಳ ಗುತ್ತಿಗೆ ಹಣದ ಆಧಾರದ ಮೇಲೆ

ದಿನಾಂಕ:07–07–2006 ರಿಂದ 3 ವರ್ಷಗಳಿಗೆ ಗುತ್ತಿಗೆಗೆ ಎಲ್.ಶಾಂತ (ಅಂಗವಿಕಲರು) ರವರಿಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು ದಿನಾಂಕ:08–07–2009 ರಂದು ಮುಕ್ತಾಯವಾಗಿರುತ್ತದೆ. ಅರ್ಜಿದಾರರು ದಿನಾಂಕ:03–12–2009 ರಂದು ಮನವಿ ಸಲ್ಲಿಸಿ, ಸದರಿ ಜಾಗದ ಗುತ್ತಿಗೆಯ ಅವಧಿಯನ್ನು ಮುಂದಿನ 3–ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ.
ಸ್ಥಳ ಪರಿಶೀಲನೆಯಂತೆ, ಅರ್ಜಿದಾರರು ನಡೆಸುತ್ತಿರುವ ಜಾಗವು ಮಾಗಡಿ ರಸ್ತೆ ಟೋಲ್‌ಗೇಟ್ ಬಳಿಯ ಬನಶಂಕರಿ ದೇವಸ್ಥಾನದ ಪಕ್ಕದಲ್ಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗುವುದಿಲ್ಲವಾದ ಕಾರಣ ಹಾಗೂ ಅರ್ಜಿದಾರರು ಅಂಗವಿಕಲರಾಗಿರುವುದರಿಂದ, ಗುತ್ತಿಗೆಯನ್ನು ನಿಯಮಾನುಸಾರ ಮುಂದುವರಿಸಲು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲ–176ರ (6) ಹಾಗೂ (ಬಿ)II ರ ಪ್ರಕಾರ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು. ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ದಿನಾಂಕ:02–06–2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.
ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಠ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು. ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ, ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಪ್ರಸ್ತಾವನೆಯನ್ನು ಕಳುಹಿಸುವುದಾಗಿದೆ.
ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ:17/4/2007 ರಂತೆ ಚ.ಅ. ಒಂದಕ್ಕೆ ವಾಣಿಜ್ಯಕ್ಕೆ ರೂ.3920/– ಗಳಾಗಲಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 3X3=9X3920= ರೂ.35,280.00 ಗಳಾಗುತ್ತದೆ. ಮಾರುಕಟ್ಟೆ ಬೆಲೆಯ ಕನಿಷ್ಟ ಶೇ. 10 ರಂತೆ ಪರಿಗಣಿಸಲಾಗಿ, ವಾರ್ಷಿಕ ಗುತ್ತಿಗೆ ರೂ.3528/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣವು ರೂ.294/– ಗಳಾಗುತ್ತದೆ.
ಮೇಲಿನ ಹಿನ್ನೆಲೆಯಲ್ಲಿ ಶ್ರೀಮತಿ ಎಲ್.ಶಾಂತ ಅಂಗವಿಕಲರು ರವರಿಗೆ ಮುಂದಿನ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:12–11–2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

<u>ನಿರ್ಣಯ :– ಮಾನ್ಯ ಆಯುಕ್ತರ ಟಿಪ್ಪಣಿ ದಿನಾಂಕ : 12–11–2010 ಮತ್ತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.</u>

## <u>16]. ವಿಷಯದ ಸಂಖ್ಯೆ :–ತೆಲಆಸ್ಥಾಸ/200/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/133/10–11 ದಿನಾಂಕ:08–12–2010ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ 191ರ ವ್ಯಾಪ್ತಿಯಲ್ಲಿ ಕೆ.ಎಸ್.ಆರ್.ಪಿ ಕ್ವಾರ್ಟಸ್ ವಸತಿ ಸಮುಚ್ಚಯವಿದ್ದು ಈ ಬಡಾವಣೆಯ ರಸ್ತೆಗಳನ್ನು ಅಭಿವೃದ್ಧಿ ಪಡಿಸುವಂತೆ ಈ ಭಾಗದ ಪಾಲಿಕೆ ಸದಸ್ಯರಾದ ಶ್ರೀಮತಿ ಕವಿತಾ ಬಾಬುರಾಜ್ ರವರು ಕೋರಿರುತ್ತಾರೆ. ಈ ಸಂಬಂಧ ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ಮತ್ತು ಪಾಲಿಕೆ ಸದಸ್ಯೆ ಶ್ರೀಮತಿ ಕವಿತಾ ಬಾಬುರಾಜ್‌ರವರು ಬಿಬಿಎಂಪಿ ಅಧಿಕಾರಿಗಳೊಂದಿಗೆ ದಿನಾಂಕ: 23.11.2010 ರಂದು ಸ್ಥಳ ಪರಿವೀಕ್ಷಣೆ ಮಾಡಿರುತ್ತಾರೆ. ಅಲ್ಲದೆ, ಸದರಿ ಉದ್ದೇಶಿತ ಕಾಮಗಾರಿಯ ಸ್ಥಳವನ್ನು ಮಾನ್ಯ ಆಯುಕ್ತರ ಆದೇಶದಂತೆ ಪ್ರಧಾನ ಅಭಿಯಂತರರು ಸಹಾ ದಿನಾಂಕ 25.11.2010ರಂದು ಪರಿವೀಕ್ಷಣೆ ಮಾಡಿರುತ್ತಾರೆ. ಪರಿವೀಕ್ಷಣಾ ಸಮಯದಲ್ಲಿ ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಆದೇಶದಂತೆ ವಿವಿಧ ಅಂಶಗಳನ್ನೊಳಗೊಂಡ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಲಾಗಿರುತ್ತದೆ.
ಕರ್ನಾಟಕ ರಾಜ್ಯ ಸಶಸ್ತ್ರ ಮೀಸಲು ಪಡೆಯ 9ನೇ ಬೆಟಾಲಿಯನ್‌ರವರು ದಿನಾಂಕ 15.12.2010ರಿಂದ ದಿನಾಂಕ 20.12.2010ರವರೆಗೆ 59ನೇ ಅಖಿಲ ಭಾರತ ಪೊಲೀಸ್ ಕ್ರೀಡಾ ಕೂಟವನ್ನು ಏರ್ಪಡಿಸಿದ್ದರಿಂದ ಹಾಗೂ ಸದರಿ ವಸತಿ ಸಮುಚ್ಛಯಕ್ಕೆ ಹಲವಾರು ಗಣ್ಯರು ಆಗಮಿಸುವ ಸಂಭವವಿದೆ ಎಂದು ಕಮಾಂಡೆಂಟ್‌ರವರು ದಿನಾಂಕ 15.10.2010ರಂದು ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ.

ಕಾಮಗಾರಿಯು ನಿಗಧಿತ ಅವಧಿಯೊಳಗೆ ಪೂರ್ಣಗೊಳ್ಳಬೇಕಿದ್ದುದರಿಂದ ಜಂಟಿ ಆಯುಕ್ತರು, ಬೊಮ್ಮನಹಳ್ಳಿಯವರ ಶಿಫಾರಸ್ಸಿನ ಮೇರೆಗೆ ಮೆ: ಕೆ.ಆರ್.ಐ.ಡಿ.ಎಲ್‌ರವರಿಗೆ ನಿರ್ವಹಿಸಲು ದಿನಾಂಕ 01.12.2010ರಂದು ಅನುಮೋದನೆ ನೀಡಿದ್ದು, ಜಾಬ್ ಕೋಡ್‌ನ್ನು ಸಹ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಮತ್ತು ಕಾಮಗಾರಿಯು ಅತ್ಯಂತ ತ್ವರಿತವಾಗಿ ಪೂರ್ಣಗೊಳ್ಳಬೇಕಿದ್ದುದರಿಂದ ಕಾಮಗಾರಿಯನ್ನು ನಿರ್ವಹಿಸಲು ಮೆ: ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರೊಂದಿಗೆ ಕರಾರು ಮಾಡಿಕೊಂಡು ದಿನಾಂಕ 13.12.2010ರಂದು ಕಾರ್ಯಾದೇಶವನ್ನು ಸಹಾ ನೀಡಲಾಗಿದೆ. ಸದರಿ ಸಂಸ್ಥೆಯವರು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಬಿಲ್ಲನ್ನು ಪಾವತಿಸುವಂತೆಮನವಿಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ತುರ್ತು ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನ "P–0541" ಲೆಕ್ಕ ಶೀರ್ಷಿಕೆಯಡಿ ರೂ.97.50 ಲಕ್ಷ ಗಳಿಗೆ ಮಂಜೂರಾತಿ ನೀಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲ್ಕಂಡ ಅಂಶಗಳಲ್ಲಿನ ಪ್ರಶ್ನೆಯಲ್ಲಿರುವ ಕಾಮಗಾರಿಗೆ ಸ್ಥಿರೀಕರಣವನ್ನು ಪಡೆಯುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 01–02–2011ರ ಟಿಪ್ಪಣಿಯನ್ನು ಒಪ್ಪಿದೆ.

## 17]. ವಿಷಯದ ಸಂಖ್ಯೆ :–ತೆಆಸ್ಥಾಸ/201/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ/ಆ)ಪಿಎಸ್‌ಆರ್(4)06/10–11 ದಿನಾಂಕ:25–01–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಬಸವ ವೇದಿಕೆ, ನಂ. 26, ವಿಶ್ವನಾಥ ರಾವ್ ರಸ್ತೆ, ಮಾಧವ ನಗರ, ಬೆಂಗಳೂರು – 560 001 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ಪ್ರತಿ ವರ್ಷ ವೇದಿಕೆ ವತಿಯಿಂದ "ಬಸವ ಜಯಂತಿ" ಯನ್ನು ಆಚರಿಸಿ, ಬಸವಶ್ರೀ ಪುರಸ್ಕಾರವನ್ನು ನೀಡಲಾಗುತ್ತಿದೆ ಎಂಬುದನ್ನು ತಿಳಿಸಿ, ಸದರಿ ಕಾರ್ಯಕ್ರಮವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದು, ಈ ಆಚರಣೆಗೆ ರೂ. 2.00 ಲಕ್ಷಗಳ ವೆಚ್ಚವನ್ನು ಅಂದಾಜಿಸಲಾಗಿದ್ದು, ಪಾಲಿಕೆ ವತಿಯಿಂದ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 82.45 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– (ರೂ. ಹತ್ತು ಸಾವಿರ) ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 25–01–2011ರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.2.00ಲಕ್ಷಗಳ (ಎರಡು ಲಕ್ಷಗಳ) ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.

## 18]. ವಿಷಯದ ಸಂಖ್ಯೆ :–ತೆಆಸ್ಥಾಸ/202/2010–11

ಆಯುಕ್ತರ ಟಿಪ್ಪಣಿ ಸಂಖ್ಯೆ: ಮು.ಲೆ.ಅ/ಕಾ.ನಂ/ಪಿಆರ್/104/10-11, ದಿನಾಂಕ:29-01-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 77 ರ ದತ್ತಾತ್ರೇಯ ದೇವಸ್ಥಾನ ವಿಭಾಗದಲ್ಲಿ ಬೀದಿ ದೀಪಗಳನ್ನು ಅಳವಡಿಸುವ 4 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ. 50.00 ಲಕ್ಷಗಳಿಗೆ 2010-11 ನೇ ಸಾಲಿನ ದರಪಟ್ಟಿಯಂತೆ ಅಂದಾಜು ಪಟ್ಟಿ ತಯಾರಿಸಿ ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನದಲ್ಲಿ ಅನುದಾನ ಒದಗಿಸಿಕೊಡಲು ಸ್ಥಳೀಯ ಪಾಲಿಕೆ ಸದಸ್ಯರು ಮನವಿ ಮಾಡಲಾಗಿದ್ದು, ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541 ಲೆಕ್ಕಶೀರ್ಷಿಕೆಯಲ್ಲಿ ಅನುದಾನ ಲಭ್ಯವಿಲ್ಲದ ಕಾರಣ ಮೇಲ್ಕಂಡ ಮೊತ್ತ ರೂ. 50.00 ಲಕ್ಷಗಳನ್ನು 2010-11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಹೆಚ್ಚಿನ ಅನುದಾನ ಒದಗಿಸಿಕೊಂಡು ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಗಳನ್ನು ನಿರ್ವಹಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :- ಆಯುಕ್ತರ ದಿನಾಂಕ : 29-01-2011ರ ಟಿಪ್ಪಣಿ ಒಪ್ಪಿದೆ.

**19]. ವಿಷಯದ ಸಂಖ್ಯೆ :-ತೆಆಸ್ಥಾಸ/203/2010-11**

ಆಯುಕ್ತರ ಟಿಪ್ಪಣಿ ದಿನಾಂಕ:03-02-2011ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರದ ಹಲಸೂರು ರಸ್ತೆಯು **BWSSB** ಯಿಂದ ಅಗೆದಿರುವುದರಿಂದ ರಸ್ತೆಯು ಹಾಳಾಗಿದ್ದು ಸಾರ್ವಜಿಕರ ಹಿತದೃಷ್ಟಿಯಿಂದ ಅದನ್ನು ಶೀಘ್ರವಾಗಿ ಅಭಿವೃದ್ಧಿಗೊಳಿಸುವ ಅವಶ್ಯಕತೆವಿರುತ್ತದೆ.

ಮೇಲ್ಕಂಡ ಕಾಮಗಾರಿಯ ಅಂದಾಜು ಮೊತ್ತ ರೂ. 84.00 ಲಕ್ಷಗಳಿಗೆ 2010-11 ಸಾಲಿನ ದರಪಟ್ಟಿಯನ್ನು ಆಧರಿಸಿ ಅಂದಾಜು ಪಟ್ಟಿ ತಯಾರಿಸಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ವಾಹನ ಸುಗಮ ಸಂಚಾರಕ್ಕೆ ಅನುವು ಮಾಡಬೇಕಾಗಿರುವುದರಿಂದ ಹಾಗೂ ಜರೂರಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಸದರಿ ಕಾಮಗಾರಿಯನ್ನು KRIDL ಸಂಸ್ಥೆಯವರಿಗೆ ವಹಿಸಿ ನಿರ್ವಹಿಸಲು ಪಾಲಿಕೆಯ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ 15/2010-11 ದಿನಾಂಕ 18-12-2010 ರಲ್ಲಿ ಅನುಮೋದಿಸಲಾಗಿದೆ.

ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನದಲ್ಲಿ ಅನುದಾನ ಒದಗಿಸಿಕೊಡಲು ಕೋರಲಾಗಿದ್ದು, ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541 ಲೆಕ್ಕಶೀರ್ಷಿಕೆಯಲ್ಲಿ ರೂ. 5.47 ಲಕ್ಷಗಳು ಮಾತ್ರ ಅನುದಾನ ಲಭ್ಯವಿದ್ದು, ಮೇಲ್ಕಂಡ ಕಾಮಗಾರಿಗೆ ರೂ. 78.53 ಲಕ್ಷಗಳ ಕೊರತೆ ಇರುತ್ತದೆ. ಆದ್ದರಿಂದ ಕೊರತೆಯಿರುವ ಮೊತ್ತ ರೂ. 78.53 ಲಕ್ಷಗಳನ್ನು 2010-11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ **ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541 ಲೆಕ್ಕಶೀರ್ಷಿಕೆಯಲ್ಲಿ** ಹೆಚ್ಚಿನ ಅನುದಾನ ಒದಗಿಸಿಕೊಂಡು ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಯನ್ನು ನಿರ್ವಹಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :- ಆಯುಕ್ತರ ದಿನಾಂಕ : 03-02-2011ರ ಟಿಪ್ಪಣಿಯನ್ನು ಒಪ್ಪಿದೆ.

## 20]. ವಿಷಯದ ಸಂಖ್ಯೆ :–ತೆಆಸ್ಥಾಸ/204/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)119/10–11, ದಿನಾಂಕ:01–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಶ್ರೀ ಕನ್ನಡ ಸೋಮು, ಅಧ್ಯಕ್ಷರು, ಕರ್ನಾಟಕ ಸಂರಕ್ಷಣಾ ಸಂಘ (ನೋಂ) ರವರು ಮನವಿ ಸಲ್ಲಿಸಿ ಸುಮಾರು ಒಂದೂವರೆ ದಶಕದಿಂದ ಕರ್ನಾಟಕ ರಾಜ್ಯೋತ್ಸವವನ್ನು ಮಹಾತ್ಮಾ ಗಾಂಧಿ ರಸ್ತೆಯಲ್ಲಿ ವೈಭವ ಪೂರ್ಣವಾಗಿ ಸಾಂಸ್ಕೃತಿಕ ಮೆರವಣಿಗೆಯೊಂದಿಗೆ ಬಹಳ ಅದ್ದೂರಿಯಾಗಿ ಆಚರಿಸುತ್ತಾ ಬಂದಿದ್ದು, 2010 ನವೆಂಬರ್ 01 ರಂದು ಆಚರಿಸಲಾದ ಕಾರ್ಯಕ್ರಮಗಳಿಗಾಗಿ ಸಹಾಯಧನ ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ ಪೂಜ್ಯ ಮಹಾಪೌರರು ಸೂಕ್ತ ಕ್ರಮ ತೆಗೆದುಕೊಳ್ಳಲು ಸಮಿತಿಗೆ ಒಕ್ಕಣೆಯನ್ನು ಬರೆದು ಕಳುಹಿಸಿರುತ್ತಾರೆಂದು ತಿಳಿಸಿ, ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಕನ್ನಡ ಸೋಮು, ರಾಜ್ಯಾಧ್ಯಕ್ಷಕರು ಕರ್ನಾಟಕ ಸಂರಕ್ಷಣಾ ಸಂಘ ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, 2010 ನವೆಂಬರ್ 01 ರಂದು ವೈಭವ ಪೂರ್ಣವಾಗಿ ಸಾಂಸ್ಕೃತಿಕ ಮೆರವಣಿಗೆಯನ್ನು ಬಹಳ ಅದ್ದೂರಿಯಿಂದ ಮಹಾತ್ಮ ಗಾಂಧಿ ರಸ್ತೆಯಲ್ಲಿ ನಡೆಸುತ್ತಾ ಬಂದಿದ್ದು, ಪಾಲಿಕೆ ವತಿಯಿಂದ ರೂ. 5.00 ಲಕ್ಷಗಳ ಅನುದಾನವನ್ನು ನೀಡುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಪ್ರೋತ್ಸಾಹಿಸಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗದಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 108.35 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 01–02–2011ರ ಟಿಪ್ಪಣಿಯನ್ನು ಒಪ್ಪುತ್ತಾ ರೂ.2.00ಲಕ್ಷ (ಎರಡು ಲಕ್ಷ) ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.

## ಹೆಚ್ಚುವರಿ ವಿಷಯಗಳು:–

## 01]. ವಿಷಯದ ಸಂಖ್ಯೆ :–ತೆಆಸ್ಥಾಸ/205/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:29–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–160 ರ ರಾಜರಾಜೇಶ್ವರಿ ನಗರ ಬಿ.ಇ.ಎಮ್.ಎಲ್ ಬಡಾವಣೆಯಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ–103 ರಲ್ಲಿ 280.00 ಲಕ್ಷಗಳು ಲಭ್ಯವಿರುತ್ತದೆ.

**ದಿ: 30–12–2010 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ: 16(162)/2010–11.**ರ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ: 16(162)/2010–11 ರಲ್ಲಿ **ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿ: 08–12–2010 ರ ನಡವಳಿಗಳು ವಿಷಯದ ಸಂಖ್ಯೆ: ಪಾ.ಕಾ.ಸ್ಥಾ.ಸ/04/2010–11.**ರ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ : 08–12–2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಒಪ್ಪಿಗೆ ಸೂಚಿಸಿ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ತೀರ್ಮಾನವಾಗಿರುತ್ತದೆ.

ಅದರಂತೆ ಮೇಲ್ಕಂಡ ಕಾಮಗಾರಿಯ ಪೂರ್ಣ ಅಂದಾಜು ಮೊತ್ತ ರೂ. 520.00 ಲಕ್ಷಗಳಿಗೆ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಮತ್ತು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ದಿನಾಂಕ : 29–01–2011ರ ಟಿಪ್ಪಣಿಯನ್ನು ಒಪ್ಪಿದೆ.

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/206/2010–11

ಆಯುಕ್ತರವರ ದಿನಾಂಕ:29–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–160 ರ ರಾಜರಾಜೇಶ್ವರಿ ನಗರ ಬಿ.ಇ.ಎಮ್.ಎಲ್ ಬಡಾವಣೆಯಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ ನಿರ್ಮಾಣ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ–104 ರಲ್ಲಿ 100.00 ಲಕ್ಷಗಳು ಲಭ್ಯವಿರುತ್ತದೆ.

**ದಿ: 30–12–2010 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ: 15(161)/2010–11.**ರ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ: 15(161)/2010–11 ರಲ್ಲಿ **ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿ: 08–12–2010 ರ ನಡವಳಿಗಳು ವಿಷಯದ ಸಂಖ್ಯೆ: ವಾ.ಕಾ.ಸ್ಥಾ.ಸ/06/2010–11.** ರ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08–12–2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಒಪ್ಪಿಗೆ ಸೂಚಿಸಿ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ತೀರ್ಮಾನವಾಗಿರುತ್ತದೆ.

ಅದರಂತೆ ಮೇಲ್ಕಂಡ ಕಾಮಗಾರಿಯ ಪೂರ್ಣ ಅಂದಾಜು ಮೊತ್ತ ರೂ. 1184.00 ಲಕ್ಷಗಳಿಗೆ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಮತ್ತು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ಆಯುಕ್ತರ ಟಿಪ್ಪಣಿ ದಿನಾಂಕ : 29–01–2011 ಅನ್ನು ಒಪ್ಪಿದೆ.

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/207/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:29–01–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–160 ರ ರಾಜರಾಜೇಶ್ವರಿ ನಗರ ಬಿ.ಇ.ಎಮ್.ಎಲ್ ಬಡಾವಣೆಯಲ್ಲಿ ಬಾಲಣ್ಣ ರಂಗಮಂದಿರ ನಿರ್ಮಾಣ ಕಾಮಗಾರಿಗೆ 2010–11 ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ–102 ರಲ್ಲಿ 100.00 ಮತ್ತು ದಿನಾಂಕ:09–09–2010 ರ ಪಾಲಿಕೆ ಆಯವ್ಯಯ ಸಭೆಯ ವಿಷಯ ಸಂಖ್ಯೆ:90/2010–11 ರ ಕ್ರಮ ಸಂಖ್ಯೆ–29 ರಲ್ಲಿ 100.00 ಲಕ್ಷಗಳ ವಿಶೇಷ ಅನುದಾನ ಸೇರಿ ಒಟ್ಟು 200.00 ಲಕ್ಷಗಳು ಲಭ್ಯವಿರುತ್ತದೆ.

**ದಿ: 30-12-2010 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ: 17(163)/2010-11.**ರ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು ವಿಷಯದ ಸಂಖ್ಯೆ: 17(163)/2010-11 ರಲ್ಲಿ **ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿ: 08-12-2010 ರ ನಡವಳಿಗಳು ವಿಷಯದ ಸಂಖ್ಯೆ: ವಾ.ಕಾ.ಸ್ಥಾ.ಸ/05/2010-11.**ರ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:08-12-2010 ರ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆಯಲು ಒಪ್ಪಿಗೆ ಸೂಚಿಸಿ ಆರ್ಥಿಕ ಅನುದಾನಕ್ಕೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲು ತೀರ್ಮಾನವಾಗಿರುತ್ತದೆ.

ಅದರಂತೆ ಮೇಲ್ಕಂಡ ಕಾಮಗಾರಿಯ ಪೂರ್ಣ ಅಂದಾಜು ಮೊತ್ತ ರೂ. 1034.00 ಲಕ್ಷಗಳಿಗೆ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಮತ್ತು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :- ಆಯುಕ್ತರ ಟಿಪ್ಪಣಿ ದಿನಾಂಕ : 29-01-2011 ಅನ್ನು ಒಪ್ಪಿದೆ.

## 04]. ವಿಷಯದ ಸಂಖ್ಯೆ :-ತೆಆಸ್ಥಾಸ/208/2010-11

ಆಯುಕ್ತರವರ ಟಿಪ್ಪಣಿ ದಿನಾಂಕ:03-02-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವಲಯದ, ಕಾರ್ಯ ಪಾಲಕ ಅಭಿಯಂತರರು ವಿದ್ಯುತ್ ರವರು, ತಮ್ಮ ವಲಯ ವ್ಯಾಪ್ತಿಯಲ್ಲಿ ಈ ಕೆಳಕಂಡಂತೆ ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿ ಹೆಚ್ಚುವರಿ ಅನುದನವನ್ನು ಬಿಡುಗಡೆ ಮಾಡಿ ಕಾಮಗಾರಿ ಸಂಖ್ಯೆ ನೀಡುವಂತೆ ಕೋರಿರುತ್ತಾರೆ. ಕಾಮಗಾರಿಗಳ ವಿವರಗಳ ಕೆಳಕಂಡಂತಿರುತ್ತದೆ.

| Sl.No. | Name of work | Estimate Amount (Rs.in lakhs) |
|---|---|---|
| 1 | Electrical works (Additional) 2nd Priority works Total 47 works Rs. | 451.50 |
| 2 | Electrical works (Additional) 3rd Priority works Total 19 works Rs. | 318.50 |
| | Total Rs. | 770.00 |

ಮೇಲ್ಕಂಡಂತೆ ಒಟ್ಟು 66 ಕಾಮಗಾರಿಗಳಿಗೆ ರೂ.770.00 ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳುವಂತೆ ಶ್ರೀ ಅರವಿಂದ ಲಿಂಬಾವಳಿ, ಶಾಸಕರು ಹಾಗೂ ಮಾಜಿ ಸಚಿವರು, ಮಹದೇವಪುರ ವಿಧಾನಸಭಾ ಕ್ಷೇತ್ರ ರವರು ನೀಡಿರುವ ಪತ್ರವನ್ನು ಕಡತದಲ್ಲಿ ಲಗತ್ತಿಸಲಾಗಿದೆ.

ಆಯವ್ಯಯ ಲೆಕ್ಕ ಶೀರ್ಷಿಕೆ 23- ಕಾಮಗಾರಿ - ವಿದ್ಯುತ್ - ಸಂಪೂರ್ಣ ಬೆಂಗಳೂರಿಗೆ ರಸ್ತೆ ದೀಪಗಳು - ಪಿ.ಸಂಖ್ಯೆ 1517/139 ರಲ್ಲಿ ರೂ.3000.00 ಲಕ್ಷಗಳನ್ನು ಮೀಸಲಿರಿಸಿದ್ದು ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಭರಿಸಬೇಕಾಗಿರುತ್ತದೆ. ಆದರೆ ಇದುವರೆವಿಗೆ ರೂ.2433.40 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡಲಾಗಿದೆ. ಹಾಗೂ ಬಾಕಿ ರೂ.566.60 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

ಮುಂದುವರೆದು, ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪಾಲಿಕೆಯ ಎಲ್ಲಾ ವಲಯಗಳ ಕ್ರಿಯಾ ಯೋಜನೆ ಪಟ್ಟಿಯಂತೆ ರೂ.2660.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡುವಂತೆ ಪ್ರಸ್ತಾವನೆಯನ್ನು ಸ್ವೀಕರಿಸಿದ್ದು, ಸದರಿ ಕಾಮಗಾರಿಗಳಿಗೆ ರೂ. 2093.40 ಲಕ್ಷಗಳ ಅನುದಾನ ಕೊರತೆ ಉಂಟಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಮಹದೇವಪುರ ವಲಯದ ವಿದ್ಯುತ್ ವಿಭಾಗದ 2ನೇ ಆದ್ಯತೆಯ 47 ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನದ ಮೊತ್ತ ರೂ.451.50 ಲಕ್ಷಗಳನ್ನು ಒದಗಿಸಿ ಕಾಮಗಾರಿ ಸಂಖ್ಯೆಯನ್ನು ನೀಡುವ ಹಾಗೂ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವ ಬಗ್ಗೆ ಸೂಕ್ತ ಟಿಪ್ಪಣಿ ಮಂಡಿಸಿದೆ.

ನಿರ್ಣಯ :- ಆಯುಕ್ತರ ದಿನಾಂಕ : 03-02-2011ರ ಟಿಪ್ಪಣಿಯನ್ನು ಒಪ್ಪಿದೆ.

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/209/2010–11

ಮಾನ್ಯ ಆಯುಕ್ತರವರ ದಿನಾಂಕ: 27-12-2010 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ 91, ಫ್ರೇಜರ್‌ಟೌನ್, ಮುರುಗೇಶ್ ಮೊದಲಿಯಾರ್ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ 8 ರಲ್ಲಿ ಸ್ವತ್ತಿನ ಅಳತೆ 3083.4 ಚದರ ಅಡಿಗಳ ಜಾಗವನ್ನು ಬೆಂಗಳೂರು ಮಹಾನಗರ ಪಾಲಿಕೆ ಸಭೆ ದಿ:27–06–2005ರ ವಿಷಯದ ಸಂಖ್ಯೆ: 15(235)ರ ನಿರ್ಣಯದಂತೆ, ಸರ್ಕಾರದ ಆದೇಶ ಸಂಖ್ಯೆ:ನಅಇ/235/ಎಂಎನ್‌ಜಿ/2005, ಬೆಂಗಳೂರು, ದಿ:28/10/2005 ರ ಆದೇಶದಂತೆ ಅಂದಿನ ಮಾರುಕಟ್ಟೆ ದರದಂತೆ ಸ್ವತ್ತಿನ ಮೌಲ್ಯ 30,71,843/–ರೂ ಗಳಿಗೆ ಕ್ರಯಕ್ಕೆ ನೀಡಲು ಆದೇಶಿಸಲಾಗಿದ್ದು, ಕ್ರಯದ ಮೊತ್ತವನ್ನು ಪೂರ್ಣವಾಗಿ ರಸೀದಿ ಸಂಖ್ಯೆ0607345. ದಿನಾಂಕ: 03/12/2005 ರೂ 30,71843/–ಗಳನ್ನು ಪಾವತಿಸಿರುವುದು ಕಂಡು ಬರುತ್ತದೆ.

ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಸ್.ಆರ್.ಸಂಪತ್‌ರಾಜ್‌ರವರು ಮನವಿ ಸಲ್ಲಿಸಿ ಸ್ವತ್ತನ್ನು ಕ್ರಯಕ್ಕೆ ನೀಡುವ ಸಂದರ್ಭದಲ್ಲಿ ನಅಇ/124/ಟಿಎಂಡಿ/2002 ದಿ:02/06/2003 ನ್ನು ಪರಿಗಣಿಸದೇ ಆದೇಶ ಹೊರಡಿಸಲಾಗಿತ್ತು ಎಂದು ಮನವಿಯಲ್ಲಿ ತಿಳಿಸುತ್ತಾ, ಸದರಿ ಆದೇಶದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಂದ ನಡೆಸುತ್ತಿರುವ ಶಾಲೆಗಳಿಗೆ ನೀಡುವ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಶೇ.25% ರಂತೆ ಪರಿಗಣಿಸಿ, ಪಾವತಿಸಿರುವ ಶೇ.100% ರ ಹಣದಲ್ಲಿ ಶೇ.75% ರಷ್ಟು ಹಣವನ್ನು ಹಿಂದಿರುಗಿಸುವಂತೆ ಕೋರಿ ಮನವಿ ಪತ್ರದೊಂದಿಗೆ ನಅಇ/124/ಟಿಎಂಡಿ/2002 ದಿನಾಂಕ: 02/06/2003 ರ ಸರ್ಕಾರದ ಆದೇಶದ ಪ್ರತಿ ನೊಂದಾಯಿತ ಕ್ರಯ ಪತ್ರದ ಪ್ರತಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯವರು ಶ್ರೀಮತಿ ಮೆಹರಾಸ್ ಸಂಸ್ಥೆಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದಡಿ ಅಂಗೀಕೃತ ಮಾಡಿರುವ ಧೃಡೀಕರಣ ಪತ್ರದ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಸ್ವತ್ತಿನ ಮಾರುಕಟ್ಟೆಯ ಒಟ್ಟು ಮೌಲ್ಯ 30,71,843/– (ಶೇ.100% ರಷ್ಟು) ಪಾವತಿಸಿದ್ದು, ನಅಇ/124/ಟಿಎಂಡಿ/2002. ದಿ: 02/06/2003 ರ ಸುತ್ತೋಲೆಯನ್ವಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಂದ ಶಾಲೆ ನಡೆಸುತ್ತಿರುವುದರಿಂದ, ದಿನಾಂಕ: 02/06/2003 ರ ಸುತ್ತೋಲೆಯಂತೆ ಶೇ.25% ರಂತೆ ಪರಿಗಣಿಸಿ ಉಳಿದ ಶೇ. 75% ರಷ್ಟು ಹಣವನ್ನು ಮರುಪಾವತಿಸಲು ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬಿಬಿಎಂಪಿ ಸಭೆ ನಿರ್ಣಯದೊಂದಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿದ್ದು, ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ದಿನಾಂಕ: 27–12–2010 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

ನಿರ್ಣಯ :– ಆಯುಕ್ತರ ದಿನಾಂಕ : 27–12–2010ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯವನ್ನು ಒಪ್ಪಿದೆ.

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/210/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಪ್ರಧಾನ ಅಭಿಯಂತರರು, ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಲ್ಲಿ ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಕಾಮಗಾರಿ ಕ್ರೀಯಾ ಯೋಜನೆ ಪಟ್ಟಿಯನ್ನು ತಯಾರಿಸಿ ರೂ.3,807.27 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಯನ್ನು ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪಾಲಿಕೆಯ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ದಿನಾಂಕ 05–01–2011ರಂದು ನಡೆದ ಸಭೆಯಲ್ಲಿ ಕೈಗೊಂಡ ನಿರ್ಣಯ ವಿಷಯದ ಸಂಖ್ಯೆ ವಾಕಾಸ್ಥಾಸ/10/10–11 ರಂತೆ ಅನುಮೋದಿಸಿರುತ್ತದೆ.

2010–11ನೇ ಸಾಲಿನ ಆಯವ್ಯಯದ ಪ್ರಧಾನ ಲೆಕ್ಕಶೀರ್ಷಿಕೆ–23 ಕಾಮಗಾರಿ ವಿದ್ಯುತ್ ವಿಭಾಗದ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನಿಗಧಿಪಡಿಸಿರುವ ಅನುದಾನದಲ್ಲಿ ಕಾಮಗಾರಿ ಸಂಖ್ಯೆಗಳನ್ನು ನೀಡುವಂತೆ ಕೋರಲಾಗಿದೆ. ಸದರಿ ಲೆಕ್ಕಶೀರ್ಷಿಕೆಗಳ ಸಂಕ್ಷಿಪ್ತ ವಿವರಗಳು ಕೆಳಕಂಡಂತಿದೆ.

**ಒಟ್ಟಾರೆ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದ ಮೊತ್ತ ರೂ.4587-68ಲಕ್ಷಗಳಿಗೆ ಎದುರಾಗಿ ಈಗಾಗಲೇ ರೂ.2631.58ಲಕ್ಷಗಳಿಗೆ ಕಾಮಗಾರಿ ಸಂಕೇತ/ಸಂಖ್ಯೆಯನ್ನು ನೀಡಲಾಗಿದೆ ಬಾಕಿ ಮೊತ್ತ ರೂ.1956.10ಲಕ್ಷಗಳು ಲಭ್ಯವಿರುತ್ತದೆ.**

**ಎಲ್ಲಾ ಎಂಟು ವಲಯಗಳಿಗೆ ಕೀಯಾ ಯೋಜನೆ ಪಟ್ಟಿಯಂತೆ ರೂ.3807.27ಲಕ್ಷಗಳಿಗೆ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಕಾಮಗಾರಿ ಸಂಖ್ಯೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.**

**ಒಟ್ಟಾರೆ ರೂ.1851.17 ಲಕ್ಷಗಳ ಅನುದಾನದ ಕೊರತೆ ಉಂಟಾಗುತ್ತದೆ.** ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ಲಭ್ಯವಿರುವ ಅನುದಾನದ ಮೊತ್ತದ ವಿವರಗಳನ್ನು **ಬಾವುಟ-ಅರ ಪಟ್ಟಿಯಲ್ಲಿ ನಮೂದಿಸಿರುವ ಪಿ-ಸಂಖ್ಯೆಯಲ್ಲಿ ಲಭ್ಯವಿರುವ ಅನದಾನಕ್ಕೆ ಕಾಮಗಾರಿ ಸಂಖ್ಯೆಯನ್ನು ನೀಡಬಹುದಾಗಿರುತ್ತದೆ.**

ಈಗಾಗಲೇ ಕಾಮಗಾರಿ ಸಂಖ್ಯೆ ನೀಡಲಾಗಿರುವ ಲೆಕ್ಕ ಶೀರ್ಷಿಕೆ ಪಿ-ಸಂಖ್ಯೆಗಳಿಗೆ ಸಂಬಂಧಿಸಿದಂತೆ ಕಾಮಗಾರಿಗಳಿಗೆ ಕ್ರೀಯಾ ಯೋಜನೆ ಪಟ್ಟಿಯ ಕಾಮಗಾರಿಗಳಿಗೆ ನೀಡಬೇಕಾಗಿರುವ ಹೆಚ್ಚುವರಿ ಅನುದಾನವನ್ನು 2010-11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಂಡು ಕಾಮಗಾರಿ ಸಂಖ್ಯೆಯನ್ನು ನೀಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

ನಿರ್ಣಯ :- ಆಯುಕ್ತರ ದಿನಾಂಕ : 07-02-2011ರ ಟಿಪ್ಪಣಿಯನ್ನು ಒಪ್ಪಿದೆ.

## 07]. ವಿಷಯದ ಸಂಖ್ಯೆ :-ತೆಆಸ್ಥಾಸ/211/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಎಲ್ಎಕ್ಯೂ/ಸಿರ್/50/10-11 ದಿನಾಂಕ: 25-01-2011. ರಲ್ಲಿ ವಿವರಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೊಮ್ಮನಹಳ್ಳಿ ವಲಯದ ವಾರ್ಡ್ ಸಂಖ್ಯೆ: 175, ಬೇಗೂರು ಮುಖ್ಯರಸ್ತೆಯಿಂದ ಬೋವಿಕಾಲೋನಿ ಪಕ್ಕದ ಸರ್ಕಾರಿ ಜಾಗ ಮತ್ತು ಸರ್.ಎಂ.ವಿಶ್ವೇಶ್ವರಯ್ಯ ರಸ್ತೆಯ ಮೂಲಕ ರಾಷ್ಟ್ರೀಯ ಹೆದ್ದಾರಿ-7, ಹೊಸೂರು ರಸ್ತೆಗೆ ಸಂಪರ್ಕ ಕಲ್ಪಿಸಲು ಸರ್ವೆ ನಂ. 71 ರಲ್ಲಿ ಬರುವ ಈ ಕೆಳಕಂಡ 4 ಸ್ವತ್ತುಗಳಲ್ಲಿ ಭಾಗಶಃ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆಯನ್ನು ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರು ಸಲ್ಲಿಸಿರುತ್ತಾರೆ. ಈ ರಸ್ತೆಯ ನಿರ್ಮಾಣದ ಅವಶ್ಯಕತೆ ಬಗ್ಗೆ ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರ ವರದಿಯನ್ನು ಆಧರಿಸಿ, ಜಂಟಿ ಆಯುಕ್ತರು, ಬೊಮ್ಮನಹಳ್ಳಿ ರವರು ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

ದಿನಾಂಕ: 12-01-2011 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ವಲಯದ ಸಹಾಯಕ ಅಭಿಯಂತರರೊಂದಿಗೆ ಸ್ಥಳತನಿಖೆ ಮಾಡಿರುತ್ತಾರೆ. ಸಂಪರ್ಕ ರಸ್ತೆ ಕಲ್ಪಿಸಲು ಈ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯಕತೆ ಇದೆ ಎಂದು ಕಂಡುಬಂದಿರುತ್ತದೆ.

ಹಕ್ಕುದಾಖಲೆಗಳಂತೆ ಬೊಮ್ಮನಹಳ್ಳಿ ಸರ್ವೆ ನಂ. 71 ರಲ್ಲಿ 3 ಎಕರೆ 10 ಗುಂಟೆ ವಿಸ್ತೀರ್ಣವಿದ್ದು, ಸರ್ಕಾರಿ ಖರಾಬ್ ಎಂದು ವರ್ಗೀಕೃತವಾಗಿದು, ಈ ಪೈಕಿ 0.01 ಗುಂಟೆ ಪ್ರದೇಶ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಮತ್ತು ಶ್ರೀ ರಾಮಗರ್ಭಗುಡಿಗೆ ಹಾಗೂ 20,020 ಚ.ಅಡಿಗಳು (0.18 1/2 ಗುಂಟೆ) ನಗರಸಭೆ ಬೊಮ್ಮನಹಳ್ಳಿ ರವರಿಗೆ ಮಂಜೂರಾಗಿದ್ದು, ಉಳಿದ ಸುಮಾರು 2 ಎಕರೆ 30 1/2 ಗುಂಟೆ ಸರ್ಕಾರಿ ಖರಾಬ್ ಜಮೀನಾಗಿರುತ್ತದೆ.

ಸರ್ವೆ ನಂ. 71 ರ ಸರ್ಕಾರಿ ಖರಾಬ್ ಜಮೀನಿನಲ್ಲಿ 2 ಶೀಟಿನ ಕಟ್ಟಡ ಹಾಗೂ 2 ಅಂಗಡಿ ಮಳಿಗೆ ಕಟ್ಟಡವಿದ್ದು, ಇವುಗಳ ಅವಧಿ ಮುಗಿರುವುದರಿಂದ ಕಟ್ಟಡಗಳಿಗೆ ಸವಕಳಿ ಕಳೆದ ನಂತರ ಯಾವುದೇ ಮೌಲ್ಯವನ್ನು ನಿಗಧಿ ಪಡಿಸಲು ಅವಕಾಶವಿರುವುದಿಲ್ಲ. ಈ ಕೆಳಗಿನ ಸ್ವತ್ತುಗಳು ಭೂಸ್ವಾಧೀನಕ್ಕೆ ಒಳಪಟ್ಟಿದ್ದು,

ಇವುಗಳ ಮಾಲೀಕತ್ವದ ಬಗ್ಗೆ ಮೂಲದಾಖಲೆಗಳನ್ನು ಪರಿಶೀಲಿಸಿ ಮಾಲೀಕತ್ವದ ಬಗ್ಗೆ ಅವಾರ್ಡ್ ಹಂತದಲ್ಲಿ ತೀರ್ಮಾನ ಕೈಗೊಳ್ಳುವ ಷರತ್ತಿಗೆ ಒಳಪಡಿಸಿ ವಿವರಗಳನ್ನು ಈ ಕೆಳಕಂಡಂತೆ ದಾಖಲಿಸಿದೆ.

**ಭೂಸ್ವಾಧೀನಕ್ಕೊಳಪಡುವ ಸ್ವತ್ತುಗಳ ವಿವರಗಳು ಖಾತಾ ದಾಖಲೆಯಂತೆ ಈ ಕೆಳಕಂಡಂತೆ ಇರುತ್ತವೆ.**

| **ಕ್ರ. ಸಂ.** | **ಖಾತೆದಾರರ ಹೆಸರು (ಆರ್.ಟಿ.ಸಿ.ಯಂತೆ)** | **ಅನುಭವ/ಖಾತೆದಾರರ ಹೆಸರು (ಅಸೆಸ್‌ಮೆಂಟ್ ವಹಿ ದಾಖಲೆಯತೆ)** | **ಖಾತಾ ನಂ. (ಅಸೆಸ್‌ಮೆಂಟ್ ವಹಿ ದಾಖಲೆಯತೆ)** | **ನಿವೇಶನದ ಒಟ್ಟು ವಿಸ್ತೀರ್ಣ (ಚ.ಅ.)** | **ಭೂಸ್ವಾಧೀನಪಡಿಸಿ ಕೊಳ್ಳುವ ವಿಸ್ತೀರ್ಣ** | | **ಸ್ವತ್ತಿನ ಮೌಲ್ಯ (ರೂ.ಗಳಲ್ಲಿ)** |
|---|---|---|---|---|---|---|---|
| | | | | | **ಚ.ಮೀ.** | **ಚ.ಅ.** | |
| 1 | ಸರ್ಕಾರಿ ಖರಾಬ್ | ಲೀಲಾವತಿ ಕೋಂ ಟಿ.ಕೃಷ್ಣ | 153/146/125 | 1250 | 52.25 | 562.44 | 6,74,928.00 |
| 2 | ಸರ್ಕಾರಿ ಖರಾಬ್ | ನಾಗಮ್ಮ ಕೋಂ ಮುನಿಕೃಷ್ಣಪ್ಪ | 152/145/ 124 | 1161 | 103.5 | 1114.28 | 13,37,136.00 |
| 3 | ಸರ್ಕಾರಿ ಖರಾಬ್ | ಬಿ.ಕೆ.ರಾಮರೆಡ್ಡಿ ಬಿನ್ ಕೃಷ್ಣಪ್ಪ | 762/346/35/ 72/1 (ಬಿ ವಹಿ) | 6000 | 131 | 1410 | 16,92,000.00 |
| 4 | ಸರ್ಕಾರಿ ಖರಾಬ್ | ವೆಂಕಟೇಶ್‌ರೆಡ್ಡಿ ಬಿನ್ ನಾರಾಯಣರೆಡ್ಡಿ | 706/72/68/4 (ಬಿ ವಹಿ) | 630 | 36.23 | 390 | 4,68,000.00 |
| 5 | ಸರ್ಕಾರಿ ಖರಾಬ್ | ಎನ್.ರಮೇಶ್‌ರೆಡ್ಡಿ ಬಿನ್ ನಾರಾಯಣರೆಡ್ಡಿ | 707/72/68/4 (ಬಿ ವಹಿ) | 630 | 36.23 | 390 | 4,68,000.00 |
| **ಒಟ್ಟು** | | | | **9671** | **359.21** | **3866.72** | **46,40,064.00** |

**ಭೂಸ್ವಾಧೀನ ಕಾಯ್ದೆಯಡಿ ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ವೆಚ್ಚವನ್ನು ಈ ಕೆಳಕಂಡಂತೆ ಲೆಕ್ಕಾಚಾರ ಮಾಡಲಾಗಿದೆ.**

**‘ಅ’**

1. ಚ.ಅ.1ಕ್ಕೆ ಮಾರ್ಗಸೂಚಿ ಬೆಲೆ ರೂ. 1200 ರಂತೆ 3866.72 ಚ.ಅಡಿ.ಗಳಿಗೆ ರೂ. **46,40,064.00**
2. 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರನ್ವಯ ಮಾರುಕಟ್ಟೆ ಬೆಲೆಯ ಮೇಲೆ ಶೇ. 12ರಷ್ಟು ಹೆಚ್ಚುವರಿ ಮಾರುಕಟ್ಟೆ ಬೆಲೆ (1 ವರ್ಷಕ್ಕೆ) ರೂ. 5,56,808.00.

3. 1894ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶೇ.30 ರಷ್ಟು
ಶಾಸನ ಬದ್ದ ಭತ್ಯೆ ರೂ.
13,92,019.00

**ಒಟ್ಟು ರೂ.**
**65,88,891.00**

4. **ಕಟ್ಟಡದ ಮೌಲ್ಯ(ಸವಕಳಿ ಕಳೆಯಲಾಗಿ)** **ರೂ. Nil**

**'ಆ'**

**ಇತರೆ ವೆಚ್ಚಗಳು**

5. ಶೇ. 10 ರಷ್ಟು ಸಿಬ್ಬಂದಿ ವೆಚ್ಚ (ಹೊರತುಪಡಿಸಿದೆ) ರೂ.
--------

6. ಶೇ. 1 ರಷ್ಟು ಆಡಿಟ್ ವೆಚ್ಚ ರೂ.
65,888.91

7. ಪ್ರಕಟಣಾ ವೆಚ್ಚ ರೂ.
1,50,000.00

**ಒಟ್ಟು ರೂ. 2,15,889.00**

**ಅ+ಆ ಒಟ್ಟು ಮೊತ್ತ ರೂ. 68,04,780.00**

**(ಅರವತ್ತೆಂಟು ಲಕ್ಷದ ನಾಲ್ಕು ಸಾವಿರದ ಏಳುನೂರಾ ಎಂಬಂತ್ತು ರೂ. ಮಾತ್ರ)**

ಸದರಿ ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ತಗಲುವ ಭೂಪರಿಹಾರ ಮತ್ತು ಇತರೆ ವೆಚಗಳು ಸೇರಿ **ರೂ.68,04,780.00 (ಅರವತ್ತೆಂಟು ಲಕ್ಷದ ನಾಲ್ಕು ಸಾವಿರದ ಏಳುನೂರಾ ಎಂಬಂತ್ತು ರೂ. ಮಾತ್ರ)** ಗಳಾಗಲಿದ್ದು, ಈ ಮೊತ್ತವನ್ನು ಪಾಲಿಕೆಯ 2010-2011ರ ಆಯವ್ಯಯದ **"ರಸ್ತೆ ವಿಸ್ತರಣೆ, ಕಸ ಸಂಗ್ರಹಣೆ ಮತ್ತು ಇತರೆ ಕಾರ್ಯಗಳಿಗೆ ಭೂಸ್ವಾಧೀನ"** ಈ ಶೀರ್ಷಿಕೆಯಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ದಿನಾಂಕ: 27-12-2010 ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯ.

ನಿರ್ಣಯ :- ಆಯುಕ್ತರ ದಿನಾಂಕ : 25-01-2011ರ ಟಿಪ್ಪಣಿ ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 08-02-2011ರ ನಿರ್ಣಯವನ್ನು ಒಪ್ಪಿದೆ.

**08]. ವಿಷಯದ ಸಂಖ್ಯೆ :-ತೆಆಸ್ಥಾಸ/212/2010-11**

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)104/10-11, ದಿನಾಂಕ:01-02-2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಮಲ್ಲೇಶ್ವರಂ ಕ್ಷೇತ್ರದ ಶಾಸಕರಾದ ಡಾ॥ ಅಶ್ವತ್ ನಾರಾಯಣ್ ಸಿ. ಎನ್. ಮಲ್ಲೇಶ್ವರಂ ಕ್ಷೇತ್ರದ, ಅರಮನೆ ನಗರ ವಾರ್ಡ್ ಸಂಖ್ಯೆ -35 ರ ನಗರ ಪಾಲಿಕೆ ಸದಸ್ಯರಾದ ಡಾ॥ ಶಿವ ಪ್ರಸಾದ್ ಎಂ. ಎಸ್. ರವರುಗಳು ಸಲ್ಲಿಸಿರುವ ಪತ್ರಗಳನ್ನು ಲಗತ್ತಿಸುತ್ತಾ, ಸದರಿಯವರುಗಳು ಮಲ್ಲೇಶ್ವರಂ ಕ್ಷೇತ್ರದ, ಅರಮನೆನಗರ, ವಾರ್ಡ್ ಸಂಖ್ಯೆ-35 ರಲ್ಲಿ ನಡೆಯಲಿರುವ ಕ್ರೀಡಾ ಉತ್ಸವದಲ್ಲಿ **ಮೇಯರ್ ಕಪ್ ಬ್ಯಾಸ್ಕೆಟ್ ಬಾಲ್ ಟೂರ್ನಮೆಂಟ್** ಪಂದ್ಯಾವಳಿಗಳನ್ನು **ಬ್ಯೂಗಲ್ಸ್ ಬ್ಯಾಸ್ಕೆಟ್ ಬಾಲ್ ಕ್ಲಬ್** ರವರ ಸಾರಥ್ಯದಲ್ಲಿ ನಡೆಯಲಿದ್ದು, ಸದರಿ ಸಂಸ್ಥೆಯವರು ಸಹಾಯಧನ ಕೋರಿ ಸಲ್ಲಿಸಿರುವ ಮನವಿಯನ್ನು ಪುರಸ್ಕರಿಸಿ ಈ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ರೂ. 2.00 ಲಕ್ಷ ಹಣ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 108.35 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :- ಆಯುಕ್ತರ ದಿನಾಂಕ : 01-02-2011ರ ಟಿಪ್ಪಣಿಯನ್ನು ಒಪ್ಪುತ್ತಾ ರೂ.2.00ಲಕ್ಷ (ಎರಡು ಲಕ್ಷ) ಸಹಾಯಧನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 28–02–2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಪಿ.ಎನ್.ಸದಾಶಿವ – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಎನ್.ವೀರಣ್ಣ – ಸದಸ್ಯರು | ಜಂಟಿ ಆಯುಕ್ತರು(ಆರೋಗ್ಯ/ಕಲ್ಯಾಣ/ಆಸ್ತಿಗಳು) |
| ಜಿ.ಮಂಜುನಾಥ ರಾಜು – ಸದಸ್ಯರು | ಮುಖ್ಯ ಅಭಿಯಂತರರು(ಮಹದೇವಪುರ) |
| ಎಂ.ಜಿ.ಜಯರತ್ನ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಭೂಸ್ವಾಧೀನ),(ಕಂದಾಯ), (ಜಾಹೀರಾತು) |
| ಶಕೀಲಾ.ಎಂ – ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ |
| **ಗೈರು ಹಾಜರಿದ್ದ ಸದಸ್ಯರುಗಳು** | ಸಹಾಯಕ ಆಯುಕ್ತರು (ಆಸ್ತಿಗಳು), (ಆಡಳಿತ) |
| ಕೆ.ಚಂದ್ರಶೇಖರ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ವಿದ್ಯುತ್–ಮಹದೇವಪುರ), (ವಿದ್ಯುತ್–ಬೊಮ್ಮನಹಳ್ಳಿ), |
| ಟಿ.ಎ.ಗಾಯಿತ್ರಿ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಮಹದೇವಪುರ) |
| | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## 01]. ವಿಷಯದ ಸಂಖ್ಯೆ :–ತೆಆಸ್ಥಾಸ/189/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಉ.ಎ3(4)/ಪಿ.ಆರ್/137/10–11, ದಿನಾಂಕ:18–01–2011ರಲ್ಲಿ ವಿವರಿಸಿರುವಂತೆ, ಹೊಂಬೇಗೌಡ ನಗರದಲ್ಲಿ ನಗರ ಪಾಲಿಕೆಯ 116+148/2x120+124/2 ಅಡಿಗಳ ನಿವೇಶನವನ್ನು 20 ವರ್ಷಗಳ ಅವಧಿಗೆ 07–11–1956ರಿಂದ ಗುತ್ತಿಗೆ ನೀಡಲಾಗಿತ್ತು ತದನಂತರ ಮತ್ತೆ 30 ವರ್ಷಗಳ ಅವಧಿಗೆ ಒಟ್ಟಾರೆ ನಿವೇಶನ 172+144/2 x 127+124/2 ಅಳತೆಯನ್ನು ದಿ: 27–12–1995ರ ಸರ್ಕಾರಿ ಅದೇಶದಂತೆ ಪ್ರಸ್ತುತ ಮಾರುಕಟ್ಟೆ ಬೆಲೆಯ ಮೇಲೆ ಶೇ 12%ರಷ್ಟು ವಾರ್ಷಿಕ ಗುತ್ತಿಗೆ ನಿಗದಿಪಡಿಸಿ ನವೀಕರಿಸಲಾಗಿರುತ್ತದೆ. ತದನಂತರ ಪಾಲಿಕೆಯ ಆಯುಕ್ತರು ಹೆಚ್ಚಿನ ದರ ನಿಗದಿಪಡಿಸಲು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ದಿನಾಂಕ: 30–03–2001ರಲ್ಲಿ ಮೊದಲು ಗುತ್ತಿಗೆಗೆ ನೀಡಿದ ಆದೇಶವನ್ನು ರದ್ದುಪಡಿಸಿದೆ. ಕ್ಲಬ್‌ನವರು ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ದಿನಾಂಕ:15–10–2003ರಲ್ಲಿ ಅಂತಿಮವಾಗಿ ಆಗಿರುವ ಆದೇಶದಲ್ಲಿ ಪರಿಷ್ಕೃತ ಸರ್ಕಾರಿ ಆದೇಶ ರದ್ದುಪಡಿಸಿ ಹೊಸದಾಗಿ ನೋಟಿಸ್ ನೀಡಿ ತಿರ್ಮಾನಿಸಲು ಆದೇಶಿಸಿರುತ್ತದೆ. ಈ ಆದೇಶದನ್ವಯ ಸರ್ಕಾರವು ಸಂಸ್ಥೆಗೆ ನೋಟಿಸ್ ನೀಡಿ ವಿಚಾರಣೆಯ ನಂತರ ದಿನಾಂಕ: 04–03–2004ರ ಆದೇಶದಲ್ಲಿ ಪ್ರಸಕ್ತ ಮಾರುಕಟ್ಟೆ ಬೆಲೆಗೆ ವಿಲೇವಾರಿ ಮಾಡಲು ಆದೇಶಿಸಿದೆ. ಅಲ್ಲದೆ ದಿ: 07–11–1976ರಿಂದ ಸ್ವತ್ತಿನ ಕ್ರಯಪತ್ರ ಮಾಡುವವರೆಗೆ ಮಾರುಕಟ್ಟೆ ಬೆಲೆಯ 12ರಷ್ಟನ್ನು ಬಾಡಿಗೆ ರೂಪದಲ್ಲಿ ಪಾವತಿಸುವಂತೆ ಸಂಸ್ಥೆಗೆ ಆದೇಶಿಸಿದೆ.

ದಿನಾಂಕ 29–08–2008ರಲ್ಲಿ ಮತ್ತು 17–03–2009ರಲ್ಲಿ ಸಹಾಯಕ ಕಂದಾಯ ಅಧಿಕಾರಿ (ಹೊಂಬೇಗೌಡ ನಗರ) ಇವರು ರೂ. 21415320/– ಸ್ವತ್ತಿನ ಮುಖ ಬೆಲೆಯನ್ನಾಗಿ ಹಾಗೂ 76–77ರಿಂದ 2009ರ ವರೆಗೆ ಸರ್ಕಾರಿ ಆದೇಶದಂತೆ ರೂ. 37543424/– ಪಾವತಿಸಲು ಸಂಸ್ಥೆಗೆ ತಿಳಿಸಲಾಗಿರುತ್ತದೆ. ವಿಲ್ಸನ್ ಗಾರ್ಡನ್ ಕ್ಲಬ್‌ನವರು ಕರ್ನಾಟಕ ಉಚ್ಛ ನ್ಯಾಯಾಲಯಕ್ಕೆ ಡಬ್ಲ್ಯು ಎ ನಂ1779/2007 (LBRES) ಸರ್ಕಾರಿ ಆದೇಶದ

ವಿರುದ್ದ ಸಲ್ಲಿಸಿದ ಮೇಲ್ಮನವಿಯನ್ನು ದಿನಾಂಕ 30–07–2008ರ ಆದೇಶದಲ್ಲಿ ಮೇಲ್ಮನವಿಯನ್ನು ತೀರಸ್ಕರಿಸಿ ಎರಡು ತಿಂಗಳ ಅವದಿಯ ಒಳಗಡೆ ಸರ್ಕಾರಿ ಆದೇಶದಂತೆ ಹಣ ಸಂದಾಯ ಮಾಡಲು ಸೂಚಿಸಿದೆ.

ದಿನಾಂಕ 15–09–2010ರಂದು ಸಂಸ್ಥೆಯು ಮತ್ತೆ ಮನವಿ ಸಲ್ಲಿಸಿ ಸಂಸ್ಥೆಯು ಸಮಾಜಿಕ ಚಟುವಟಿಕೆಗಳಲ್ಲಿ ನಿರತವಾಗಿದ್ದು, ಲಾಭದಾಯಕ ಕಾರ್ಯಕ್ರಮಗಳನ್ನು ಹೊಂದಿರದೇ ಇರುವುದರಿಂದ ಸರ್ಕಾರವು ಬೆಂಗಳೂರಿನ ಇಂಡಿಯನ್ ಜಿಮ್‌ಖಾನಾ ಕ್ಲಬ್‌ಗೆ ಪ್ರತಿ ಎಕರೆಗೆ ರೂ.60,000/–ಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ನಿಗದಿಪಡಿಸಲು ಅಥವಾ 1976ರಲ್ಲಿ ಜಮೀನಿನ ಬೆಲೆ ಪ್ರತಿ ಚದರ ಅಡಿಗೆ ರೂ.30ರ ಲೆಕ್ಕದಂತೆ ಆಗುವ ರೂ. 2427069/– ನಿಗದಿಪಡಿಸಲು ಕೋರಿರುತ್ತಾರೆ.

ಸ್ಥಳೀಯ ಅಧಿಕಾರಿಗಳು ಸಂಸ್ಥೆಯ ಮನವಿಯನ್ನು ಪಾಲಿಕೆ ಮತ್ತು ಆಯುಕ್ತರ ಅವಗಾಹನೆಗೆ ತರಲು ಕೋರಿರುತ್ತಾರೆ. ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶ ದಿನಾಂಕ: 30–07–2008ರಲ್ಲಿ ನೀಡಿರುವ ನಿರ್ದೇಶನ ಹಾಗೂ ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಪಾಲಿಕೆಯ ಹಿತವನ್ನು ಗಣನೆಗೆ ತೆಗೆದುಕೊಂಡು ಸಂಸ್ಥೆಯ ಮನವಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾಪಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ದಿನಾಂಕ 28–02–2011ರ ಸಭೆಯ ನಡವಳಿಗಳು:–</u>***

ದಿನಾಂಕ: 18–1–2011 ರ ಆಯುಕ್ತರ ಟಿಪ್ಪಣಿ ಸಂಖ್ಯೆ: ಎ3(4)ಪಿ.ಆರ್/137/10–11 ನ್ನು ಪರಿಶೀಲಿಸಲಾಯಿತು. ಈ ವಿಷಯದ ಬಗ್ಗೆ ವಿಲ್ಸನ್‌ಗಾರ್ಡನ್ ಕ್ಲಬ್‌ನ ಅಧ್ಯಕ್ಷರು ದಿನಾಂಕ: 25–09–2010 ರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ನೀಡಿರುವ ಮನವಿ ಪತ್ರ ಹಾಗೂ ಈ ಬಗ್ಗೆ ವಿಲ್ಸನ್ ಗಾರ್ಡನ್ ಕ್ಲಬ್ ರವರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತಕ್ರಮ ಕೈಗೊಳ್ಳಲು ಮಾನ್ಯ ಮುಖ್ಯಮಂತ್ರಿಗಳ ಕಛೇರಿಯಿಂದ ದಿನಾಂಕ: 28–10–2010 ರ ಪತ್ರದ ಸಂಖ್ಯೆ: ಮುಮಕಾ/6450/2010/ ನ್ನೂ ಸಹ ಪರಿಶೀಲಿಸಲಾಯಿತು.

ದಿನಾಂಕ: 04–03–2004 ರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ನಅಇ 17 ಎಮ್‌ಎನ್‌ಜಿ 2004 ರಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ:–

1) ಬೆಂಗಳೂರು ಮಹಾನಗರ ಪಾಲಿಕೆಯ 172+144/2 x 127+124/2 ಅಡಿ ವಿಸ್ತೀರ್ಣದ ನಿವೇಶನವನ್ನು ಪ್ರಸ್ತುತ ಮಾರುಕಟ್ಟೆ ಬೆಲೆಗೆ ವಿಲ್ಸನ್ ಗಾರ್ಡನ್ ಕ್ಲಬ್‌ರವರಿಗೆ ಕ್ರಯಕ್ಕೆ ಮಾರಾಟ ಮಾಡಲು, ಮತ್ತು

2) ದಿನಾಂಕ: 07–11–1976 ರಿಂದ ಸ್ವತ್ತಿನ ಕ್ರಯಪತ್ರ ಆಗುವವರೆಗೆ ಮಾರುಕಟ್ಟೆ ಬೆಲೆಯ ಶೇಕಡ 12 ರಷ್ಟನ್ನು ವಾರ್ಷಿಕ ಗುತ್ತಿಗೆ ಮೊತ್ತದ ರೂಪದಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ವಿಲ್ಸನ್ ಗಾರ್ಡನ್ ಕ್ಲಬ್ ರವರು ಪಾವತಿಸುವುದು.

ಈ ಮೇಲ್ಕಂಡ ವಿಷಯದ ಬಗ್ಗೆ ದಿನಾಂಕ: 02–09–2004 ರಂದು ನಡೆದ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ (ವಿಷಯ ಸಂಖ್ಯೆ: 54(1)) ಈ ಕೆಳಕಂಡ ನಿರ್ಣಯವನ್ನು ಕೈಗೊಳ್ಳಲಾಗಿದೆ:–

1) ಅಂದಿನ ಪ್ರಸಕ್ತ ಮಾರುಕಟ್ಟೆ ದರವು ವಸತಿಯೇತರ ಚ.ಅ. ಒಂದಕ್ಕೆ 900 ರೂಗಳಂತೆ ಇದ್ದು ಅದರ ಮೇಲೆ ಶೇಕಡ 20 ರಷ್ಟನ್ನು ಸೇರಿಸಿ, ಒಟ್ಟಾರೆ ನಿವೇಶನದ ಮೌಲ್ಯವನ್ನು 2,14,15,320 ರೂಗಳಿಗೆ ನಿಗಧಿಪಡಿಸಿ ಕ್ರಯಕ್ಕೆ ನೀಡುವುದು.

2) ದಿನಾಂಕ: 07–11–1976 ರಿಂದ ಕ್ರಯ ಪತ್ರ ಆಗುವವರೆಗೂ ಗುತ್ತಿಗೆ ಹಣವನ್ನು ಆಯಾ ಕಾಲದ ಮಾರುಕಟ್ಟೆ ಬೆಲೆಯ ಮೇಲೆ ಶೇಕಡ 12 ರಷ್ಟನ್ನು ತೆಗೆದುಕೊಂಡು ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದು.

ಮೇಲ್ಕಂಡಂತೆ ಲೆಕ್ಕಾಚಾರ ಮಾಡಲಾಗಿ ವಿಲ್ಸನ್ ಗಾರ್ಡನ್ ಕ್ಲಬ್ ರವರು ಸದರಿ ಸರ್ಕಾರಿ ಆದೇಶದ ಅನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಪಾವತಿ ಮಾಡಬೇಕಾದ ಒಟ್ಟು ಕ್ರಯದ ಮೊಬಲಗು 2,14,15,320 ರೂಗಳಾದರೆ, ದಿನಾಂಕ: 07–11–1976 ರಿಂದ ಇಲ್ಲಿಯವರೆಗೂ ಆಯಾ ಕಾಲದ ಮಾರುಕಟ್ಟೆ ದರದ ಮೇಲೆ ಶೇಕಡ 12 ರಷ್ಟನ್ನು ಗುತ್ತಿಗೆ ಮೊತ್ತವೆಂದು ಪರಿಗಣಿಸಿದಲ್ಲಿ ಮಾರ್ಚ್ 2011 ರವರೆಗೆ 4,21,12,025 ರೂಗಳನ್ನು ಗುತ್ತಿಗೆ ಮೊತ್ತವನ್ನು ಪಾವತಿ ಮಾಡಬೇಕಾಗುತ್ತದೆ.

ವಿಲ್ಸನ್ ಗಾರ್ಡನ್ ಕ್ಲಬ್ ನಾಗರೀಕರಿಂದ ನಡೆಯುತ್ತಿರುವ ಒಂದು ಮನರಂಜನಾ ಕೇಂದ್ರವಾಗಿದ್ದು, ಈ ಸಂಘದ ಪ್ರಯೋಜನವನ್ನು ಬಹುತೇಕ ಅಲ್ಲಿನ ಸ್ಥಳೀಯ ನಾಗರೀಕರು ಪಡೆಯುತ್ತಿದ್ದು, ಈ ಗುತ್ತಿಗೆ ಹಣವನ್ನು ಕಡಿಮೆ ಮಾಡಬೇಕೆಂದು ವಿಲ್ಸನ್ ಗಾರ್ಡನ್ ಕ್ಲಬ್ ರವರು ಸನ್ಮಾನ್ಯ ಮುಖ್ಯಮಂತ್ರಿರವರಿಗೆ ಮನವಿಯನ್ನು ಸಲ್ಲಿಸಿದ್ದಾರೆ.

ಈ ಮಧ್ಯೆ ಸದರಿ ವಿಲ್ಸನ್ ಗಾರ್ಡನ್ ಕ್ಲಬ್ ರವರು 62,00,000 ರೂಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಕ್ರಯದ ಮೊಬಲಗಿನ ಬಾಬ್ತು ಪಾವತಿ ಮಾಡಿರುತ್ತಾರೆ. ಈ ಮಧ್ಯೆದಲ್ಲಿ ಸದರಿ ಕ್ಲಬ್ ರವರ ಮನವಿಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸನ್ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಯಿಂದ ಪತ್ರ ಬಂದಿರುತ್ತದೆ.

ಈ ಸಂಬಂಧ ಪರಿಶೀಲಿಸಲಾಗಿ, ಬೆಂಗಳೂರಿನ ಇಂಡಿಯನ್ ಜಿಮ್‌ಖಾನ ಸಂಸ್ಥೆಗೆ 4 ಎಕರೆ 21 ಗುಂಟೆ ಎಕರೆ ಜಮೀನನ್ನು ಬೆಂಗಳೂರಿನ ಕಾಕ್ಸ್‌ಟೌನ್, ವೀಲರ್ಸ್ ರಸ್ತೆಯಲ್ಲಿರುವ ಇಂಡಿಯನ್ ಜಿಮ್‌ಖಾನ ಸಂಸ್ಥೆಗೆ ಪ್ರತಿ ಎಕರೆಗೆ 60,000 ರೂಗಳಂತೆ ವಾರ್ಷಿಕ ಗುತ್ತಿಗೆ ದರವನ್ನು ನಿಗಧಿಪಡಿಸಿ, ಪ್ರತಿ ಮೂರು ವರ್ಷಕೊಮ್ಮೆ ಶೇಕಡ 15 ರಷ್ಟು ಹೆಚ್ಚಿಸುವ ಷರತ್ತಿನೊಂದಿಗೆ ದಿನಾಂಕ: 7–5–2010 ರಂದು ಸರ್ಕಾರದ ಆದೇಶ ಸಂಖ್ಯೆ: ನಅಇ 188 ಎಮ್‌ಎನ್‌ಜಿ 2003 ರಲ್ಲಿ ಆದೇಶಿಸಲಾಗಿದೆ.

ಈ ಹಿಂದೆ, ಇದೇ ಜಾಗದ ಬಗ್ಗೆ ದಿನಾಂಕ: 27–12–1995 ರಲ್ಲಿ ಸರ್ಕಾರದ ಆದೇಶ ಸಂಖ್ಯೆ: ನಅಇ 423 ಎಮ್‌ಎನ್‌ಇ 92 ರಲ್ಲಿ ಈ ಕೆಳಕಂಡಂತೆ ಆದೇಶ ನೀಡಲಾಗಿದೆ:–

1) ವಾರ್ಷಿಕ ಗುತ್ತಿಗೆ ದರವನ್ನು ಜಮೀನಿನ ಹಾಲಿ ಮಾರುಕಟ್ಟೆ ಬೆಲೆಯ ಶೇಕಡ 12 ರಂತೆ ನಿಗಧಿಪಡಿಸುವುದು.

2) ಮಾರುಕಟ್ಟೆ ಬೆಲೆಯನ್ನು ಉಪ ನೊಂದಾವಣಾಧಿಕಾರಿ ರವರ ವಿವರದ ಮೇಲೆ/ ಜಮೀನಿನ ಮೌಲ್ಯವನ್ನು ಆಸ್ತಿ ತೆರಿಗೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿಗಧಿಪಡಿಸಿದ್ದಲ್ಲಿ ಆ ಆಧಾರದ ಮೇಲೆ ಈ ಮೇಲ್ಕಂಡಂತೆ ವಾರ್ಷಿಕ ಗುತ್ತಿಗೆಯನ್ನು ನಿಗಧಿಪಡಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಸರ್ಕಾರ ಆದೇಶಿಸಿರುತ್ತದೆ.

**ನಿರ್ಣಯ :–** ಮೇಲ್ಕಂಡ ಅಂಶಗಳನ್ನು ಪರಿಗಣಿಸಲಾಗಿ ದಿನಾಂಕ: 04–03–2004 ರ ಸರ್ಕಾರದ ಆದೇಶದಲ್ಲಿ ನಿಗಧಿಪಡಿಸಿರುವ ವಾರ್ಷಿಕ ಗುತ್ತಿಗೆ ಮೊತ್ತವು ಕ್ರಯದ ಮೊಬಲಿಗೆ 2 ಪಟ್ಟು ಜಾಸ್ತಿ ಆಗುತ್ತಿರುವುದರಿಂದ ಹಾಗೂ ಈ ಸಂಸ್ಥೆಯು ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳನ್ನು ಸ್ಥಳೀಯ ನಾಗರೀಕರ ಅನುಕೂಲಕ್ಕಾಗಿ, ಲಾಭರಹಿತವಾಗಿ ನಡೆಸುತ್ತಿರುವುದರಿಂದ ಈ ಬಗ್ಗೆ ಪುನರ್ ಪರಿಶೀಲಿಸುವುದು ಅಗತ್ಯವಾಗಿರುತ್ತದೆ.

ಆದಕಾರಣ ದಿನಾಂಕ: 07–05–2010 ರ ಸರ್ಕಾರದ ಆದೇಶ ಸಂಖ್ಯೆ: ನಅಇ 188 ಎಮ್ಎನ್‌ಜಿ 2003 ರಲ್ಲಿ ಬೆಂಗಳೂರು ಇಂಡಿಯನ್ ಜಿಮ್‌ಖಾನ ಸಂಸ್ಥೆಗೆ ಪ್ರತಿ ಎಕರೆಗೆ 60,000/– ರೂಗಳಂತೆ ವಾರ್ಷಿಕ ಗುತ್ತಿಗೆ ದರವನ್ನು ನಿಗಧಿಪಡಿಸಿ, ಪ್ರತಿ ಮೂರು ವರ್ಷಗಳಿಗೊಮ್ಮೆ ಶೇಕಡ 15 ರಷ್ಟು ಹೆಚ್ಚಿಸುವ ಷರತ್ತನ್ನು ವಿಧಿಸಿರುವುದನ್ನು ಈ ಸ್ವತ್ತಿಗೂ ಪರಿಗಣಿಸಿ, ಈ ಸ್ವತ್ತು ಸುಮಾರು ಅರ್ಧ ಎಕರೆ ಜಾಗ ಇರುವುದರಿಂದ ಪ್ರತಿ ವರ್ಷಕ್ಕೆ 30,000/– ರೂಗಳಂತೆ ಗುತ್ತಿಗೆ ಮೊತ್ತವನ್ನು ದಿನಾಂಕ: 07–11–1976 ರಿಂದ ನಿಗಧಿಪಡಿಸಬಹುದೆಂದು ಈ ಸಭೆ ನಿರ್ಣಯಿಸುತ್ತದೆ.

**02]. ವಿಷಯದ ಸಂಖ್ಯೆ :–ತೆಆಸ್ಥಾಸ/213/2010–11**

ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/142/10–11, ದಿನಾಂಕ:23–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಅರಕೆರೆ ಮೈಕೋ ಲೇಔಟ್, ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ಪಕ್ಕದಲ್ಲಿರುವ ಪಾರ್ಕ್‌ನ ಒಂದು ಭಾಗದಲ್ಲಿನ ಜಾಗವನ್ನು ಹಾಲು ಉತ್ಪನ್ನ ಮಾರಾಟ ಮಳಿಗೆ ಸ್ಥಾಪಿಸಲು 8X8 ಅಡಿಗಳ ಜಾಗವನ್ನು ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ ನೀಡುವಂತೆ, ಶ್ರೀ ಲಿಂಗೇಗೌಡ ರವರು ಕೋರಿರುತ್ತಾರೆ.

ಅರ್ಜಿದಾರರು ಈ ಜಾಗವನ್ನು ನಂದಿನಿ ಹಾಲಿನ ಉತ್ಪನ್ನಗಳ ಮಾರಾಟ ಮಳಿಗೆ ಸ್ಥಾಪಿಸಲು ಕೋರಿದ್ದು, ಅರ್ಜಿದಾರರು ನಿರುದ್ಯೋಗಿಯಾಗಿರುವುದರಿಂದ, 5 ವರ್ಷಗಳ ಅವಧಿಗೆ ಸ್ಥಳವನ್ನು ಗುತ್ತಿಗೆ ನೀಡಬಹುದಾಗಿ, ಸ್ಥಾಯಿಸಮಿತಿಗಳ ಮುಂದೆ ಟಿಪ್ಪಣಿ ಮಂಡಿಸಲು ವಲಯಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.2,240/–ಗಳಿದ್ದು, ಅರ್ಜಿದಾರರುಗಳು ಕೋರಿರುವ 8X8

ಅಡಿಗಳ ಜಾಗವು 64 ಚ.ಅಡಿಗಳಾಗುತ್ತದೆ. ಇದರಂತೆ 64X2240 = 1,43,360/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.14,336/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.1200/– ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02–06–2003ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ:ನಅಇ/ 222/ಎಂ.ಎಸ್.ವೈ/2008, ಬೆಂಗಳೂರು, ದಿನಾಂಕ:03–09–2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕರ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ಶ್ರೀ ಲಿಂಗೇಗೌಡರವರಿಗೆ ಹಾಲಿನ ಉತ್ಪನ್ನ ಮಾರಾಟ ಮಳಿಗೆಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 23–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

<u>–ಮುಂದೂಡಿದೆ–</u>

## <u>03]. ವಿಷಯದ ಸಂಖ್ಯೆ :–ತೆಆಸ್ಥಾಸ/214/2010–11</u>

ಮಾನ್ಯ ಆಯುಕ್ತರವರ ಟಿಪ್ಪಣೆ ಸಂಖ್ಯೆ ಉ/ಎ3(1)ಪಿಆರ್/38/10–11, ದಿನಾಂಕ:29–11–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 26ಕ್ಕೆ ಸೇರಿದ ಬಿನ್ನಿಮಿಲ್ ಸರ್ಕಲ್ ಹತ್ತಿರವಿರುವ ಶನಿಮಹಾತ್ಮಸ್ವಾಮಿ ದೇವಸ್ಥಾನದ ಎದುರುಗಡೆ ಇರುವ ಪಾಲಿಕೆಯ ಖಾಲಿ ಜಾಗ 5x5 ಅಡಿಗಳ ಸ್ಥಳವನ್ನು ಗುತ್ತಿಗೆಗೆ ಮಂಜೂರು ಮಾಡಲು ಕೋರಿ ಶ್ರೀ ಸಂಜೀವ ಬಿನ್ ಲೇಟ್ ಪುಟ್ಟಸ್ವಾಮಿ ಇವರು ಮನವಿ ಮಾಡಿರುತ್ತಾರೆ. ಮತ್ತು ಇವರು ಅಂಗವಿಕಲರಾಗಿದ್ದು, ಯಾವುದೇ ಉದ್ಯೋಗವಿಲ್ಲದೇ ಜೀವನೋಪಾಯಕ್ಕಾಗಿ ಸದರಿ ಜಾಗವನ್ನು ಗುತ್ತಿಗೆಗೆ ಮಂಜೂರು ಮಾಡಲು ಕೋರಿರುತ್ತಾರೆ.
ಈ ಸಂಬಂಧವಗಿ ಉಪ ಪೋಲೀಸ್ ಕಮೀಷನರ್, (ಸಂಚಾರ–ಪಶ್ಚಿಮ) ವಿಭಾಗದವರು ದಿನಾಂಕ:20–8–2009 ರಂದು ನಿರಾಕ್ಷೇಪಣಾ ಪತ್ರ ನೀಡಿ ಚಿಲ್ಲರೆ ಅಂಗಡಿಯನ್ನು ನಡೆಸಲು ಜೀವನ ಉಪಯೋಗಕ್ಕೆ ತಾತ್ಕಾಲಿಕವಾಗಿ ಪೆಟ್ಟಿಗೆ ಅಂಗಡಿಯನ್ನು ಸ್ಥಾಪಿಸಿ 1 ವರ್ಷ ಅವಧಿಗೆ ಅನುಮತಿ ನೀಡಲು ಅಭ್ಯಂತರ ಇರುವುದಿಲ್ಲವೆಂದು ಪತ್ರದ ಮುಖೇನ ತಿಳಿಸಿರುತ್ತಾರೆ.
ಸದರಿ ಜಾಗದ ಬಗ್ಗೆ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಗಾಂಧಿನಗರ) ರವರು ನಕ್ಷೆಯಲ್ಲಿ ಜಾಗವನ್ನು ಗುರುತಿಸಿ ವರದಿ ಮಂಡಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸುತ್ತೋಲೆ ಸಂಖ್ಯೆ:ಅಕಂ/ಪಿಆರ್/115/01–02, ದಿನಾಂಕ:1–3–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸ್ತುತ ಮಾರುಕಟ್ಟೆ ಬೆಲೆಗೆ ಕನಿಷ್ಠ ಶೇ.10% ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ.

ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ/ಪಂಗಡದವರಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ, ಪಾಲಿಕೆ ಹಾಗೂ ಸರ್ಕಾರಕ್ಕೆ ಸಿಫಾರಸ್ಸು ಮಾಡುವ ಪ್ರಸ್ತಾವನೆಯನ್ನು ಕಳುಹಿಸುವುದು ಅವಶ್ಯಕವಾಗಿದೆ.

ಶ್ರೀ ಸಂಜೀವ, ಅಂಗವಿಕಲರು ಇವರಿಗೆ 12 ತಿಂಗಳು ಅವಧಿಗೆ 5x5 ಅಳತೆಯ ಜಾಗವನ್ನು ಗಾಂಧಿನಗರ ನೋಂದಾವಣಿ ಕಛೇರಿಯ ಮಾರುಕಟ್ಟೆ ದರದ ಪಟ್ಟಿಯಂತೆ ತಿಂಗಳಿಗೆ ರೂ.240/– ಬಾಡಿಗೆ ಮೊತ್ತವನ್ನು ನಿಗದಿಪಡಿಸಿ ಪಾಲಿಕೆಯ ಷರತ್ತಿಗೊಳಪಡಿಸಿ ಸದರಿ ಜಾಗವನ್ನು ಪೆಟ್ಟಿಗೆ ಅಂಗಡಿ ಇಡಲು ಗುತ್ತಿಗೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:29–11–2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 04]. ವಿಷಯದ ಸಂಖ್ಯೆ :–ತೆಆಸ್ಥಾಸ/215/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/150/10–11, ದಿನಾಂಕ:11–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ:157ರಲ್ಲಿನ ಶ್ರೀ ಸರ್ವಸಿದ್ಧಿ ವಿನಾಯಕ ಭಕ್ತ ಮಂಡಲಿ (ರಿ) ರವರಿಗೆ ನಂ:13/1, 1ನೇ ಅಡ್ಡರಸ್ತೆ, ಐಯ್ಯಣ್ಣಶೆಟ್ಟಿ ಬಡಾವಣೆಯ 1800 ಚ.ಅಡಿ ದೇವಸ್ಥಾನದ ಜಾಗ ಹಾಗೂ ನಂ:07, 3ನೇ ಅಡ್ಡರಸ್ತೆ, ಐಯ್ಯಣ್ಣಶೆಟ್ಟಿ ಬಡಾವಣೆಯ 437.70 ಚ.ಅಡಿಗಳ ಕಟ್ಟಡವನ್ನು ಮಂಡಲಿಯವರಿಗೆ 1970 ರಿಂದ 30 ವರ್ಷಗಳ ಅವಧಿಗೆ ವಾರ್ಷಿಕ 10/–ರೂ.ನಂತೆ ಗುತ್ತಿಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ಮುಗಿದಿರುವುದರಿಂದ, ಮಂಡಲಿಯವರು ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸುವಂತೆ ಕೋರಿರುತ್ತಾರೆ.

ವಲಯಾಧಿಕಾರಿಗಳು ವರದಿ ಸಲ್ಲಿಸಿ, ನಂ:13/1, 1ನೇ ಅಡ್ಡರಸ್ತೆ, ಐಯ್ಯಣ್ಣಶೆಟ್ಟಿ ಬಡಾವಣೆಯಲ್ಲಿ 1800 ಚ.ಅಡಿಗಳ ಜಾಗದಲ್ಲಿ ಶ್ರೀ ಸರ್ವಸಿದ್ಧಿ ವಿನಾಯಕ ದೇವಸ್ಥಾನ ನಿರ್ಮಾಣವಾಗಿದ್ದು, ಪೂಜಾ ಕಾರ್ಯಗಳು ನಡೆಯುತ್ತಿರುತ್ತದೆ ಹಾಗೂ ಇದಕ್ಕೆ ಹೊಂದಿಕೊಂಡಂತೆ ಇರುವ ನಂ:07, 3ನೇ ಅಡ್ಡರಸ್ತೆ, ಐಯ್ಯಣ್ಣಶೆಟ್ಟಿ ಬಡಾವಣೆಯಲ್ಲಿ ನೆಲ ಅಂತಸ್ತಿನ 437.70 ಚ.ಅಡಿಗಳ ಕಟ್ಟಡದಲ್ಲಿ ದೇವಸ್ಥಾನದ ಅರ್ಚಕರು ವಾಸವಾಗಿದ್ದು, ಈ ಸ್ಥಳಗಳಿಗೆ ಗುತ್ತಿಗೆ ಹಣ ಹೆಚ್ಚಿಸಿ ಗುತ್ತಿಗೆ ನವೀಕರಿಸಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಇದರಂತೆ, ದೇವಸ್ಥಾನದ ಜಾಗಕ್ಕೆ ವಾರ್ಷಿಕ ರೂ.12,000/– ಗಳ ಗುತ್ತಿಗೆ ಹಣ ಹಾಗೂ ಅರ್ಚಕರು ವಾಸಿಸುತ್ತಿರುವ ಕಟ್ಟಡಕ್ಕೆ ಕಾಮಗಾರಿ ಇಲಾಖೆಯವರು ನಿಗಧಿಪಡಿಸುವ ಗುತ್ತಿಗೆ ಮೊತ್ತದಂತೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಗುತ್ತಿಗೆ ಹಣ ನಿಗಧಿಪಡಿಸಿ, ಕರಾರು ಪತ್ರ ನೊಂದಾಯಿಸಿದ ದಿನಾಂಕದಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.
ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಅಧಿಕಾರಿವಿರುತ್ತದೆ. ಈ ಸಂಸ್ಥೆಗೆ ವಾರ್ಷಿಕ ಗುತ್ತಿಗೆ ಹಣ ರೂ. 12000/– ನಿಗಧಿಪಡಿಸಲು ಅಭಿಪ್ರಾಯಿಸಲಾಗಿರುತ್ತದೆ.
ಮೇಲ್ಕಂಡ ಪ್ರಸ್ತಾವನೆಯಂತೆ, ಗುತ್ತಿಗೆ ನವೀಕರಿಸುವ ಬಗ್ಗೆ ಸರ್ಕಾರದ ಅನುಮೊದನೆ ಪಡೆಯಲು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:11–12–2010 ರ ಟಿಪ್ಪಣಿಯನ್ನು ಮಾರ್ಪಡಿಸಿ 5ವರ್ಷಗಳ ಅವಧಿಗೆ ಗುತ್ತಿಗೆ ನೀಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 05]. ವಿಷಯದ ಸಂಖ್ಯೆ :–ತೆಆಸ್ಥಾಸ/216/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(1)/ಪಿಆರ್/16/10–11, ದಿನಾಂಕ : 31–12–2010ರಲ್ಲಿ ವಿವರಿಸಿರುವಂತೆ, ಕುಮಾರಿ ನಾಗಿಣಿ, ನಾಗಪ್ಪ ರಸ್ತೆ, ಶೇಷಾದ್ರಿಪುರಂ ಇವರಿಗೆ ನಾಗಪ್ಪ ರಸ್ತೆ ಮತ್ತು ನಾರ್ಥ್ ಪಾರ್ಕ್ ರಸ್ತೆ ಮಧ್ಯದಲ್ಲಿರುವ ಮಹಾನಗರ ಪಾಲಿಕೆಯ ಸ್ವತ್ತಿನಲ್ಲಿ 8X6 ಅಡಿಗಳ ಜಾಗವನ್ನು 18/12/1997 ರಿಂದ 3 ವರ್ಷದ ಅವಧಿಗೆ ಜ್ಯೂಸ್ ಅಂಗಡಿ ನಡೆಸುವ ಸಲುವಾಗಿ ತಿಂಗಳಿಗೆ ರೂ.500/–ರಂತೆ ಗುತ್ತಿಗೆ ಹಣ ನಿಗಧಿಪಡಿಸಿ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ಕಾಲ ಕಾಲಕ್ಕೆ ನವೀಕರಿಸಿದ್ದು, ಮತ್ತು ಗುತ್ತಿಗೆ ಮೊತ್ತವೂ ಸಹ ಪರಿಷ್ಕೃತವಾಗಿರುತ್ತದೆ. ಈ ಗುತ್ತಿಗೆಯ ಅವಧಿಯು 31/12/2009 ರಂದು ಮುಕ್ತಾಯವಾಗಿದ್ದು, ಈಗ ದಿನಾಂಕ:01/01/2010 ರಿಂದ 3 ವರ್ಷಗಳ ಅವಧಿಗೆ ತಿಂಗಳಿಗೆ ಗುತ್ತಿಗೆ ಮೊತ್ತ ರೂ.2000/–ರಂತೆ ನವೀಕರಿಸಬಹುದೆಂದು ಕಂದಾಯ ಅಧಿಕಾರಿ (ಗಾಂಧಿನಗರ) ಮತ್ತು ಜಂಟಿ ಆಯುಕ್ತರು ಮತ್ತು ಉಪ ಅಯುಕ್ತರು (ಪಶ್ಚಿಮ) ರವರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಹಾಗೂ ಪ್ರಸ್ತುತ ಜಾಗವು ಪಾದಚಾರಿ ಮಾರ್ಗದಲ್ಲಿ ಇರುವುದಿಲ್ಲ ಮತ್ತು ಪಾದಚಾರಿ ಸಂಚಾರಕ್ಕೆ ಯಾವುದೇ ತೊಂದರೆ ಯಾಗುವುದಿಲ್ಲ ಎಂದು ತಮ್ಮ ಟಿಪ್ಪಣಿಯಲ್ಲಿ ದಾಖಲು ಮಾಡಿರುತ್ತಾರೆ.
ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿ ದಿನಾಂಕ: 17/04/2007 ರಂತೆ ವಸತಿ ದರ ಚದರ ಅಡಿಗೆ ರೂ.2300/– ಮತ್ತು ವಸತಿಯೇತರಕ್ಕೆ ಚದರ ಅಡಿಗೆ ದರ ರೂ.3220/– ಇರುತ್ತದೆ. ಇದರಂತೆ ಶೇ 10 ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದೆಂದಿದೆ. ಇದರಂತೆ ಅರ್ಜಿದಾರರಿಗೆ ನೀಡಿರುವ ಸ್ವತ್ತಿನ ಅಳತೆ 8X6=48 ಚದರ ಅಡಿಗಳಾಗಿದ್ದು 48X3220= ರೂ.1,54,560/– ಗಳಾಗಿದ್ದು, ಇದರಂತೆ ಶೇಕಡಾ 10ರಷ್ಟು ಲೆಕ್ಕಾಚಾರ ಮಾಡಲಾಗಿ ರೂ.15,456/12= ತಿಂಗಳಿಗೆ ರೂ.1288/– ಗಳಾಗಿರುತ್ತದೆ. ಆದರೆ ಜಂಟಿ ಆಯುಕ್ತರು ತಿಂಗಳಿಗೆ ರೂ.2000/–ರಂತೆ 3 ವರ್ಷಕ್ಕೆ ನವೀಕರಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.
ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು

ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.
ಸರ್ಕಾರದ ಆದೇಶ ಸಂಖ್ಯೆ ನಅಇ 129 ಟಿ.ಎಂ.ಡಿ 2002 ದಿನಾಂಕ: 02/06/2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.
ಗುತ್ತಿಗೆ ನಿಗಧಿಪಡಿಸಿ ಕರಾರು ನೊಂದಾಯಿಸಿರುವ ದಿನಾಂಕದಿಂದ 5 ವರ್ಷಗಳ ಅವಧಿಗೆ ನವೀಕರಿಸಲು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 31–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 06]. ವಿಷಯದ ಸಂಖ್ಯೆ :–ತೆಆಸ್ಥಾಸ/217/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/165/10–11, ದಿನಾಂಕ:17–12–2010 ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ:119, ಕುಂಬಾರಗುಂಡಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಫಲಾನುಭವಿಗಳು ತಾವು ಸುಮಾರು ವರ್ಷಗಳಿಂದ ವಾಸ ಮಾಡುತ್ತಿದ್ದು, ನಾಗರೀಕ ಸೌಲಭ್ಯಗಳನ್ನು ಹೊಂದಿದ್ದು, ತಮಗೆ ಪಾಲಿಕೆವತಿಯಿಂದ ಹಕ್ಕುಪತ್ರ ನೀಡಬೇಕೆಂದು ಕೋರಿರುತ್ತಾರೆ.

ಈ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಸರ್ವೆ ದಾಖಲೆ ಪ್ರಕಾರ ಈ ಪ್ರದೇಶ ನಗರಪಾಲಿಕೆ ಸ್ವತ್ತಾಗಿದ್ದು, ಈಗಾಗಲೇ ಕೆಲವು ಫಲಾನುಭವಿಗಳಿಗೆ ಹಕ್ಕುಪತ್ರ ನೀಡಿರುವುದು ತಿಳಿದು ಬಂದಿರುತ್ತದೆ. ಈಗ ಈ ಪ್ರದೇಶದಲ್ಲಿ 30 ಫಲಾನುಭವಿಗಳು ವಾಸ ಮಾಡುತ್ತಿದ್ದು, ಇದು ಇವರಿಗೆ ಹಕ್ಕುಪತ್ರ ನೀಡುವ ಪ್ರಸ್ತಾವನೆಯಾಗಿರುತ್ತದೆ. ಇದರಲ್ಲಿ 7–ಮಂದಿ ಚರಂಡಿ ಮೇಲೆ, ಚರಂಡಿ ಅಕ್ಕಪಕ್ಕ ವಾಸಿಸುತ್ತಿರುವುದಾಗಿ ಮಹಜರ್‌ನಿಂದ ತಿಳಿದು ಬಂದಿರುತ್ತದೆ. ಈ ಫಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲು ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಉಳಿದ 23 ಫಲಾನುಭವಿಗಳು ವಾಸವಾಗಿರುವ ಪ್ರದೇಶ, ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟಿರುವುದಿಲ್ಲ. ಪ್ರಸಕ್ತ ಮಾರುಕಟ್ಟೆ ಆಧಾರದ ಮೇಲೆ ದರ ನಿಗಧಿಪಡಿಸಿ, ಸರ್ಕಾರದ ಅನುಮೋದನೆ ಪಡೆದು ಹಕ್ಕುಪತ್ರ ನೀಡಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿರುತ್ತದೆ. ಈ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅನಧಿಕೃತದಾರರಿಗೆ ಪಾಲಿಕೆಯ ಶೇ:22.75%ರ ಅನುದಾನದಡಿಯಲ್ಲಿ ಭರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 17–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 07]. ವಿಷಯದ ಸಂಖ್ಯೆ :–ತೆಆಸ್ಥಾಸ/218/2010–11

ಮಾನ್ಯ ಆಯುಕ್ತರ ದಿನಾಂಕ:24–12–2010 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ:104 ರಲ್ಲಿನ ದಿನಾಂಕ: 28–07–2004 ರಲ್ಲಿ ಕೆ.ಹೆಚ್.ಬಿ. ಕಾಲೋನಿ ಮುಖ್ಯರಸ್ತೆ, ಮಾಗಡಿ ರಸ್ತೆಯಲ್ಲಿರುವ 10X10 ಅಡಿ ಜಾಗವನ್ನು ಮಾಹೆಯಾನ ಗುತ್ತಿಗೆ ಹಣ ರೂ.1000/–ಕ್ಕೆ ಶ್ರೀ

ಲೋಕೇಶ್ ರವರಿಗೆ 3 ವರ್ಷದ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿ ಮುಗಿದಿರುವುದರಿಂದ, ಅರ್ಜಿದಾರರು ಮತ್ತೆ ಐದು ವರ್ಷಕ್ಕೆ ನವೀಕರಿಸಲು ಕೋರಿರುತ್ತಾರೆ.

ವಲಯಾಧಿಕಾರಿಗಳು, ಅರ್ಜಿದಾರರಿಗೆ ನೀಡಿದ್ದ ಗುತ್ತಿಗೆ ಅವಧಿ ಮುಗಿದಿರುವುದರಿಂದ ಹಾಗೂ ನಿಗಧಿಪಡಿಸಿರುವ ಗುತ್ತಿಗೆ ಹಣವನ್ನು ಪಾವತಿ ಮಾಡಿದ್ದು, ಯಾವುದೇ ಷರತ್ತು ಉಲ್ಲಂಘನೆ ಮಾಡಿರುವುದಿಲ್ಲ. ಇವರು ವಿದ್ಯಾವಂತ ನಿರುದ್ಯೋಗಿಯಾಗಿದ್ದು, ಗುತ್ತಿಗೆ ಅವಧಿ ನವೀಕರಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ,

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು. ಹಾಗೂ ಬಾಕಿ ಇರುವ ಗುತ್ತಿಗೆ ಹಣವನ್ನು ವರ್ಷವಾರು ಮಾರುಕಟ್ಟೆ ದರದನ್ವಯ ಆಯುಕ್ತರ ಸುತ್ತೋಲೆಯಂತೆ ಗುತ್ತಿಗೆ ಹಣ ನಿಗಧಿಪಡಿಸಿ, ವಸೂಲು ಮಾಡಬಹುದಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನ ವಸತಿಯೇತರ ಉದ್ದೇಶಕ್ಕೆ ಚದರ ಅಡಿ ಒಂದಕ್ಕೆ ರೂ.3,500/–ಗಳಿದ್ದು, ಅರ್ಜಿದಾರರುಗಳು ಕೋರಿರುವ 100 ಚ.ಅಡಿಗಳಾಗಿದ್ದು, ಇದರಂತೆ 100X3,500 = ರೂ.3,50,000/– ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.35,000/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.2,950/– ಗಳಾಗುತ್ತದೆ.

ಮೇಲ್ಕಂಡ ಪ್ರಸ್ತಾವನೆಯಂತೆ, ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಗುತ್ತಿಗೆ 3 ವರ್ಷದ ಅವಧಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:24–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 08]. ವಿಷಯದ ಸಂಖ್ಯೆ :–ತೆಆಸ್ಥಾಸ/219/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/116/10–11, ದಿನಾಂಕ: 21–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂಬರ್– 123 ರಲ್ಲಿ ದಿನಾಂಕ: 06–12–1999 ರಲ್ಲಿ ವಿಜಯನಗರ 5ನೇ ಮುಖ್ಯರಸ್ತೆ ಮತ್ತು ಸರ್ವಿಸ್ ರಸ್ತೆ ಮಧ್ಯೆ ಭಾಗದಲ್ಲಿರುವ 103.6 ಚ.ಅಡಿ ಜಾಗವನ್ನು ಮಾಹೆಯಾನ ಗುತ್ತಿಗೆ ಹಣ ರೂ.100/–ಕ್ಕೆ ಶ್ರೀ ವಿ.ನಾರಾಯಣಗೌಡ ರವರಿಗೆ 3 ವರ್ಷದ ಅವಧಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ತದನಂತರ, ದಿನಾಂಕ:06–12–2002 ರಿಂದ 3 ವರ್ಷದ ಅವಧಿಗೆ ಮಾಹೆಯಾನ ರೂ.700/–ಕ್ಕೆ ನವೀಕರಿಸಲಾಗಿದೆ. ಅರ್ಜಿದಾರರು ಮತ್ತೆ ಮೂರು ವರ್ಷಕ್ಕೆ ನವೀಕರಿಸಲು ಕೋರಿರುತ್ತಾರೆ.

ಕಂದಾಯ ಅಧಿಕಾರಿ (ವಿಜಯನಗರ) ರವರು ಅರ್ಜಿದಾರರಿಗೆ ನೀಡಿದ್ದ ಗುತ್ತಿಗೆ ಅವಧಿ ಮುಗಿದಿರುವುದರಿಂದ ಗುತ್ತಿಗೆ ಅವಧಿ ನವೀಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ, ಸಹಾಯಕ ಕಾರ್ಯನಿರ್ವಹಕ

ಅಭಿಯಂತರರುರವರು ಪ್ರಸ್ತುತ ಭಾಗದಲ್ಲಿ ರಸ್ತೆ ಅಗಲೀಕರಣಕ್ಕೆ ಯಾವುದೇ ಪ್ರಸ್ತಾವನೆ ಇಲ್ಲವೆಂದು ವರದಿ ಮಾಡಿರುತ್ತಾರೆ.

ಈ ಸ್ವತ್ತಿಗೆ ಪಕ್ಕದ ಹಾಗೂ ಅಂಚಿನಲ್ಲಿರುವ ಪ್ರದೇಶ ಹಾಟ್‌ಚಿಪ್ಸ್ ಮಾರಾಟಕ್ಕೆ ಗುತ್ತಿಗೆ ಅವಧಿಯನ್ನು ನವೀಕರಿಸಲು ಸರ್ಕಾರಕ್ಕೆ ಪ್ರಸ್ತಾಪಿಸಲಾಗಿದ್ದು, ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಗೆ ಮಂಡಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇದನ್ನು ಸಹ ನವೀಕರಿಸುವುದು ಸೂಕ್ತವಾಗಿರುತ್ತದೆ. ನವೀಕರಿಸಲು ಈಗಿನ ದರವನ್ನು ವಿಧಿಸಬಹುದಾಗಿದೆ. ಹಾಗೂ ಬಾಕಿ ಇರುವ ಗುತ್ತಿಗೆ ಹಣವನ್ನು ವರ್ಷವಾರು ಮಾರುಕಟ್ಟೆ ದರದಂತೆ ಗುತ್ತಿಗೆ ಹಣ ನಿಗಧಿಪಡಿಸಿ, ಗುತ್ತಿಗೆ ಹಣವನ್ನು ವಸೂಲು ಮಾಡಬಹುದಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)II ರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನ ವಸತಿಯೇತರ ಉದ್ದೇಶಕ್ಕೆ ಚದರ ಅಡಿ ಒಂದಕ್ಕೆ ರೂ.4,900/–ಗಳಿದ್ದು, ಅರ್ಜಿದಾರರುಗಳು ಕೋರಿರುವ 103.06 ಚ.ಅಡಿಗಳಾಗಿದ್ದು, ಇದರಂತೆ 103.06X4900 = ರೂ.5,07,640/– ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.50,764/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.4,230/– ಗಳಾಗುತ್ತದೆ.

ಮೇಲ್ಕಂಡ ಪ್ರಸ್ತಾವನೆಯಂತೆ, ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಗುತ್ತಿಗೆ 3 ವರ್ಷದ ಅವಧಿಗೆ ನವೀಕರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:21–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

<u>–ಮುಂದೂಡಿದೆ–</u>

## <u>09]. ವಿಷಯದ ಸಂಖ್ಯೆ :–ತೆಆಸ್ಥಾಸ/220/2010–11</u>

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/151/10–11, ದಿನಾಂಕ:22–12–2010 ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆ, ಬೊಮ್ಮನಹಳ್ಳಿ ವಲಯದಲ್ಲಿ 1) ಶ್ರೀ ಚೆನ್ನಪ್ಪ ಬಿನ್ ಕುಪ್ಪುಸ್ವಾಮಿ, ನ್ಯಾನಪ್ಪನ ಹಳ್ಳಿಗೆ ಹೋಗುವ ಮುಖ್ಯರಸ್ತೆಯ, ಬಿ.ಡಿ.ಎ. ರಸ್ತೆಯಲ್ಲಿ 4X6 ಅಡಿ 2) ಶ್ರೀ ಚೆನ್ನದೊರೈ ಬಿನ್ ಕಣ್ಣನ್, ನ್ಯಾನಪ್ಪನ ಹಳ್ಳಿಗೆ ಹೋಗುವ ಮುಖ್ಯರಸ್ತೆಯ ಬಿ.ಡಿ.ಎ. ರಸ್ತೆಯಲ್ಲಿ 4X6 ಅಡಿ 3) ಶ್ರೀ ಎಸ್.ದಾಸ ಬಿನ್ ಸ್ವಾಮಿಕಣ್ಣ, ಶಾಂತಿನಿಕೇತನ ಲೇಔಟ್ ವೃತ್ತದ ಬಳಿಯ ಬೇಕರಿ ಹಿಂಭಾಗ 4X6 ಅಡಿಗಳ ಈ ಮೂರು ಸ್ಥಳಗಳಲ್ಲಿ ಚಪ್ಪಲಿ ಅಂಗಡಿ ಇಡಲು ಸ್ಥಳಾವಕಾಶ ಮಂಜೂರು ನೀಡಲು ಕೋರಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ಈ ಪಾದಚಾರಿ ರಸ್ತೆಗಳು ಅಗಲವಾಗಿದ್ದು, ವಾಹನ ದಟ್ಟಣೆ ಇಲ್ಲದಿರುವುದರಿಂದ, ಸದರ ಫಲಾನುಭವಿಗಳಿಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಕಲ್ಯಾಣ ಕಾರ್ಯಕ್ರಮ ಶೇ:18% ಯೋಜನೆ ಅಡಿಯಲ್ಲಿ ಸೌಲಭ್ಯ ಕಲ್ಪಿಸಬಹುದಾಗಿದ್ದು, ತಾತ್ಕಾಲಿಕವಾಗಿ ಲಿಡ್ಕರ್ ಚಪ್ಪಲಿ ಅಂಗಡಿ ಇಡಲು ಅನುಮತಿ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು. ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ ಹಾಗೂ ಪಾಲಿಕೆಗೆ ಶಿಫಾರಸ್ಸು ಮಾಡುವ ಪ್ರಸ್ತಾವನೆಯನ್ನು ಕಳುಹಿಸುವುದಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ಉದ್ದೇಶಕ್ಕೆ ರೂ.1,820/–ಗಳಿದ್ದು, ಅರ್ಜಿದಾರರುಗಳು ಕೋರಿರುವ 4X6 ಅಡಿಗಳ ಜಾಗವು 24 ಚ.ಅಡಿಗಳಾಗುತ್ತದೆ. ಇದರಂತೆ 24X1820 = 43,680/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 4,368/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 364/– ರೂ.ಗಳಾಗುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಈ ಮೂರು ಫಲಾನುಭವಿಗಳಿಗೆ ಮುಂದಿನ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:22–12–2010ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 10]. ವಿಷಯದ ಸಂಖ್ಯೆ :–ತೆಆಸ್ಥಾಸ/221/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/58/04–05, ದಿನಾಂಕ:23–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:179, ಜಯನಗರ 5ನೇ ಬ್ಲಾಕ್, 10ನೇ ಮುಖ್ಯರಸ್ತೆ ಮತ್ತು 9ನೇ ಮುಖ್ಯರಸ್ತೆ ಮಧ್ಯೆ ಇರುವ (Marginal Land)ನ್ನು ಗಾರ್ಡನ್ ಉಪಯೋಗಕ್ಕಾಗಿ ಗುತ್ತಿಗೆಗೆ ನೀಡಿದ್ದು, ಅವಧಿ ಮುಗಿದಿರುವುದರಿಂದ, ಕ್ರಯಕ್ಕೆ ನೀಡುವ ಬಗ್ಗೆ ಶ್ರೀ ಮುಲ್ಕ ಗೋವಿಂದರೆಡ್ಡಿ ರವರು ಮನವಿ ಸಲ್ಲಿಸಿ ಕೋರಿರುತ್ತಾರೆ.

ಈ ಸ್ವತ್ತನ್ನು 1980 ರಿಂದ 5 ವರ್ಷಗಳ ಅವಧಿಗೆ ಹೂದೋಟ ನಿರ್ಮಾಣಕ್ಕಾಗಿ ಗುತ್ತಿಗೆಗೆ ನೀಡಿದ್ದು, ಅವಧಿ ಮುಗಿದಿರುತ್ತದೆ. ಈ ಬಗ್ಗೆ ಕಾಮಗಾರಿ ಇಲಾಖೆಯವರು ಸ್ಥಳ ಪರಿಶೀಲಿಸಿ, ಅರ್ಜಿದಾರರ ಜಾಗದ ಪಕ್ಕದಲ್ಲಿರುವ 10X64 ಅಡಿಗಳಷ್ಟು ಮಾರ್ಜಿನಲ್ ಜಾಗವಿದ್ದು, ಈ ಜಾಗವು ನಗರಪಾಲಿಕೆಗೆ ಅವಶ್ಯಕತೆ ಇರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ. ಅರ್ಜಿದಾರರಿಗೆ ಕ್ರಯಕ್ಕೆ ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಈ ಬಗ್ಗೆ ಆಸ್ತಿ ವಿಭಾಗದಿಂದ ಸ್ಥಳ ಪರಿಶೀಲನೆ ನಡೆಸಲಾಗಿ, 10X64 ಅಡಿಗಳ ಜಾಗ ನಿವೇಶನಗಳ ಸಂಖ್ಯೆ 38 ಮತ್ತು 39 ರ ಮಧ್ಯದಲ್ಲಿದ್ದು, ನಿವೇಶನ ಸಂಖ್ಯೆ 38 ರ ಮಾಲಿಕರು 64X3 ಅಡಿ ಪ್ರದೇಶದಲ್ಲಿ ಅನಧಿಕೃತ ಕಾಂಪೌಂಡ್ ನಿರ್ಮಿಸಿರುತ್ತಾರೆ. ಈ ಮಾಲೀಕರಿಂದ ಈ ಪ್ರದೇಶದ ಕೋರಿಕೆ ಅರ್ಜಿ ಬಂದಿರುವುದಿಲ್ಲ. ಹಾಗೂ ಉಳಿಕೆ ಜಾಗ 64X7 ಅಡಿ ಪ್ರದೇಶ. ನಿವೇಶನ ಸಂಖ್ಯೆ 39 ರ ಮಾಲಿಕರಾದ ಶ್ರೀ ಮುಲ್ಕ ಗೋವಿಂದರೆಡ್ಡಿ ರವರ

ಅನುಭವದಲ್ಲಿದ್ದು, ಸ್ವಲ್ಪ ಜಾಗದಲ್ಲಿ ಮನೆ ವಿಸ್ತರಿಸಿ ಉಳಿದ ಜಾಗವನ್ನು ಹೂದೋಟವನ್ನಾಗಿ ಉಪಯೋಗಿಸುತ್ತಿದ್ದು, ಈ ನಿವೇಶನ ಎರಡು ಸ್ವತ್ತುಗಳ ಮಧ್ಯ ಇರುವುದರಿಂದ ಪ್ರಸಕ್ತ ಮಾರುಕಟ್ಟೆ ದರದಲ್ಲಿ ನೀಡಬಹುದೆಂದು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.4000/-ಗಳಿದ್ದು, ಅರ್ಜಿದಾರರು ಕೋರಿರುವ 10X64 ಅಡಿಗಳ ಜಾಗವು 640 ಚ.ಅಡಿಗಳಾಗುತ್ತದೆ. ಇದರಂತೆ 640X4000 = 25,60,000/- ರೂಗಳಾಗುತ್ತದೆ. ಸರ್ಕಾರದ ಆದೇಶದ ಮೇರೆಗೆ ಸ್ವತ್ತಿನ ಶೇಕಡ 20 ರಷ್ಟು ಹೆಚ್ಚುವರಿ ಮಾಡಿದಾಗ ಒಟ್ಟಾರೆ ಸ್ವತ್ತಿನ ಮೌಲ್ಯವು ರೂ. 30,72,000/-ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿನಾಂಕ:02-06-2003 ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ. ಈ ಸ್ವತ್ತು ಎರಡು ವಸತಿ ಮನೆಗಳ ಮಧ್ಯ ಇರುವುದರಿಂದ ಸಾರ್ವಜನಿಕರು ಹರಾಜಿಗೆ ಆಸಕ್ತಿ ತೋರದೆ ಇರುವುದರಿಂದ ಅರ್ಜಿದಾರರಿಗೆ ಮಾರುಕಟ್ಟೆ ದರದಲ್ಲಿ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ:ನಅಇ/222/ಎಂ.ಎನ್.ವೈ/2008, ಬೆಂಗಳೂರು, ದಿನಾಂಕ:03-09-2009 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕರ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಅನುಮೋದನೆ ಪಡೆಯಬೇಕಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ 10X64 ಅಡಿಗಳ ಮಾರ್ಜಿನಲ್ ಜಾಗವನ್ನು ಶ್ರೀ ಮುಲ್ಕ ಗೋವಿಂದರೆಡ್ಡಿ ರವರಿಗೆ ಕ್ರಯಕ್ಕೆ ನೀಡಲು ಸರ್ಕಾರದ ಅನುಮೋದನೆ ಪಡೆಯುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 23-12-2010ರ ಟಿಪ್ಪಣಿಯನ್ನು ಮಾರ್ಪಡಿಸಿ ನೊಂದಣಿ ಮಾರ್ಗಸೂಚಿ ಬೆಲೆ ಅಥವಾ ಹಾರಾಜು ಮಾಡಿ ಗಳಿಸುವ ಬೆಲೆ ಅದರಲ್ಲಿ ಯಾವುದು ಹೆಚ್ಚೊ ಆ ಬೆಲೆಗೆ ವಿಲೇ ಮಾಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯ.

<u>-ಮುಂದೂಡಿದೆ-</u>

## 11]. ವಿಷಯದ ಸಂಖ್ಯೆ :-ತೆಆಸ್ಥಾಸ/222/2010-11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)ಪಿಆರ್/134/10-11, ದಿನಾಂಕ:23-12-2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಂ:67/6, 7ನೇ ಡಿ ಮುಖ್ಯರಸ್ತೆ, ಬಿ.ಸಿ.ಸಿ. ಕಾಲೋನಿ, 4ನೇ 'ಟಿ' ಬ್ಲಾಕ್, ಜಯನಗರ ವಿಳಾಸದಲ್ಲಿ 60X40 ಅಡಿಗಳ ನಿವೇಶನವನ್ನು ದಿನಾಂಕ:13-09-1978 ರಿಂದ

30 ವರ್ಷಗಳ ಅವಧಿಗೆ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ನಿರ್ಮಾಣಕ್ಕಾಗಿ ಗುತ್ತಿಗೆ ನೀಡಿದ್ದು, ದಿನಾಂಕ:12–09–2008ಕ್ಕೆ ಅವಧಿ ಮುಕ್ತಾಯವಾಗಿರುತ್ತದೆ.

ಸದರಿ ಸಂಸ್ಥೆಯು ಈ ಸ್ಥಳದಲ್ಲಿ ಕೇಂದ್ರ / ರಾಜ್ಯ ಸರ್ಕಾರ ಹಾಗೂ ಸಂಸ್ಥೆಯ ಹಣದಿಂದ ಕಟ್ಟಡ ನಿರ್ಮಿಸಿ, 30 ಉದ್ಯೋಗಸ್ಥ ಮಹಿಳೆಯರಿಗೆ ಆಶ್ರಯ ನೀಡಿದ್ದು, ಇದರ ಜೊತೆಯಲ್ಲಿ ಹಲವು ಶೈಕ್ಷಣಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ಸಾರ್ವಜನಿಕ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಿದ್ದು, 30–ವರ್ಷಗಳಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ.

ಸದರಿ ಸಂಸ್ಥೆಯವರು ಸ್ಥಳದಲ್ಲಿ ವಸತಿ ನಿಲಯ ನಿರ್ಮಿಸಿ, ಉದ್ಯೋಗಸ್ಥ ಮಹಿಳೆಯರಿಗೆ ಆಶ್ರಯ ನೀಡಿದ್ದು, ಯಾವುದೇ ಗುತ್ತಿಗೆ ಷರತ್ತು ಉಲ್ಲಂಘನೆ ಮಾಡಿರುವುದಿಲ್ಲ ಹಾಗೂ ಮಹಿಳೆಯರ ಶ್ರೆಯೋಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ನಡೆಸುತ್ತಿರುವುದು ತಿಳಿದು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ 30 ವರ್ಷಗಳ ಅವಧಿಗೆ ಮಾಹೆಯಾನ ರೂ. 1000/– ನಿಗಧಿಪಡಿಸಿ, ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.2,500/–ಗಳಿದ್ದು, ಅರ್ಜಿದಾರರುಗಳು ಕೋರಿರುವ 60X40 ಅಡಿಗಳ ಜಾಗವು 2400 ಚ.ಅಡಿಗಳಾಗುತ್ತದೆ. ಇದರಂತೆ 2400X2500 = 60,00,000/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ ರೂ.6,00,000/– ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ ರೂ.50,000/– ಗಳಾಗುತ್ತದೆ.

ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ನಿರ್ಧರಿಸಲಾಗಿದ್ದು, ಈ ಸಂಸ್ಥೆಗೆ ಮಾಸಿಕ ಗುತ್ತಿಗೆ ಹಣ ರೂ. 1000/– ನಿಗಧಿಪಡಿಸಲು ಅಭಿಪ್ರಾಯಿಸಲಾಗಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯಂತೆ, ಗುತ್ತಿಗೆ ನವೀಕರಿಸುವ ಬಗ್ಗೆ ಸರ್ಕಾರದ ಅನುಮೊದನೆ ಪಡೆಯಲು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:23–12–2010 ರ ಟಿಪ್ಪಣಿಯನ್ನು ಮಾರ್ಪಡಿಸಿ ಗುತ್ತಿಗೆ ಅವಧಿ 5ವರ್ಷಕ್ಕೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

<u>–ಮುಂದೂಡಿದೆ–</u>

## <u>12]. ವಿಷಯದ ಸಂಖ್ಯೆ :–ತೆಆಸ್ಥಾಸ/223/2010–11</u>

ಮಾನ್ಯ ಆಯುಕ್ತರವರ ಟಿಪ್ಪಣೆ ದಿನಾಂಕ:10–1–2011 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:115, ವನ್ನಾರ್‌ಪೇಟೆ, 2ನೇ ಮುಖ್ಯ ರಸ್ತೆ, ವಿವೇಕನಗರ ಸ್ವತ್ತಿನ ಸಂಖ್ಯೆ:2 ರಲ್ಲಿ 2794 ಚದರ ಅಡಿಗಳ ಜಾಗವನ್ನು ಶ್ರೀಮತಿ ಮುನಿಯಮ್ಮ ಪೂಜಾರಿ, ತುಲಕಮ್ಮ ದೇವಸ್ಥಾನ, ವಿವೇಕನಗರ, ಇವರಿಗೆ ದಿನಾಂಕ:6–2–1979 ರಿಂದ 5–2–1982 ವರೆಗೆ ವಾರ್ಷಿಕ ಗುತ್ತಿಗೆ ಮೊತ್ತ ರೂ.10/– ಗಳ ಆಧಾರದ ಮೇಲೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ಮುಗಿದಿರುವ ಕಾರಣ 1974 ರ ಕೆ.ಪಿ.ಪಿ. ಕಾಯ್ದೆ ಸೆಕ್ಷೆನ್–4(1) ರನ್ವಯ ದಿನಾಂಕ:5–8–2010 ರಂದು ನೋಟೀಸ್ ನೀಡಲಾಗಿರುತ್ತದೆ.

ಸದರಿ ನೋಟೀಸ್‌ಗೆ ಉತ್ತರವಾಗಿ ಶ್ರೀಮತಿ ಮುನಿಯಮ್ಮನವರ ಮಗ ಮುನಿಸ್ವಾಮಿ ವೇಣು ಎಂಬುವವರ ತಾಯಿಯವರು ದಿನಾಂಕ:26–2–2002 ರಂದು ನಿಧನ ಹೊಂದಿರುವುದಾಗಿ ಮುಂದಿನ 25 ವರ್ಷಗಳ ಅವಧಿಗೆ ನವೀಕರಣಕ್ಕಾಗಿ ಕೋರಿರುತ್ತಾರೆ.

ಪ್ರಸ್ತುತ ಪ್ರದೇಶದ ಸ್ಥಳ ಪರಿಶೀಲನಾ ವರದಿಯಂತೆ, ಪ್ರಸ್ತುತ ಪ್ರದೇಶದ ಸುತ್ತ–ಮುತ್ತಲೂ ಸುಭದ್ರವಾದ ಕಾಂಪೌಂಡ್ ಮತ್ತು ಗೇಟ್‌ನ್ನು ಅಳವಡಿಸಲಾಗಿದ್ದು 5 ವಿವಿಧ ದೇವಸ್ಥಾನಗಳಿದ್ದು, 15X10 ಅಡಿ ಪ್ರದೇಶದಲ್ಲಿ ದೇವಸ್ಥಾನದ ಪೂಜಾರಿಯಾದ ಕ್ಯಾಪ್ಟರ್ ಮುನಿಸ್ವಾಮಿ ವೇಣು ರವರು ಉಪಯೋಗಿಸುತ್ತಿದ್ದು, ಖಾಲಿ ಜಾಗದಲ್ಲಿ ದೊಡ್ಡ ಅರಳಿ ಮರಗಳಿದ್ದು, ಸಂಪೂರ್ಣ ಪ್ರದೇಶ ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದೆ.

ಗುತ್ತಿಗೆ ಕರಾರು ಪತ್ರದ ಪ್ರತಿ ಪರಿಶೀಲಿಸಲಾಗಿದೆ, ನಿವೇಶನ ಸಂಖ್ಯೆ:2 ರಲ್ಲಿ 2794 ಚದರ ಅಡಿಗಳಷ್ಟು ದಿನಾಂಕ:6–2–1979 ರ ಮಾಹೇಯಾನ ಬಾಡಿಗೆ ರೂ.10/– ಗಳಿಗೆ 3 ವರ್ಷಗಳ ಅವಧಿಗೆ ದೇವಸ್ಥಾನದ ಟ್ರಸ್ಟ್ ಪೂಜಾರಿ ಶ್ರೀಮತಿ ಮುನಿಯಮ್ಮ ಪೂಜಾರಿ ಮತ್ತು ಅದರ ವಾರಸುದಾರರಿಗೆ ಎಂಬುದಾಗಿದೆ. ಗುತ್ತಿಗೆ ಕರಾರು ಪ್ರಕಾರ ಕಂಡಿಕೆ(5) ರಲ್ಲಿ ಈ ಪ್ರದೇಶದಲ್ಲಿ ಆಡಳಿತ ಕಛೇರಿ ಕಟ್ಟಡ ನಿರ್ಮಿಸಲು ಎಂಬುದಾಗಿದೆ. ಹಾಗೂ ಕಂಡಿಕೆ (8) ರಲ್ಲಿ 99 ವರ್ಷಗಳ ಅವಧಿ ಎಂಬುದಾಗಿ ನಮೂದಿಸಲಾಗಿದೆ. ಮತ್ತು ಅವಧಿ ಮುಗಿದ ನಂತರ ಉಭಯೇತರ ಸಮ್ಮತಿ ಮೇರೆಗೆ ನವೀಕರಿಸುವ ಬಗ್ಗೆಯೂ ಸಹಾ ಪ್ರಸ್ತಾಪಿಸಲಾಗಿದೆ.

ಶ್ರೀಮತಿ ಮುನಿಯಮ್ಮನವರ ಮಗ ಕ್ಯಾಪ್ಟನ್ ಮುನಿಸ್ವಾಮಿ ವೇಣು ಅರ್ಜುನ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತರು, ದೇವಸ್ಥಾನದ ನಿರ್ವಹಣೆ ಮಾಡಿಕೊಂಡು ಬರುತ್ತಿದ್ದು, ಕಾಲಕಾಲಕ್ಕೆ ನೀಡಬೇಕಾದ ಬಾಡಿಗೆ ಇತ್ಯಾದಿಗಳನ್ನು ನೀಡುತ್ತಿದ್ದು, ಹಿಂದಿನ ಅವಧಿ ದಿನಾಂಕ:5–2–1982 ಕ್ಕೆ ಮುಕ್ತಯಗೊಂಡಿದ್ದು, ಅಂದಿನಿಂದ ಗುತ್ತಿಗೆ ನೋಂದಾಯಿಸುವವರೆಗೆ ಮತ್ತು ನವೀಕರಿಸುವ ಅವಧಿಗೆ ಮಾಹೇಯಾನ ರೂ.100/– ನಂತೆ ಕರಾರು ಪತ್ರ ನೋಂದಾಯಿಸುವ ದಿನಾಂಕದಿಂದ 5 ವರ್ಷಗಳ ಅವಧಿಗೆ ನವೀಕರಿಸಲು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:10–1–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25–01–2011ರ ನಿರ್ಣಯ.

–ಮುಂದೂಡಿದೆ–

## 13]. ವಿಷಯದ ಸಂಖ್ಯೆ :–ತೆಆಸ್ಥಾಸ/224/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ ಬಿ12(1)ಪಿ.ಆರ್/54/10–11 ದಿನಾಂಕ : 29–01–2011ರಲ್ಲಿ ವಿವರಿಸಿರುವಂತೆ, ಜಂಟಿ ಆಯುಕ್ತರು (ದಾಸಹರಳ್ಳಿ) ರವರ ಪತ್ರ ಸಂಖ್ಯೆ: ಬಿಬಿಎಂಪಿ/ದಾವ/ಜಂಆ/ಸಿಬ್ಬಂದಿ/ಪಿಆರ್/44/10–11, ದಿನಾಂಕ: 09–12–2010ರ ಪತ್ರದಲ್ಲಿ ಹಿಂದಿನ ನಗರ ಸಭೆಯಿಂದ ನೇಮಕವಾದ 05–ವಾಹನ ಚಾಲಕರು, 01–ಬೆರಳಚ್ಚುಗಾರರು, 01–ರಾತ್ರಿಕಾವಲುಗಾರರು, 100–ವಾಟರ್‌ಮ್ಯಾನ್‌ಗಳು, 01–ಬಾಲವಾಡಿ ಶಿಕ್ಷಕಿ, 01–ಆಯಾ ಮತ್ತು ಗ್ರಾಮ ಪಂಚಾಯಿತಿಯಿಂದ ನೇಮಕವಾದ 34–ಕರವಸೂಲಿಗಾರರು, ವಾಟರ್‌ಮ್ಯಾನ್, ಗ್ರೂಪ್ 'ಡಿ' ಎಲೆಕ್ಟ್ರಿಷಿಯನ್ ಒಟ್ಟು–143 ಮಂದಿ ಹಂಗಾಮಿ ನೌಕರರುಗಳು ದಾಸರಹಳ್ಳಿ ವಲಯದಲ್ಲಿ ಮುಂದುವರೆದಿದ್ದು, ಈ ಹಂಗಾಮಿ ನೌಕರರುಗಳಿಗೆ ವೇತನ ಶ್ರೇಣಿಯ ಕನಿಷ್ಠ ವೇತನ / ಎಸ್.ಆರ್. ದರ / ಕನಿಷ್ಠ ವೇತನ ಕಾಯ್ದೆಯಡಿ ಕನಿಷ್ಠ ವೇತನ ನೀಡಲಾಗುತ್ತಿದೆ. ಹಾಗೂ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: ಡಬ್ಲ್ಯುಪಿನಂ.2679–792/2010 ಮತ್ತು ಡಬ್ಲ್ಯುಪಿ ನಂ.32119–32133/10ರ ದಿನಾಂಕ:25–11–2010ರಂದು ಆದೇಶದಂತೆ, ಶ್ರೀ ವಿ.ಹೆಚ್. ರುದ್ರೇಶ್ ಮತ್ತು ಇತರೇ 16 ಮಂದಿ ಹಂಗಾಮಿ ಕೈರಸೀದಿ

ನೀರುಸರಬರಾಜು ಸಹಾಯಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ದಿ: 01–04–2006 ರಿಂದ ಜಾರಿಗೆ ಬರುವಂತೆ, ಮಂಜೂರು ಮಾಡಲು ಮತ್ತು ಘನ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಸದರಿ ಸೌಲಭ್ಯವನ್ನು ಇದೇ ರೀತಿ (Similarly Placed Persons) ಕಾರ್ಯನಿರ್ವಹಿಸುತ್ತಿರುವ ಉಳಿದ 126 ಮಂದಿ ಹಂಗಾಮಿ ನೌಕರರಿಗೂ ವಿಸ್ತರಿಸಿ, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ದಿನಾಂಕ: 01–04–2006 ರಿಂದ ಜಾರಿಗೆ ಬರುವಂತೆ, ಮಂಜೂರು ಮಾಡಲು ಕೋರಿದ್ದರು.

ಈ ಮೇರೆಗೆ, ದಾಸರಹಳ್ಳಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೇಲ್ಕಂಡ 143 ಮಂದಿ ವಿವಿದ ಹುದ್ದೆಗಳ ಹಂಗಾಮಿ ನೌಕರರುಗಳಲ್ಲಿ ಶ್ರೀ ವಿ. ಹೆಚ್. ರುದ್ರೇಶ್ ಮತ್ತು ಇತರೇ 16 ಮಂದಿ ಹಂಗಾಮಿ ನೀರು ಸರಬರಾಜು ಸಹಾಯಕರುಗಳಿಗೆ ಅಂದರೆ ಒಟ್ಟು 17 ಮಂದಿ ಹಂಗಾಮಿ ನೀರು ಸರಬರಾಜು ಸಹಾಯಕರುಗಳಿಗೆ ಘನ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: ಡಬ್ಲ್ಯುಪಿನಂ.2679–792/2010 ಮತ್ತು ಡಬ್ಲ್ಯುಪಿ ನಂ. 32119–32133/10 ದಿನಾಂಕ: 25–11–210ರ ಆದೇಶದಂತೆ, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ದಿನಾಂಕ: 01–04–2006ರಿಂದ ಜಾರಿಗೆ ಬರುವಂತೆ, ಮಂಜೂರು ಮಾಡಲು ಜಂಟಿ ಆಯುಕ್ತರು (ದಾಸರಹಳ್ಳಿ) ರವರಿಗೆ ಅಗತ್ಯ ಕ್ರಮ ಕೈಗೊಳ್ಳಲು ಆಂತರಿಕ ಕಛೇರಿ ಟಿಪ್ಪಣಿ ದಿನಾಂಕ: 23–12–2010ರ ಮೂಲಕ ಸೂಚಿಸಲಾಗಿರುತ್ತದೆ.

ದಾಸರಹಳ್ಳಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಳಿದ ವಿವಿಧ ಹುದ್ದೆಗಳ 126 ಮಂದಿ ಹಂಗಾಮಿ ನೌಕರರಿಗಳಿಗೂ ಸಹ ಶ್ರೀ ವಿ. ಹೆಚ್. ರುದ್ರೇಶ್ ಹಾಗೂ ಇತರರು ಘನ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: ಡಬ್ಲ್ಯುಪಿನಂ.2679–792/2010 ಮತ್ತು ಡಬ್ಲ್ಯುಪಿ ನಂ.32119–32133/10ಕ್ಕೆ ದಿನಾಂಕ: 25–11–2010ರಂದು ನೀಡಿರುವ ಉಚ್ಚ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ದಿನಾಂಕ: 01–04–2006 ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಮಂಜೂರು ಮಾಡುವ ಸಂಬಂಧ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಕೋರಲಾದ ಮೇರೆಗೆ, ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ವರದಿ ಸಂಖ್ಯೆ:ಬಿಬಿಎಂಪಿ/ಎಲ್‌ಸಿ/ಆರ್.ಆರ್/1465/10–11, ದಿನಾಂಕ: 05–01–2011. ರಂತೆ ದಾಸರಹಳ್ಳಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿ. ಹೆಚ್. ರುದ್ರೇಶ್, ಮತ್ತು ಇತರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡಲಾಗಿದ್ದು, ಹಾಗೂ ಪಾಲಿಕೆಯ ಎಲ್ಲಾ ವಲಯಗಳಲ್ಲಿ ಈಗಾಗಲೇ ಹಂಗಾಮಿ ನೌಕರರುಗಳಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಮಂಜೂರು ಮಾಡಲಾಗಿದ್ದು, ಇದೆ ರೀತಿ ಘನ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಅನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಪಾವತಿಸುವ ಬಗ್ಗೆ ಕಾನೂನಿನ ಅಡಿಯಲ್ಲಿ ಮುಂದಿನ ಕ್ರಮ ಜರುಗಿಸಬೇಕೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಶ್ರೀ ವಿ. ಹೆಚ್. ರುದ್ರೇಶ್ ಹಾಗೂ ಇತರರು ಘನ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: ಡಬ್ಲ್ಯುಪಿನಂ.2679–792/2010 ಮತ್ತು ಡಬ್ಲ್ಯುಪಿ ನಂ.32119–32133/10ಕ್ಕೆ ದಿನಾಂಕ: 25–11–2010ರಂದು ನೀಡಿರುವ ಘನ ಉಚ್ಚ ನ್ಯಾಯಾಲಯದ ಆದೇಶ ಮತ್ತು ಸಂಖ್ಯೆ:ಬಿಬಿಎಂಪಿ/ಎಲ್‌ಸಿ/ ಆರ್.ಆರ್/1465/10–11,ದಿನಾಂಕ : 05–01–2011ರ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ವರದಿಯಂತೆ ದಾಸರಹಳ್ಳಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ
ಹುದ್ದೆಗಳ 126 ಮಂದಿ ಹಂಗಾಮಿ ನೌಕರರುಗಳಿಗೆ ದಿನಾಂಕ: 01–04–2006 ರಿಂದ ಅನ್ವಯವಾಗುವಂತೆ, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

–ಮುಂದೂಡಿದೆ–

## 14]. ವಿಷಯದ ಸಂಖ್ಯೆ :–ತೆಆಸ್ಥಾಸ/225/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ : ಉಆ(ಕಂ) ಪಿ.ಆರ್/1658/10–11, ದಿನಾಂಕ:01–02–2011ರಲ್ಲಿ ವಿವರಿಸಿರುವಂತೆ, ಕರ್ನಾಟಕ ಪೌರ ನಿಗಮಗಳ ಕಾಯಿದೆ ಕಲಂ 108(ಎ) ಅನುಸಾರ ಪ್ರದೇಶವಾರು ಯೂನಿಟ್ ದರದ ಆಧಾರದ ಮೇಲೆ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕ : 1–4–2008 ರಿಂದ ಜಾರಿಗೆ ತರಲಾಗಿತ್ತು. ಈ ರೀತಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಜಾರಿಗೆ ತರುವಾಗ ಹಿಂದೆ 2000–2001 ನೇ ಸಾಲಿನಲ್ಲಿ ಜಾರಿಗೊಳಿಸಿದಂತ ದರಗಳನ್ನೇ ಅಳವಡಿಸಿಕೊಳ್ಳಲಾಗಿತ್ತು. ನಿಯಮಾನುಸಾರ ಕಟ್ಟಡದ ಇಳುವರಿಯನ್ನು ನೀಡಲಾಗಿತ್ತು. ಘಟಕವಾರು ಮೌಲ್ಯದಂತೆ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿಯು ದಿನಾಂಕ: 1–4–2008 ರಂದು ಜಾರಿಗೆ ಬಂದಿದ್ದು, ಪ್ರತಿ ಮೂರು ವರ್ಷಳಿಗೊಮ್ಮೆ ನಂತರ ಕರ್ನಾಟಕ ಪೌರ ನಿಗಮಗಳ ಕಾಯಿದೆ ಕಲಂ 108(ಎ) (16)ರ ಅನುಸಾರ ಶೇಕಡ 15 ರಿಂದ 30 ರವರೆಗೆ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಬೇರೆ ಬೇರೆ ಪ್ರದೇಶಗಳ ಹಾಗೂ ಬೇರೆ ಬೇರೆ ಕಟ್ಟಡಗಳಿಗೆ ವಿವಿಧ ರೀತಿಯ ದರಗಳನ್ನು ವಿಧಿಸಬಹುದಾಗಿದೆ.

ಪ್ರಸ್ತುತ ಜಾರಿಯಲ್ಲಿರುವ ದರಗಳನ್ನು ದಿನಾಂಕ: 1–4–2000 ರಲ್ಲಿ ಜಾರಿಗೆ ತಂದಿದ್ದು ಅಂದಿನಿಂದ ಇಂದಿನವರೆಗೂ ದರಗಳು ಪರಿಷ್ಕರಣೆ ಆಗಿರುವುದಿಲ್ಲ. ಆದಾಗ್ಯೂ ಕಟ್ಟಡ ಇಳುವರಿಯನ್ನು 2 ಬಾರಿ ಅಂದರೆ ದಿನಾಂಕ: 1/4/2000 ಮತ್ತು ದಿನಾಂಕ : 1–4–2008 ರಿಂದ ಜಾರಿಗೆ ನೀಡಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯು ದಿನಾಂಕ : 31–3–2011 ಕ್ಕೆ ಮೂರು ವರ್ಷಗಳ ಅವಧಿ ಮುಗಿಯಲಿದ್ದು ದಿನಾಂಕ: 1–4–2011 ರಿಂದ ಆಸ್ತಿ ತೆರಿಗೆ ದರ ಪರಿಷ್ಕರಣೆ ಜಾರಿಗೆ ತರಬೇಕಾಗಿದೆ. ಈ ಪರಿಷ್ಕರಣೆಯು ಮುಂದಿನ 3 ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಕಾಯ್ದೆಯಲ್ಲಿ ಶೇಕಡ 15 ರಿಂದ 30 ರವರೆಗೆ ಆಸ್ತಿ ತೆರಿಗೆ ದರವನ್ನು ಪರಿಷ್ಕರಣೆ ಮಾಡಬೇಕಾಗಿರುವುದರಿಂದ ಮತ್ತು ದಿನಾಂಕ : 1–4–2011 ರಿಂದ ಮತ್ತೆ ಕಟ್ಟಡ ಇಳುವರಿ ನೀಡಬೇಕಾಗಿರುವುದರಿಂದ ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ವಸತಿ ಸ್ವತ್ತುಗಳಿಗೆ ಶೇಕಡ 20 ರಂತೆ ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇಕಡ 25 ರಂತೆ ದರಗಳನ್ನು ಪರಿಷ್ಕರಿಸಿ ದಿನಾಂಕ : 1–4–2011 ರಿಂದ ಜಾರಿಗೊಳಿಸಬೇಕಾಗಿದೆ.

ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ರ ಕಲಂ 108(ಎ) (16) ರ ಅನುಸಾರ ಮೇಲ್ಕಂಡಂತೆ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಜಾರಿಗೆ ತರುವ ಈ ಪ್ರಸ್ತಾವನೆಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

–ಮುಂದೂಡಿದೆ–

## 15]. ವಿಷಯದ ಸಂಖ್ಯೆ :–ತೆಆಸ್ಥಾಸ/226/2010–11

ಆಯುಕ್ತರವರ ಟಿಪ್ಪಣಿ ಸಂ:ಉಆ(ಜಾ)ಪಿಆರ್/34/09–10, ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮೆ॥ ಸರ್ವ್ ಅಂಡ್ ವ್ಯಾಲಿ ಸಂಸ್ಥೆಯವರಿಗೆ ಬಿ.ಓ.ಟಿ ಆಧಾರದಲ್ಲಿ ವಾಣಿಜ್ಯ ಜಾಹೀರಾತು ಹಕ್ಕುಗಳ ಎದುರು 30 ಸ್ಥಳಗಳಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡಲು ಏಳು ವರ್ಷಗಳ ಕಾಲಾವಧಿಗೆ ದಿನಾಂಕ:28.08.2010ರ ಪಾಲಿಕೆಯ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ. ಸದರಿ ಸಂಸ್ಥೆಯವರು ದಿನಾಂಕ: 21.01.2011ರಂದು ಮನವಿಯನ್ನು ಸಲ್ಲಿಸಿ

ಸಾರ್ವಜನಿಕ ಶೌಚಾಲಯಗಳ ಕಾಲಾವಧಿಯನ್ನು ಏಳು ವರ್ಷಗಳಿಂದ ಐದು ವರ್ಷಗಳಿಗೆ ಕಡಿಮೆಗೊಳಿಸಲು ಕೋರಿರುತ್ತಾರೆ. ಸದರಿ ಶೌಚಾಲಯಗಳ ಸ್ಥಳಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| **ಕ್ರ. ಸಂ.** | **ಸ್ಥಳಗಳ ವಿವರ** | | **ಅಳತೆ** | **ಸಂ.** | **ಷರಾ ನಿರ್ಮಾಣ ಮಾಡಲು ಸೂಕ್ತವೇ/ಇಲ್ಲವೇ** |
|---|---|---|---|---|---|
| 1. | ಅನಿಲ್ ಕುಂಬ್ಳೆ ಸರ್ಕಲ್ | ಕರ್ನಾಟಕ ಸ್ಟೇಟ್ ಪೊಲೀಸ್ ವೈರ್‌ಲೆಸ್ ಕಂಟ್ರೋಲ್ ರೂಂ ಹತ್ತಿರ | 18 x 29 | 1 | ಸೂಕ್ತ |
| 2. | ಎಂ.ಜಿ.ಸರ್ಕಲ್ (ಕ್ವೀನ್ಸ್ ಸರ್ಕಲ್) | ಚಿನ್ನಸ್ವಾಮಿ ಸ್ಟೇಡಿಯಂ ಎದುರು, ಕಬ್ಬನ್‌ಪಾರ್ಕ್ ಪಕ್ಕದಲ್ಲಿ | 4.2 ಮೀ | 1 | ಸೂಕ್ತ |
| 3. | ರಾಜಭವನ ರಸ್ತೆ | ಟೆಲಿಗ್ರಾಫ್ ಹೌಸ್ ಎದುರು, ವಿಶ್ವೇಶ್ವರಯ್ಯ ಟವರ್ಸ್ ಹತ್ತಿರ | 4.5 ಮೀ | 1 | ಸೂಕ್ತ |
| 4. | ಕಬ್ಬನ್ ರಸ್ತೆ | ಚಿನ್ನಸ್ವಾಮಿ ಸ್ಟೇಡಿಯಂ ಪಕ್ಕದಲ್ಲಿ, ಹೆಚ್.ಎ.ಎಲ್. ಕಾರ್ಪೋರೇಟ್ ಆಫೀಸ್ ಹತ್ತಿರ | ---- | 1 | ಜಾಗವಿರುವುದಿಲ್ಲ (ಮೆಟ್ರೋ ಕಾಮಗಾರಿ) |
| 5. | ರಾಜಭವನ ರಸ್ತೆ ಎದುರು | ರಾಜಭವನ ರಸ್ತೆ–ಆಲಿ ಆಸ್ಕಾರ್ ರಸ್ತೆ ಜಂಕ್ಷನ್, ಎ.ಐ.ಆರ್. ಕಾಂಪೌಂಡ್ ಪಕ್ಕದಲ್ಲಿ | 10 x 30 | 1 | ಸೂಕ್ತವಲ್ಲ |
| 6. | ಸ್ಯಾಂಕಿ ರಸ್ತೆ | ಪ್ಯಾಲೇಸ್ ಕ್ರಾಸ್ ರಸ್ತೆ– ಸ್ಯಾಂಕಿ ರಸ್ತೆ ಜಂಕ್ಷನ್, ಪ್ಯಾಲೇಸ್ ಗ್ರೌಂಡ್ ಕಾಂಪೌಂಡ್ ವಾಲ್ ಪಕ್ಕದಲ್ಲಿ | 14 ಅಡಿ | 1 | ರಸ್ತೆ ಅಗಲೀಕರಣ ಚಾಲ್ತಿಯಲ್ಲಿರುತ್ತದೆ |
| 7. | ಹೊಸೂರು ರಸ್ತೆ | ಆಡುಗೋಡಿ ಸಿಮಿಟ್ರಿ ಪಕ್ಕದಲ್ಲಿ | 10 ಅಡಿ | 1 | ಸೂಕ್ತ |
| 8. | ಹೊಸೂರು ರಸ್ತೆ | ಹೊಸೂರು ರಸ್ತೆ–ಕೋರಮಂಗಲ ಜಂಕ್ಷನ್, ರಾಹೇಜ ಆರ್ಕೇಡ್ ಜಂಕ್ಷನ್, ಯು.ಸಿ.ಓ ಬ್ಯಾಂಕ್ ನಂತರ | 14 ಅಡಿ | 1 | ಸೂಕ್ತ |
| 9. | ಇಂಡಿಯನ್ ಎಕ್ಸ್‌ಪ್ರೆಸ್ ಸರ್ಕಲ್ | ಬಳೀ ಕುಂದ್ರಿ ಸರ್ಕಲ್, ಪಾರ್ಸಿ ದೇವಸ್ಥಾನದ ಹತ್ತಿರ | 12 ಅಡಿ | 1 | ದೇವಸ್ಥಾನದ ತಕರಾರು |
| 10. | ಬಸವೇಶ್ವರ ಸರ್ಕಲ್ | ಚಾಲುಕ್ಯ ಹೋಟೆಲ್ ಜಂಕ್ಷನ್, ಹೈ ಪಾಯಿಂಟ್ ಹತ್ತಿರ ಶಾಸಕರ ಭವನ ಹಿಂಬಾಗ | 10 ಅಡಿ | 1 | ಸೂಕ್ತ |
| 11. | ರೆಸಿಡೆನ್ಸಿ ರಸ್ತೆ | ಬಿಷಪ್ ಕಾಟನ್ ಬಾಯ್ಸ್ ಸ್ಕೂಲ್ ಪಕ್ಕದಲ್ಲಿ | 4 ಅಡಿ | 1 | ಸೂಕ್ತವಲ್ಲ |
| 12. | ಚರ್ಚ್ ಸ್ಟ್ರೀಟ್ | ಚರ್ಚ್ ಸ್ಟ್ರೀಟ್, ಮಸೀದಿ ರಸ್ತೆ ಜಂಕ್ಷನ್ | 4 ಅಡಿ | 1 | ಸ್ಥಳವಿರುವುದಿಲ್ಲ |
| 13. | ಎಂ.ಎಲ್. ಸಿದ್ಧರಾಜು ರಸ್ತೆ | ಲಾವೆಲ್ಲಿ ರಸ್ತೆ ಜಂಕ್ಷನ್, ಮಡೋವಿ ಮೋಟರ್ಸ್ | ---- | 1 | ಪಾದಚಾರಿವಿರುವುದಿಲ್ಲ ಸೂಕ್ತವಲ್ಲ |
| 14. | ಸ್ಯಾಂಕಿ ರಸ್ತೆ | ಕಾವೇರಿ ಥಿಯೇಟರ್ ಜಂಕ್ಷನ್, ಪ್ಯಾಲೇಸ್ ಗ್ರೌಂಡ್ ಕಾಂಪೌಂಡ್ ವಾಲ್ ಪಕ್ಕದಲ್ಲಿ | 4 ಅಡಿ | 1 | ರಸ್ತೆ ಅಗಲೀಕರಣ |
| 15. | ಹಳೇ ಏರ್‌ಪೋರ್ಟ್ ರಸ್ತೆ | ಕಮ್ಯಾಂಡ್ ಆಸ್ಪತ್ರೆ ಹತ್ತಿರ | 4.7 ಮೀ x 4 ಮೀ | 1 | ಸೂಕ್ತ |
| 16. | ರೇಸ್ ಕೋರ್ಸ್ ರಸ್ತೆ | ಟ್ರಿಲಿಟ್ ಜಂಕ್ಷನ್ ಹತ್ತಿರ, ಬೆಂಗಳೂರು | 3.0 | 1 | ಸೂಕ್ತವಲ್ಲ |

| | | | | | |
|---|---|---|---|---|---|
| | ತಾಜ್ ವೆಸ್ಟ್ ಎಂಡ್ ಎದುರು | ಟ್ರೋಫ್ ಕ್ಲಬ್ ಕಾಂಪೌಂಡ್ ಪಕ್ಕದಲ್ಲಿ | ಮೀ | | |
| 17. | ಎಂ.ಜಿ.ಸರ್ಕಲ್ (ಟ್ರಿನಿಟಿ ಸರ್ಕಲ್) | ಹೋಲಿ ಟ್ರಿನಿಟಿ ಚರ್ಚ್ ಹತ್ತಿರ | 13 ಅಡಿ | 1 | ಬೀದಿ ಕಂಬವನ್ನು ಸ್ಥಳಾಂತರಿಸಿ ನಿರ್ಮಿಸ ಬಹುದಾಗಿರುತ್ತದೆ – ಸೂಕ್ತ |
| 18. | ಹಳೇ ಏರ್‌ಪೋರ್ಟ್ ರಸ್ತೆ | ಬ್ರಿಟನಿಯಾ ಇಂಡಸ್ಟ್ರೀಯಸ್ ಎದುರು ಟೈಟನ್ ಇಂಡಸ್ಟ್ರೀಸ್ ಎದುರು | 8 ಅಡಿ | 1 | ಸೂಕ್ತ |
| 19. | ವಿಠಲ್ ಮಲ್ಯ ರಸ್ತೆ | ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲ್ ಪಕ್ಕದಲ್ಲಿ (ಕಂಠೀರವ ಸ್ಟೇಡಿಯಂ ಎದುರು) | 14 ಅಡಿ | 1 | ಸೂಕ್ತವಲ್ಲ |
| 20. | ಕೋರಮಂಗಲ ಇಂಟರ್ ಮಿಡಿಯಟ್ ರಿಂಗ್ ರಸ್ತೆ | ಶ್ರೀನಿವಾಗಿಲು ಹತ್ತಿರ–ಈಜಿಪುರ ಜಂಕ್ಷನ್ (ಹೈಪ್ ಬಸ್ ತಂಗುದಾಣದ ಪಕ್ಕದಲ್ಲಿ) | 5 ಮೀ | 1 | ಸೂಕ್ತ |
| 21. | ಬಳ್ಳಾರಿ ರಸ್ತೆ | ಮೇಖ್ರಿ ಸರ್ಕಲ್ ಹತ್ತಿರ, ಪ್ಯಾಲೇಸ್ ಗ್ರೌಂಡ್ ಕಾಂಪೌಂಡ್ ವಾಲ್ ಪಕ್ಕದಲ್ಲಿ | 2 ಮೀ | 1 | ರಸ್ತೆ ಅಗಲೀಕರಣ ಸೂಕ್ತವಲ್ಲ |
| 22. | ಕೋರಮಂಗಲ ಇಂಟರ್ ಮಿಡಿಯಟ್ ರಿಂಗ್ ರಸ್ತೆ | ಇಂದಿರಾನಗರ ಹತ್ತಿರ–ಏರ್‌ಪೋರ್ಟ್ ರಸ್ತೆ ಜಂಕ್ಷನ್ (ಇಸ್ರೋ ಕ್ವಾರ್ಟಸ್ ಪಕ್ಕದಲ್ಲಿ) | 8 ಮೀ | 1 | ಸೂಕ್ತ |
| 23. | ರಿಚ್‌ಮಂಡ್ ರಸ್ತೆ | ಬಾಲ್ಡ್‌ವಿನ್ಸ್ ಗರ್ಲ್ಸ್ ಹೈಸ್ಕೂಲ್, ಟಾಟಾ ಇಂಡಿಕಾಂ ಆಫೀಸ್ ಎದುರು (ಹೆಚ್.ಡಿ.ಎಫ್.ಸಿ. ಬ್ಯಾಂಕ್ ಎದುರು) | 1.2 ಮೀ | 1 | ಸೂಕ್ತವಲ್ಲ |
| 24. | ಕಸ್ತೂರಿಬಾ ರಸ್ತೆ | ವಿಶ್ವೇಶ್ವರಯ್ಯ ಮ್ಯೂಸಿಯಂ ನಂತರ | 1.2 ಮೀ | 1 | ರಸ್ತೆ ಅಗಲೀಕರಣ ಸೂಕ್ತವಲ್ಲ |
| 25. | ಡಾ॥ಬಿ.ಆರ್.ಅಂಬೇಡ್ಕರ್ ವೀದಿ | ಕಬ್ಬನ್ ಪಾರ್ಕ್ ಕಾಂಪೌಂಡ್ ಪಕ್ಕದಲ್ಲಿ, ಎಂ.ಎಸ್.ಬಿಲ್ಡಿಂಗ್ ಎದುರು | 2.1 ಮೀ | 1 | ಸೂಕ್ತವಲ್ಲ |
| 26. | ಹಳೇ ವಿಮಾನ ರಸ್ತೆ | ರಾಜರಾಜೇಶ್ವರಿ ಥಿಯೇಟರ್ ಎದುರು (ಎಸ್.ಎನ್.ಎಸ್. ಆರ್ಕೇಡ್) | 5.2 ಮೀ | 1 | ಸೂಕ್ತ |
| 27. | ರೆಸಿಡೆನ್ಸಿ ರಸ್ತೆ ಆಶೀರ್ವಾದಂ ಜಂಕ್ಷನ್ | ಗೂಡ್ ಶೇಪರ್ಡ್ ಕಾನ್ವೆಂಟ್ ಹತ್ತಿರ, ಸೆಂಟ್ ಜೋಸೆಫ್ ಕಾಲೇಜ್ ಎದುರು | 5.2 ಮೀ | 1 | ಸೂಕ್ತ |
| 28. | ವಿಕ್ಟೋರಿಯಾ ರಸ್ತೆ | ಶಾಪರ್ಸ್ ಶಾಪ್ ಹತ್ತಿರ Embassy heights | 6 ಮೀ | 1 | ಸೂಕ್ತ |
| 29. | ಸೌತ್ ಎಂಡ್ ಸರ್ಕಲ್ | ಪೆಟ್ರೋಲ್ ಬಂಕ್ ಹತ್ತಿರ | 4.8 ಮೀ | 1 | ಸೂಕ್ತ |
| 30. | ಬನ್ನೇರುಘಟ್ಟ ರಸ್ತೆ | ಜಯದೇವ ಇಸ್ಟಿಟ್ಯೂಟ್ ಆಫ್ ಕ್ರಾಡಿಯೋಲಜಿ ಹತ್ತಿರ (Vakil Square) ಕ್ಲಿಯರ್ ಚಾನೆಲ್ ಬಸ್ ತಂಗುದಾಣದ ಪಕ್ಕದಲ್ಲಿ | 4.5 ಮೀ | 1 | ಸೂಕ್ತ |

**ಮೆ॥ ಸರ್ವ್ ಅಂಡ್ ವ್ಯಾಲಿ ಸಂಸ್ಥೆಯವರ ಮನವಿಯಂತೆ ದಿನಾಂಕ:12.08.2010ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನವನ್ನು ಮಾರ್ಪಡಿಸಿ ಏಳು ವರ್ಷಗಳ ಕಾಲಾವಧಿ ಮತ್ತು 30 ಶೌಚಾಲಯಗಳ ಬದಲಾಗಿ ಐದು ವರ್ಷಗಳ ಕಾಲಾವಧಿಗೆ 16 ಸಾರ್ವಜನಿಕ ಶೌಚಾಲಯಗಳನ್ನು ಜಾಹೀರಾತು ಹಕ್ಕುಗಳ ಎದುರು ಡಿ.ಬಿ.ಓ.ಓ.ಟಿ ಆಧಾರದ ಮೇರೆಗೆ ವಹಿಸಿಕೊಡಲು ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.**

<u>ನಿರ್ಣಯ :– ಆಯುಕ್ತರ ದಿನಾಂಕ 07–02–2011ರ ಟಿಪ್ಪಣಿ ಒಪ್ಪಿದೆ.</u>

## 16]. ವಿಷಯದ ಸಂಖ್ಯೆ :–ತೆಆಸ್ಥಾಸ/227/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ:ಅಆ(ಕ/ಆ)ಪಿಎಸ್‌ಆರ್(4)111/10–11, ದಿನಾಂಕ:01–02–2011ರಲ್ಲಿ ವಿವರಿಸಿರುವಂತೆ, ಶ್ರೀ ಟಿ. ಪ್ರಭಾಕರ್, ಅಧ್ಯಕ್ಷರು ಕಬೀರ್ ಟ್ರಸ್ಟ್, ನಂ. 11, ತಿರುಮಲ ರಾವ್ ಗಾರ್ಡನ್, ನಂದಿದುರ್ಗ ರೋಡ್ ಕ್ರಾಸ್, ಜಯಮಹಲ್, ಬೆಂಗಳೂರು–560046. ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಟ್ರಸ್ಟ್ 24 ವರ್ಷಗಳಿಂದ ಸತತವಾಗಿ ಬೆಂಗಳೂರು ಸಿಟಿ ಜಯಚಾಮರಾಜೇಂದ್ರ ವಾರ್ಡ್ ನಂ. 46 ರಲ್ಲಿರುವ ಕಬೀರ್ ಆಶ್ರಮ, ಮೋತಿ ನಗರ, ಆರ್.ಟಿ. ನಗರ ಅಂಚೆ, ಬೆಂಗಳೂರು ರಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಉಚಿತ ತರಗತಿಗಳನ್ನು ಪರಿಣಿತ ಉಪಾಧ್ಯಾಯರುಗಳಿಂದ ನಡೆಸುತ್ತಿದ್ದು, ಸುತ್ತ ಮುತ್ತಲಿನ ಪಾಲಿಕೆಯು, ಸರ್ಕಾರಿ ಮತ್ತು ಇತರ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಾಂಗ ಮಾಡುತ್ತಿರುವ ಸುಮಾರು 700 ರಿಂದ 800 ಬಡ ವಿದ್ಯಾರ್ಥಿಗಳು ಈ ತರಗತಿಗಳಿಗೆ ಬಂದು ಇದರ ಪ್ರಯೋಜನವನ್ನು ಪಡೆಯುತ್ತಿದ್ದಾರೆಂದು, ಪ್ರತಿವರ್ಷ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾಗಿ ಮುಂದಿನ ಫೆಬ್ರವರಿ ತಿಂಗಳವರೆಗೆ ಪ್ರತಿ ದಿನ ಬೆಳಿಗ್ಗೆ 6.15 ರಿಂದ ನಡೆಯುವ ಈ ಉಚಿತ ಉಪನ್ಯಾಸ ಮಾಲೆಯನ್ನು ನಡೆಸಲು ತಮ್ಮ ಟ್ರಸ್ಟ್‌ಗೆ ವಾರ್ಷಿಕ ಸುಮಾರು ರೂ. 2,50,000/– ಖರ್ಚಾಗುತ್ತಿದ್ದು ಯಾರಿಂದಲೂ ಯಾವುದೇ ರೀತಿಯ ಧನ ಸಹಾಯವನ್ನು ಇದುವರೆವಿಗೂ ಪಡೆದಿರುವುದಿಲ್ಲಂದು ತಿಳಿಸಿ, ಪಾಲಿಕೆ ವತಿಯಿಂದ 2008–09 ರಲ್ಲಿ ರೂ. 50,000/– ಗಳ ಧನ ಸಹಾಯವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಈ ವರ್ಷ ಉಪನ್ಯಾಸ ಮಾಲೆಯ ಬೆಳ್ಳಿ ಹಬ್ಬವನ್ನು ಸಹ ಆಚರಿಸುತ್ತಿದ್ದು, ಈ ಉಚಿತ ಉಪನ್ಯಾಸ ಮಾಲೆಯು ನಿರಂತರವಾಗಿ ಸಾಂಗವಾಗಿ ನಡೆಯಲು ಪಾಲಿಕೆಯ ವತಿಯಿಂದ ಪ್ರತಿವರ್ಷ ರೂ. 1,00,000/– ಗಳ ಧನ ಸಹಾಯವನ್ನು ನೀಡುವ ಆದೇಶದ ಮೂಲಕ ಈ ಸತ್ಕಾರ್ಯಕ್ಕೆ ಸಹಕಾರವನ್ನು ನೀಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 108.35 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– (ಹತ್ತು ಸಾವಿರಗಳು) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 01–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 17]. ವಿಷಯದ ಸಂಖ್ಯೆ :–ತೆಆಸ್ಥಾಸ/228/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)127/10–11, ದಿನಾಂಕ:01–02–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ. ನಾಗರಾಜ್, ಮಾನ್ಯ ವಿರೋಧ ಪಕ್ಷದ ನಾಯಕರು, ಪತ್ರ ಬರೆದು ಕರ್ನಾಟಕ ರಾಜ್ಯ ಅಮೆಚೂರ್ ನೆಟ್ ಬಾಲ್ ಅಸೋಸಿಯೇಷನ್ (ನೋಂ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿದ್ದು, ಸದರಿ ಸಂಸ್ಥೆಯು ಕರ್ನಾಟಕ ಪ್ರಾಧಿಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಾಗಿದ್ದು, ನೆಟ್‌ಬಾಲ್ ಕ್ರೀಡೆಯನ್ನು ಜನಪ್ರಿಯ ಕ್ರೀಡೆಯಾಗಿ ಮತ್ತು ಕ್ರೀಡಾಪಟುಗಳನ್ನು ತರಬೇತು ಗೊಳಿಸುವಂತಹ ಗುರುತರವಾದ ಕಾರ್ಯ ಮಾಡುತ್ತಿರುವ ಬಗ್ಗೆಯೂ ತಿಳಿಸಿ, ರೂ. 5.00 ಲಕ್ಷ ಸಹಾಯಧನವನ್ನು ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸಿ, ಕರ್ನಾಟಕ ರಾಜ್ಯ ಅಮೆಚೂರ್ ನೆಟ್ ಬಾಲ್ ಅಸೋಸಿಯೇಷನ್ (ನೋಂ) ರವರು ಮಾಡುತ್ತಿರುವ ಕಾರ್ಯದಲ್ಲಿ ಪಾಲಿಕೆಯ ಸಹಕಾರ ನೀಡುವುದು ಸಮಂಜಸವೆಂದು ತಿಳಿದು, ಉದ್ದೇಶಿತ ಕಾರ್ಯ ಯಶಸ್ವಿಯಾಗಲು ಅನುಕೂಲವಾಗುವಂತೆ ರೂ. 5.00 ಲಕ್ಷ ಅನುದಾನವನ್ನು ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 108.35 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 01–02–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ ರೂ.2,50,000/– [ಎರಡು ಲಕ್ಷ ಐವತ್ತು ಸಾವಿರ] ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.

## 18]. ವಿಷಯದ ಸಂಖ್ಯೆ :–ತೆಆಸ್ಥಾಸ/229/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)109/10–11, ದಿನಾಂಕ:01–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ (ನೊಂ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ಗುರುತರವಾದ ಕಾರ್ಯ ಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 10.00 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು, ಈ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, 2010–11 ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ

ಪೈಕಿ ಕ್ರ.ಸಂ. (46) ರಲ್ಲಿ ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ (ನೊಂ) ರವರಿಗೆ ನಿಗಧಿ ಪಡಿಸಲಾಗಿರುವ ರೂ. 10.00 ಲಕ್ಷಗಳ (ಹತ್ತು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 01–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 19]. ವಿಷಯದ ಸಂಖ್ಯೆ :–ತೆಆಸ್ಥಾಸ/230/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಅ(ಕ/ಆ)ಪಿಎಸ್‌ಆರ್(4)105/10–11, ದಿನಾಂಕ:02–02–2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ರವೀಂದ್ರ, ಮಾನ್ಯ ಅಧ್ಯಕ್ಷರು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ರವರು ಪೂಜ್ಯ ಮಹಾಪವರರಿಗೆ ಪತ್ರ ಬರೆದು ಕಾರ್ಯದರ್ಶಿಗಳು ಶ್ರೀ ಸಿದ್ಧಾರ್ಥ ಕನ್ನಡ, ಸಾಂಸ್ಕೃತಿಕ ಕಲೆ ಮತ್ತು ಕ್ಷೇಮಾಭಿವೃದ್ಧಿ ಸಂಘ (ರಿ) ರವರು ಸಲ್ಲಿಸಿರುವ ಮನವಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಸದರಿ ಸಂಸ್ಥೆಯು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಂದ ಸ್ಥಾಪಿಸಲ್ಪಟ್ಟಿದ್ದು, ಸುಮಾರು 15 ವರ್ಷಗಳಿಂದ ವಿವಿಧ ಸಾಂಸ್ಕೃತಿಕ ಪ್ರಕಾರಗಳಲ್ಲಿ ತರಗತಿಗಳನ್ನು ನಡೆಸುತ್ತಾ ಬಂದಿದ್ದು, ವಿಜಯನಗರ ಹಂಪಿ ಬಡಾವಣೆಯ ನಿವಾಸಿಗಳು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆಂದು, ಪ್ರಸ್ತುತ ಸಂಘವು ಆರ್ಥಿಕ ಸಂಕಷ್ಟದಲ್ಲಿರುವುದರಿಂದ ಸಂಘದ ಅಭಿವೃದ್ಧಿಗಾಗಿ ಪಾಲಿಕೆಯಿಂದ ಧನ ಸಹಾಯ ಕಲ್ಪಿಸುವಂತೆ ಕೋರಿರುತ್ತಾರೆಂದು ತಿಳಿಸಿ, ಸದರಿ ಸಂಸ್ಥೆಯು ಕಲಾ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ಉತ್ತೇಜನ ಪೂರ್ವಕವಾಗಿ ಪಾಲಿಕೆ ವತಿಯಿಂದ ರೂ. 1,00,000/– ಗಳ ಸಹಾಯಕ ಧನವನ್ನು ಮಂಜೂರು ಮಾಡಿ ಸಂಸ್ಥೆಯ ಅಭಿವೃದ್ಧಿಗೆ ಅನುಕೂಲ ಕಲ್ಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 108.35 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– (ಹತ್ತು ಸಾವಿರಗಳು) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 02–02–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಾಡಿಸಿ ರೂ.25,000/– [ಇಪ್ಪತ್ತೈದು ಸಾವಿರ ಮಾತ್ರ ] ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.

## 20]. ವಿಷಯದ ಸಂಖ್ಯೆ :–ತೆಆಸ್ಥಾಸ/231/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಬಿ12(ಸಿ1)ಪಿಆರ್/52/10–11 ದಿನಾಂಕ:02–02–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಚಾಲಕರು ಹಾಗೂ ಶುಚಿಗಾರರ ಕ್ಷೇಮಾಭಿವೃದ್ಧಿ ಸಂಘರವರು ಪಾಲಿಕೆ ವಾಹನ ಚಾಲಕರಿಗೆ ಎಕ್ಸ್‌ಗ್ರೇಷಿಯಾ ಬಿಡುಗಡೆ ಮಾಡುವ ಬಗ್ಗೆ ಮನವಿ ಸಲ್ಲಿಸಿರುತ್ತಾರೆ.

ಈ ಸಂಬಂಧ ದಿನಾಂಕ : 09–11–2010 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಚಾಲಕರು ಹಾಗೂ ಶುಚಿಗಾರರ ವೆಲ್‌ಫೇರ್ ಅಸೋಸಿಯೇಷನ್ ಇವರ

ಬೇಡಿಕೆಗಳ ಬಗ್ಗೆ ನಡೆದ ಸಭೆಯ ನಡವಳಿಗಳಲ್ಲಿ ಪಾಲಿಕೆ ವಾಹನ ಚಾಲಕರಿಗೆ ಎಕ್ಸ್‌ಗ್ರೇಷಿಯಾ ಬಿಡುಗಡೆ ಮಾಡುವ ಬಗ್ಗೆ ಮುಂದಿನ ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಮುಖ್ಯಲೆಕ್ಕಾಧಿಕಾರಿಗಳ ವರದಿ ದಿನಾಂಕ : 27–12–2010ರಲ್ಲಿ ಮುಖ್ಯ ಲೆಕ್ಕಾಧಿಕಾರಿರವರು ಪಾಲಿಕೆಯಲ್ಲಿ ಒಟ್ಟು ಮಂಜೂರಾದ ಚಾಲಕರ ಹುದ್ದೆಗಳು 447 ಇದ್ದು, ಹಾಲಿ ಪಾಲಿಕೆಯಲ್ಲಿ 384 ಚಾಲಕರು ಕಾರ್ಯನಿರ್ಹಿಸುತ್ತದ್ದು, ತಲಾ ಒಬ್ಬ ಚಾಲಕರಿಗೆ ಮಾಹೆಯಾನ ಎಕ್ಸ್‌ಗ್ರೇಷಿಯಾ ಮೊತ್ತ ರೂ. 1,000–00ಗಳಂತೆ ಒಟ್ಟು 384 ಚಾಲಕರಿಗೆ ಪ್ರತಿ ಮಾಹೆಯಾನ ರೂ.3,84,000–00ಗಳು ವೆಚ್ಚವಾಗಲಿದ್ದು, ಒಂದು ವರ್ಷಕ್ಕೆ 46,08,000–00ಗಳ ಮೊತ್ತ ವೆಚ್ಚವಾಗುತ್ತದೆ. ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದಲ್ಲಿ "02 ಸಾಮಾನ್ಯ ಆಡಳಿತ–ಆಡಳಿತ ವೆಚ್ಚಗಳು" ಲೆಕ್ಕ ಶೀಷಿಕೆಯಡಿಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ ಎಂದು ಅಭಿಪ್ರಾಯ ವರದಿಯನ್ನು ನೀಡಿರುತ್ತಾರೆ.

ಅದರಂತೆ, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಚಾಲಕರು ಹಾಗೂ ಶುಚಿಗಾರರ ಕ್ಷೇಮಾಭಿವೃದ್ಧಿ ಸಂಘ ರವರು ಪಾಲಿಕೆ ವಾಹನ ಚಾಲಕರಿಗೆ ಎಕ್ಸ್‌ಗ್ರೇಷಿಯಾ ಬಿಡುಗಡೆ ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :– ದಿನಾಂಕ 02–02–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.</u>

## 21]. ವಿಷಯದ ಸಂಖ್ಯೆ :–ತೆಆಸ್ಥಾಸ/232/2010–11

ಮಾನ್ಯ ಆಯುಕ್ತರ ಟಿಪ್ಪಣಿ ಸಂಖ್ಯೆ:ಎ3(4)/ಪಿಆರ್/17/08–09, ದಿನಾಂಕ:26–10–2010 ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್.ಸತೀಶ್, ಅಂಗವಿಕಲರು ಇವರು ಮನವಿ ಸಲ್ಲಿಸಿ, ನಾನು ನಿರುದ್ಯೋಗಿಯಾಗಿದ್ದು, ಜೀವನ ನಡೆಸಲು ತುಂಭಾ ಕಷ್ಟಕರವಾಗಿರುವುದರಿಂದ, ನನಗೆ ಹನುಮಂತನಗರ ಚನ್ನಮ್ಮನಕೆರೆ ಅಚ್ಚುಕಟ್ಟು ರಸ್ತೆಯ ದಿ॥ ಸೋರಟ್ ಅಶ್ವತ್ ವೃತ್ತದ ಜಂಕ್ಷನ್ ಹತ್ತಿರ 1ನೇ ಅಡ್ಡರಸ್ತೆಯ ವಿದ್ಯಾಪೀಠ ಕಡೆಯ ಶ್ರೀಕಂಠೇಶ್ವರ ಉದ್ಯಾನವನದ ಪಕ್ಕದಲ್ಲಿ 5X5 ಅಡಿಗಳ ಜಾಗದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆಯಲು ಸ್ಥಳವನ್ನು ಮಂಜೂರು ಮಾಡಲು ಕೋರಿರುತ್ತಾರೆ.

ಸದರಿ ಪ್ರದೇಶವು ನಗರ ಪಾಲಿಕೆಗೆ ಈ ಹಿಂದೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವರ್ಗಾವಣೆಗೊಂಡಿದೆ. ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ಹೊರಡಿಸಿರುವ ಅಧಿಸೂಚನೆಯಲ್ಲಿ ಎಲ್ಲಾ ರಸ್ತೆಗಳು, ಉದ್ಯಾನವನಗಳು, ಆಟದ ಮೈದಾನಗಳು, ನಗರಪಾಲಿಕೆಗೆ ವ್ಯಸ್ತವಾಗುತ್ತದೆ. ಅದರಂತೆ, ಈ ಉದ್ಯಾನವನವು ಸಹ ನಗರಪಾಲಿಕೆ ಕಾರ್ಯವ್ಯಾಪ್ತಿಗೆ ಒಳಗೊಂಡಿರುವುದರಿಂದ ಅರ್ಜಿದಾರರು ಅಂಗವಿಕಲರಾಗಿರುವುದರಿಂದ, ಗುತ್ತಿಗೆ ನೀಡಲು ಅಭಿಪ್ರಾಯಿಸಲಾಗಿದೆ. ಹಾಗೂ ಸಂಚಾರ ಪೋಲಿಸ್ ಠಾಣೆ ರವರು ನಿರಾಕ್ಷೇಪಣಾ ಪತ್ರವನ್ನು ಸಹ ನೀಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲ–176ರ (6) ಹಾಗೂ (ಬಿ)IIರ ಪ್ರಕಾರ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಪರವಾನಿಗೆ ಪಡೆಯಬೇಕು. ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ದಿನಾಂಕ:02–06–2003 ರ ಪ್ರಕಾರ ನಗರ ಸ್ಥಳೀಯ ಸಂಸ್ಥೆಯು ತಮ್ಮ ಅಧಿಕಾರಗಳನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂಬುದಾಗಿದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸತಕ್ಕದ್ದು.

ಅಂಗವಿಕಲರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿ, ಪಾಲಿಕೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಪ್ರಸ್ತಾವನೆಯನ್ನು ಕಳುಹಿಸುವುದಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸರ್ಕಾರದ ಮಾರ್ಗಸೂಚಿಯ ದಿನಾಂಕ:174/2007 ರಂತೆ ಚ.ಅ. ಒಂದಕ್ಕೆ ವಾಣಿಜ್ಯಕ್ಕೆ 2310/- ರೂ.ಗಳಾಗಲಿದ್ದು, ಅರ್ಜಿದಾರರಿಗೆ ನೀಡಲು ಉದ್ದೇಶಿಸಿರುವ ಸ್ವತ್ತಿನ ಅಳತೆ 5X5=25X2310=57,750.00 ರೂ.ಗಳಾಗುತ್ತದೆ. ಶೇ. 10 ರಂತೆ ಪರಿಗಣಿಸಲಾಗಿ ವಾರ್ಷಿಕ ಗುತ್ತಿಗೆ 5775/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣವು ರೂ.481/- ಗಳಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಶ್ರೀ ಹೆಚ್.ಸತೀಶ್, ಅಂಗವಿಕಲರು ರವರಿಗೆ ಮುಂದಿನ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ:26-10-2010 ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸ್ಥಳವು ಉದ್ಯಾನವನದಲ್ಲಿ ಬರುತ್ತಿದ್ದು ಆಯುಕ್ತರ ದಿನಾಂಕ 26-10-2010ರ ಟಿಪ್ಪಣಿಯನ್ನು ತಿರಸ್ಕರಿಸಿ, ಸೂಕ್ತವಾದ ಬದಲೀ ಸ್ಥಳದಲ್ಲಿ ಪ್ರಸ್ತಾವನೆ ಸಲ್ಲಿಸಬಹುದೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 25-01-2011ರ ನಿರ್ಣಯ

<u>ನಿರ್ಣಯ :- ದಿನಾಂಕ 26-10-2010ರ ಟಿಪ್ಪಣಿ (ಆಯುಕ್ತರ ಟಿಪ್ಪಣಿ) ಬಗ್ಗೆ ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 25-01-2011ರ ನಿರ್ಣಯವನ್ನು ಒಪ್ಪಿದೆ.</u>

## 22]. ವಿಷಯದ ಸಂಖ್ಯೆ :-ತೆಆಸ್ಥಾಸ/233/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಎ3(4)ಪಿಆರ್/33/09-10, ದಿನಾಂಕ: 29-11-2010ರಲ್ಲಿ ವಿವರಿಸಿರುವಂತೆ ವಾರ್ಡ್ ಸಂಖ್ಯೆ:51 ಬಸವನಗುಡಿ ಬಡಾವಣೆಯ ಪೋಲೀಸ್ ಸ್ಟೇಷನ್ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ: 24/1ರ ಮುಂಭಾಗದಲ್ಲಿರುವ ಖಾಲಿ ನಿವೇಶನ (ಮಾರ್ಜಿನಲ್ ಲ್ಯಾಂಡ್) ಜಾಗವನ್ನು ಕ್ರಯಕ್ಕೆ ನೀಡಲು ಶ್ರೀ.ಕೆ.ವಿ.ಅಕ್ಷಯ ರವರು ಮನವಿ ಸಲ್ಲಿಸಿ ಕೋರಿರುತ್ತಾರೆ.

ಈ ಬಗ್ಗೆ ಕಾಮಗಾರಿ ಇಲಾಖೆಯವರು ಸ್ಥಳ ಪರಿಶೀಲಿಸಿ ಅರ್ಜಿದಾರರ ಜಾಗದ ಮುಂಭಾಗದಲ್ಲಿರುವ 27X 8 ಅಡಿಗಳಷ್ಟು ಮಾರ್ಜಿನಲ್ ಜಾಗವಿದ್ದು, ಇದರಲ್ಲಿ 5 ಅಡಿಗಳ ಅಗಲದಷ್ಟು ಪ್ಯಾಸೇಜ್ ಗೆ ಜಾಗವನ್ನು ಬಿಟ್ಟು ಉಳಿದ 22 X 8 ಅಡಿಗಳ ಜಾಗವನ್ನು ಅರ್ಜಿದಾರರಿಗೆ ನೀಡಬಹುದೆಂದು ಹಾಗೂ ಈ ಜಾಗವು ನಗರಪಲಿಕೆಗೆ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ಈ ನಿವೇಶನ ಮುಂದೆ ರಸ್ತೆ ಅಗಲೀಕರಣ ಮಾಡುವ ಪ್ರಸ್ತಾವನೆ ಇರುವುದಿಲ್ಲವೆಂದು ತಿಳಿಸಿ, ಅರ್ಜಿದಾರರಿಗೆ ಕ್ರಯಕ್ಕೆ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 17-4-2007ರ ಸರ್ಕಾರದ ಮಾರ್ಗಸುಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.4000/- ಗಳಿದ್ದು, ಅರ್ಜಿದಾರರು ಕೋರಿರುವ 22 X 8 ಅಡಿಗಳ ಜಾಗವು 176 ಚದರ ಅಡಿಗಳಾಗುತ್ತದೆ. ಇದರಂತೆ 176 X 4000 = 7,04,000/- ರೂಗಳಾಗುತ್ತದೆ. ಸರ್ಕಾರದ ಆದೇಶದ ಮೇರೆಗೆ ಸ್ವತ್ತಿನ ಶೇಕಡ 20%ರಷ್ಟು ಹೆಚ್ಚುವರಿ ಮಾಡಿದಾಗ ಒಟ್ಟಾರೆ ಸ್ವತ್ತಿನ ಮೌಲ್ಯವು ರೂ.8,44,800/- ಗಳಾಗುತ್ತದೆ.

ಸರ್ಕಾರದ ಆದೇಶ ಸಂಖ್ಯೆಳ ನಅಇ/129/ಟಿಎಂಡಿ/2002, ಬೆಂಗಳೂರು, ದಿ:02-06-2003ರಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಮಾರುಕಟ್ಟೆ ದರ ಹಾಗೂ ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಈ ಮೇಲಿನ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಗುತ್ತಿಗೆ ನೀಡುವ ಸಂಬಂಧಪಟ್ಟ ಪ್ರಕರಣಗಳನ್ನು ಮನ್ಯ ಆಯುಕ್ತರು ಸಂಬಂಧಪಟ್ಟ ಸ್ಥಾಯಿ ಸಮಿತಿಗಳ ಮುಂದಿರಿಸಲು ಸೂಚಿಸಿದ್ದು, ಸರ್ಕಾರಿ ಆದೇಶ ಸಂಖ್ಯೆ: ನಅಇ/222/ಎಂ.ಎನ್.ವೈ/2008, ಬೆಂಗಳೂರು, ದಿ:03-09-2010 ರಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸರ್ಕಾರಿ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲೀ ಅಥವಾ ಮಾರಾಟ ಮಾಡುವ ಬದಲಾಗಿ ಅವುಗಳನ್ನು ಸೂಕ್ತವಾಗಿ ಅಭಿವೃದ್ಧಿಪಡಿಸುವ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಸಂಬಂಧಪಟ್ಟ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಸಲಹಾ ಸಮಿತಿಯನ್ನು ರಚಿಸಲಾಗಿರುತ್ತದೆ.

ಈ ಮೇಲಿನ ಹಿನ್ನಲೆಯಲ್ಲಿ 22 X 8 ಅಡಿಗಳ ಮಾರ್ಜಿನಲ್ ಜಾಗವನ್ನು ಶ್ರೀ.ಕೆ.ವಿ. ಅಕ್ಷಯ್ ರವರಿಗೆ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ 29-11-2010ರ ಟಿಪ್ಪಣಿಯನ್ನು ಮಾರ್ಪಡಿಸಿ ನೊಂದಣಿ ಮಾರ್ಗಸೂಚಿ ಬೆಲೆಗೆ ವಿಲೇ ಮಾಡುವಂತೆ ತೀರ್ಮಾನಿಸಿರುವ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯ.

-ಮುಂದೂಡಿದೆ-

## 23]. ವಿಷಯದ ಸಂಖ್ಯೆ :-ತೆಆಸ್ಥಾಸ/234/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಮುಲೆಅ/ಪಿಜಿ(5)/ಪಿಆರ್/ 16 /09-10, ದಿನಾಂಕ:07-02-2011ರಲ್ಲಿ ವಿವರಿಸಿರುವಂತೆ, ಸರ್ಕಾರಿ ಆದೇಶ ಸಂಖ್ಯೆ: ಆಇ(ವಿಶೇಷ) 27 ಪಿಇಎನ್ 2007 ದಿ: 13/11/2010.ರಂತೆ ದಿನಾಂಕ : 01/04/2006 ರಿಂದ ರಾಜ್ಯ ಸರ್ಕಾರಿ ನಿವೃತ್ತಿ ವೇತನದಾರರಿಗೆ ಬಹಳ ಹಿಂದೆ ನಿವೃತ್ತರಾದ ಅಧಿಕಾರಿ/ನೌಕರರಿಗೆ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಹೆಚ್ಚಿಸುವ ಬಗ್ಗೆ ಆದೇಶವಾಗಿರುತ್ತದೆ. ಅದರಂತೆ ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿದ್ದು, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆಗೆ ಅಳವಡಿಸಿಕೊಂಡು ದಿನಾಂಕ:01/07/1993 ಕ್ಕಿಂತ (80 ವರ್ಷ ಪೂರ್ಣಗೊಂಡಿದ) ದಿನಾಂಕದಿಂದ ನಿವೃತ್ತರಾದ ಅಥವಾ ಸೇವೆಯಲ್ಲಿರುವಾಗಲೇ ಮೃತರಾದ ಪಾಲಿಕೆ ನೌಕರರಿಗೆ ದಿನಾಂಕ : 01.04.2006 ರಿಂದ ಜಾರಿಗೆ ಬರುವಂತೆ ವ್ಯತ್ಯಾಸದ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ.

ಈ ರೀತಿಯ ಹೆಚ್ಚುವರಿ ನಿವೃತ್ತಿ ವೇತನ / ಕುಟುಂಬ ನಿವೃತ್ತಿ ವೇತನವನ್ನು ಪಾವತಿ ಮಾಡಲು **ರೂ.50,00,000.00/- (ರೂ. ಐವತ್ತು ಲಕ್ಷ)** ಗಳನ್ನು 2010-2011 ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕ ಶೀರ್ಷಿಕೆ 02-ಸಾಮಾನ್ಯ ಆಡಳಿತ/ಆಡಳಿತ ವೆಚ್ಚಗಳು/ನೌಕರರ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಪರಿಷ್ಕೃತ ಅನುಧಾನ ದರದಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ. ಈ ವ್ಯತ್ಯಾಸ ಮೊತ್ತವನ್ನು ಪಾವತಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :- ದಿನಾಂಕ 07-02-2011ರ ಆಯುಕ್ತರ ಟಿಪ್ಪಣಿಯಂತೆ ಸರ್ಕಾರಿ ಆದೇಶ ಸಂಖ್ಯೆ : ಆಇ (ವಿಶೇಷ) 27 ಪಿಇಎನ್ 2007 ದಿ: 13-11-2010ರ ಆದೇಶವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ತೀರ್ಮಾನಿಸಿತು.

## 24]. ವಿಷಯದ ಸಂಖ್ಯೆ :–ತೆಆಸ್ಥಾಸ/235/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)114/10–11, ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಶ್ರೀ ಶಾರದ, ಪ್ರಧಾನ ಕಾರ್ಯದರ್ಶಿ, ವೀಣಾ ಕಲಾವೃಂದ (ರಿ), ಹೇಮರಾಂ ಬಿಲ್ಡಿಂಗ್, 3ನೇ ಅಡ್ಡರಸ್ತೆ, ಲಕ್ಷ್ಮೀಸಾಗರ, ಮಹದೇವಪುರ ಅಂಚೆ, ಬೆಂಗಳೂರು – 560 048. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಕಲಾವೃಂದವು ಸಾಮಾಜಿಕ, ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುತ್ತಾ ರಂಗ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದು, ತಮ್ಮ ಸಂಘವು ಅರ್ಥಿಕವಾಗಿ ಹಿಂದುಳಿದಿರುವುದಾಗಿ ತಿಳಿಸಿ, ತಮ್ಮ ಸಂಘವು 31–12–2010 ರಂದು ಸಂಜೆ 5.30 ಘಂಟೆಗೆ ಕತ್ತಲೆಯ ದಾರಿ ಎಂಬ ಸಾಮಾಜಿಕ ನಾಟಕವನ್ನು ಕನ್ನಡ ಭವನ ಆವರಣದಲ್ಲಿರುವ ನಯನ ರಂಗ ಮಂದಿರದಲ್ಲಿ ಪ್ರದರ್ಶಿಸಲು ಉದ್ದೇಶಿಸಿದ್ದು, ತಮ್ಮ ಸಂಘವು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಪಾಲಿಕೆ ವತಿಯಿಂದ ತಮ್ಮ ಸಂಘಕ್ಕೆ ಹಣ ಬಿಡುಗಡೆ ಮಾಡುವ ಮೂಲಕ ರಂಗ ಕಲೆಯು ಉಳಿದು ಬೆಳೆಯಲು ಅನುವು ಮಾಡಿಕೊಡುವಂತೆ ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 123.90 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ :– ದಿನಾಂಕ 07–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.</u>

## 25]. ವಿಷಯದ ಸಂಖ್ಯೆ :–ತೆಆಸ್ಥಾಸ/236/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, Improvements roads and Asphalting to Cross Roads & providing CC roads to Yamalur 2nd main road Community hall to Prasanna Ganapathi temple HAL compound to police Manjuegowda and Cross Roads at yemalur W.N 133 (Est.Rs.30.00 lakhs) ಕಾಮಗಾರಿಯ ಅಂದಾಜು ಮೊತ್ತ ರೂ. 30.00ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ–0619 "ವಲಯ ರಸ್ತೆಗಳ ಡಾಮಬರೀಕರಣ" ಅಡಿ 2009–10ನೇ ಸಾಲಿನಲ್ಲಿ 133-10-N-G-E-R-AS-003 ಕಾಮಗಾರಿ ಸಂಕೇತ ನೀಡಲಾಗಿದೆ.

ಸದರಿ ಕಾಮಗಾರಿಗೆ 2 ಬಾರಿ ಟೆಂಡರ್ ಆಹ್ವಾನಿಸಿದ್ದು, ಯಾವ ಗುತ್ತಿಗೆದಾರರು ಭಾಗವಹಿಸಿರುವುದಿಲ್ಲ. ಸದರಿ ಕಾಮಗಾರಿಯನ್ನು ಅತಿ ತುರ್ತಾಗಿ ನಿರ್ವಹಿಸಲು ಮಾಜಿ ಸಚಿವರಾದ ಶ್ರೀ ಅರವಿಂದ ಲಿಂಬಾವಳಿರವರು ತಿಳಿಸಿದ್ದು, ಸದರಿ ಕಾಮಗಾರಿಯನ್ನು 2010–11ನೇ ಸಾಲಿನ ಆಯವ್ಯಯದ ಪುಟ ಸಂಖ್ಯೆ (96) ರಲ್ಲಿ ಪಿ–0619 ವಲಯ ರಸ್ತೆಗಳ ಡಾಂಬರೀಕರಣ ಲೆಕ್ಕಶೀರ್ಷಿಕೆಯ ಮುಂದುವರೆದ ಕಾಮಗಾರಿಗಳು ಅಡಿ ಮೀಸಲಿರಿಸಿರುವ ರೂ. 4048.96 ಲಕ್ಷಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಆದ್ದರಿಂದ ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಲು ತೆರಿಗೆ ಮತ್ತು ಆಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :– ದಿನಾಂಕ 07–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.</u>

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/237/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)128/10–11, ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಶ್ರಿ ಪಿ.ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ರವರು ಪತ್ರ ಬರೆದು ಶ್ರೀ ಅಂಬರೀಷ್, ಅಧ್ಯಕ್ಷರು ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ (ರಿ) ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘದ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 1.00 ಕೋಟಿಗಳನ್ನು ಕಾಯ್ದಿರಿಸಲಾಗಿದ್ದು, ಈ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 1.00 ಕೋಟಿಗಳನ್ನು ಕಾಯ್ದಿರಿಸಲಾಗಿರುವುದನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (50) ರಲ್ಲಿ ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ (ರಿ) ರವರಿಗೆ ನಿಗಧಿ ಪಡಿಸಲಾಗಿರುವ ರೂ. 100.00 ಲಕ್ಷಗಳ (ನೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 07–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 27]. ವಿಷಯದ ಸಂಖ್ಯೆ :–ತೆಆಸ್ಥಾಸ/238/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)129/10–11, ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ರವರು ಪತ್ರ ಬರೆದು ಪ್ರೋ॥ ಡಿ. ಲಿಂಗಯ್ಯ, ಅಧ್ಯಕ್ಷರು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ (ರಿ), 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–560 019 ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಪ್ರತಿಷ್ಠಾನದ ಸಾಹಿತ್ಯಕ, ಸಾಂಸ್ಕೃತಿಕ ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾಯ್ದಿರಿಸಿರುವ ಅನುದಾನ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ರವರಿಗೆ 2010–11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (11) ರಲ್ಲಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ರವರಿಗೆ ನಿಗಧಿ ಪಡಿಸಲಾಗಿರುವ ರೂ. 2.00 ಲಕ್ಷಗಳ (ಎರಡು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :- 07-02-2011ನೇ ದಿನಾಂಕದ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 28]. ವಿಷಯದ ಸಂಖ್ಯೆ :-ತೆಆಸ್ಥಾಸ/239/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)130/10-11, ದಿನಾಂಕ:07-02-2011ರಲ್ಲಿ ವಿವರಿಸಿರುವಂತೆ, ಶ್ರಿ ಪಿ.ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ರವರು ಪತ್ರ ಬರೆದು ಶ್ರೀ ಎಸ್. ಕೆ. ನಟರಾಜ್, ಅಧ್ಯಕ್ಷರು, ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ) ರವರು ಮನವಿ ಸಲ್ಲಿಸಿ, ದೇವಸ್ಥಾನದ ಅಭಿವೃದ್ಧಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2010-11 ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳನ್ನು ಕಾಯ್ದಿರಿಸಲಾಗಿದ್ದು, ಈ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ, **ಬಜೆಟ್ ಅನುದಾನದಲ್ಲಿ ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ ಟ್ರಸ್ಟ್ ಎಂಬುದರ ಬದಲು ಆಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ ಎಂದು ತಪ್ಪಾಗಿ ಮುದ್ರಿತವಾಗಿದ್ದು ಇದನ್ನು ಸರಿಯಾದ ನಾಮದ್ಹೇಯವಾದ ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ ಟ್ರಸ್ಟ್ (ರಿ) ಎಂಬುದಾಗಿ ಬದಲಾಯಿಸಿಕೊಂಡು 2010-11 ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವುದನ್ನು** ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010-11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09-09-2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010-11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (7) ರಲ್ಲಿ **"ಸಾರಕ್ಕಿ ಉತ್ಸವ ಸಾರಕ್ಕಿ ಆಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್" ರವರಿಗೆ** ನಿಗಧಿ ಪಡಿಸಲಾಗಿರುವ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಅನುದಾನವನ್ನು **ಶ್ರೀ ವೀರಭದ್ರ ಸ್ವಾಮಿ ದೇವಸ್ಥಾನ ಟ್ರಸ್ಟ್ ರವರ ಹೆಸರಿಗೆ** ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :- ದಿನಾಂಕ 07-02-2011ರ ಮಾನ್ಯ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 29]. ವಿಷಯದ ಸಂಖ್ಯೆ :-ತೆಆಸ್ಥಾಸ/240/2010-11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)133/10-11, ದಿನಾಂಕ:07-02-2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ.ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಸನ್ಮಾನ್ಯ ಉಪ ಮಹಾಪೌರರು, ತಮ್ಮ ಪತ್ರದಲ್ಲಿ ಅರ್ಜುನ್ ಕಬ್ಬಡಿ ಕ್ಲಬ್ (ರಿ) ಸಂಘವು ಹಲವಾರು ವರ್ಷಗಳಿಂದ ಯುವ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವುದಲ್ಲದೆ, ವಿವಿಧ ಕ್ರೀಡೆಗಳ ವಿಜೇತರಿಗೆ ಬಹುಮಾನ ವಿತರಣೆ ಕಾರ್ಯಕ್ರಮ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸುವುದು, ಹಿರಿಯ ಗಣ್ಯ ವ್ಯಕ್ತಿಗಳನ್ನು ಗುರುತಿಸಿ ಸನ್ಮಾನ ಮಾಡುವ ಕಾರ್ಯಕ್ರಮ ಹಾಗೂ ಇನ್ನೂ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ಸಂಘವು ನಡೆಸಿಕೊಂಡು ಬಂದಿರುವುದಾಗಿ ತಿಳಿಸಿ, ಸಲ್ಲಿಸಿರುವ ಪತ್ರದಲ್ಲಿ ಕೋರಿರುವಂತೆ ಸದರಿ ಸಂಸ್ಥೆಯ ವತಿಯಿಂದ 2011-ಜನವರಿ ಕೊನೆಯ ವಾರದಲ್ಲಿ ನಡೆಸಲಾಗುವ ರಾಜ್ಯ ಮಟ್ಟದ ಕಬ್ಬಡಿ ಪಂದ್ಯಾವಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ. 15.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲು ಸಮಿತಿಗೆ ಟಿಪ್ಪಣಿಯನ್ನು ಕಳುಹಿಸಿರುತ್ತಾರೆಂದು ತಿಳಿಸಿ, ಅರ್ಜುನ್ ಕಬ್ಬಡಿ ಕ್ಲಬ್ (ರಿ) ಚನ್ನಸಂದ್ರ,

ಬೆಂಗಳೂರು, ರವರಿಗೆ ಕೂಡಲೇ ಸಂಘ ಸಂಸ್ಥೆಗಳ ಅನುದಾನದ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ. 15.00 ಲಕ್ಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 123.90 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 15.00 ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>–ಮುಂದೂಡಿದೆ–</u>

## 30]. ವಿಷಯದ ಸಂಖ್ಯೆ :–ತೆಆಸ್ಥಾಸ/241/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)132/10–11, ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ರವರು ಪತ್ರ ಬರೆದು ಶ್ರೀ ಬಿ.ಸಿ. ಗಣೇಶ್, ಅಧ್ಯಕ್ಷರು ಜೆ.ಪಿ. ನಗರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ, 11ನೇ ಬಿ ಕ್ರಾಸ್, ಜೆ.ಪಿ. ನಗರ 1ನೇ ಹಂತ, ಬೆಂಗಳೂರು ರವರು ಮನವಿ ಸಲ್ಲಿಸಿ, ತಮ್ಮ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾಯ್ದಿರಿಸಿರುವ ಅನುದಾನ ಮಂಜೂರು ಮಾಡಲು ಕೋರಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ, ಪೂಜ್ಯ ಮಹಾಪೌರರು ರೂ. 3.00 ಲಕ್ಷ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ಸಮಿತಿಗೆ ಟಿಪ್ಪಣಿಯನ್ನು ಬರೆದು ಕಳುಹಿಸಿರುತ್ತಾರೆಂದು ತಿಳಿಸುತ್ತಾ, ಸದರಿ ಸಂಘಕ್ಕೆ 2010–11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ರೂ. 3.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (1) ರಲ್ಲಿ ಜೆ.ಪಿ. ನಗರ ಸಾಂಸ್ಕೃತಿಕ ಮತ್ತು ಕ್ಷೇಮಾಭಿವೃದ್ಧಿ ಸಂಘ ರವರಿಗೆ ರವರಿಗೆ ನಿಗಧಿ ಪಡಿಸಲಾಗಿರುವ ರೂ. 3.00 ಲಕ್ಷಗಳ (ಮೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ :– ದಿನಾಂಕ 07–02–2011ರ ಮಾನ್ಯ ಆಯುಕ್ತರ ಟಿಪ್ಪಣಿ ಒಪ್ಪಿದೆ.</u>

## 31]. ವಿಷಯದ ಸಂಖ್ಯೆ :–ತೆಆಸ್ಥಾಸ/242/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್ಆರ್(4)134/10–11, ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಪ್ರಧಾನ ಕಾರ್ಯದರ್ಶಿ, ಶ್ರೀ ಅಂಬಾಮಹೇಶ್ವರಿ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ), ನಂ. 10, 3ನೇ ಅಡ್ಡರಸ್ತೆ,

ವೃಷಭಾವತಿನಗರ, ಕಾಮಾಕ್ಷಿಪಾಳ್ಯ, ಬೆಂಗಳೂರು – 560 079. ರವರು ಪೂಜ್ಯ ಮಹಾಪೌರರಿಗೆ ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಘದ ವತಿಯಿಂದ 28–01–2011 ರಂದು ನಾಡಪ್ರಭು ಕೆಂಪೇಗೌಡರ 500ನೇ ಜಯಂತಿ ಕಾರ್ಯಕ್ರಮ ಆಚರಿಸಲು ಸಂಘದ ವತಿಯಿಂದ ತೀರ್ಮಾನಿಸಲಾಗಿದ್ದು, ಅದರ ಅಂದಾಜು ವೆಚ್ಚ ಸುಮಾರು ರೂ. 4,05,000–00 ಗಳು ಆಗಲಿದ್ದು, ಪಾಲಿಕೆಯ ವತಿಯಿಂದ ರೂ. 3,50,000–00 ಗಳ ಧನ ಸಹಾಯವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 123.90 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 10,000/– ಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 07–02–2011ರ ಆಯುಕ್ತರ ಟಿಪ್ಪಣಿಯನ್ನು ಮಾರ್ಪಡಿಸಿ ರೂ.25,000/–[ಇಪ್ಪತ್ತೈದು ಸಾವಿರ ಮಾತ್ರ] ಸಹಾಯ ಧನವನ್ನು ಮಂಜೂರು ಮಾಡುವುದೆಂದು ತೀರ್ಮಾನಿಸಿದೆ.

## 32]. ವಿಷಯದ ಸಂಖ್ಯೆ :–ತೆಆಸ್ಥಾಸ/243/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:10–02–2011ರಲ್ಲಿ ವಿವರಿಸಿರುವಂತೆ, ದಿನಾಂಕ 27–3–2008 ರಂದು ಕರ್ನಾಟಕ ರಾಜ್ಯ ಪೋಲಿಸ್ ನಿರ್ಮಾಣ ನಿಗಮರೊಡನೆ 13 ಕೊಳಚೆ ಪ್ರದೇಶಗಳ ನಿರ್ಮಾಣ ಮತ್ತು ಸಮಗ್ರ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಮೊತ್ತ ರೂ. 69035.00 ಲಕ್ಷಗಳಿಗೆ ಒಪ್ಪಂದ ಮಾಡಿಕೊಂಡಿದ್ದು, ರೂ. 1562.16 ಲಕ್ಷಗಳನ್ನು ದಿನಾಂಕ 16–4–2008 ರಂದು ಚೆಕ್ ಮುಖಾಂತರ ಪಾವತಿಸಲಾಗಿದೆ.

ಮೇಲ್ಕಂಡ 13 ಕೊಳಚೆ ಪ್ರದೇಶಗಳ ನಿರ್ಮಾಣದ ಕಾಮಗಾರಿಗೆ ಈ ಹಿಂದೆ 000-08-N-J-UB-CD-001 ಕಾಮಗಾರಿ ಸಂಕೇತ ನೀಡಲಾಗಿದ್ದು, 8 ಕೊಳಚೆ ಪ್ರದೇಶಗಳ ಮನೆಗಳ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಗೆ ಹಸ್ತಾಂತರಿಸಲಾಗಿದೆ. ಹಾಗೂ ಉಳಿದ 5 ಕೊಳಚೆ ಪ್ರದೇಶಗಳ ಮನೆಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಪೋಲಿಸ್ ನಿರ್ಮಾಣ ನಿಗಮದವರು ನಿರ್ವಹಿಸಿರುತ್ತಾರೆ.

ಮೇಲ್ಕಂಡ ಕಾಮಗಾರಿಯನ್ನು ಹೊಸದಾಗಿ ಕರ್ನಾಟಕ ರಾಜ್ಯ ಪೋಲಿಸ್ ನಿರ್ಮಾಣ ನಿಗಮ ಇವರ ಮೂಲಕ ನಿರ್ವಹಿಸಲು ಯೋಜಿಸಿದ್ದು, ಸದರಿಯವರಿಗೆ ನೀಡಲಾಗಿದ್ದ ಮೊತ್ತ ರೂ. 1562.16 ಲಕ್ಷಗಳ ಉಳಿಕೆ ಮೊತ್ತದಲ್ಲಿ ಸದರಿ ಕಾಮಗಾರಿಯ ರೂ. 280.80 ಲಕ್ಷಗಳನ್ನು ಭರಿಸಬಹುದಾಗಿದೆ.

ಪ್ರಸ್ತುತ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿದ್ದು, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ. 280.80 ಲಕ್ಷಗಳಿಗೆ 2010–11 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಪ್ರಧಾನ ಲೆಕ್ಕಶೀರ್ಷಿಕೆಯಡಿ ಕಲ್ಯಾಣ ಅಡಿ ಬರುವ ಬರುವ "ನಗರ ಬಡಜನರಿಗೆ ಮೂಲಭೂತ ಸೌಕರ್ಯಗಳು (5 ಕೊಳಚೆ ಪ್ರದೇಶಗಳು) ಪಿ1716" ಲೆಕ್ಕಶೀರ್ಷಿಕೆಯಡಿ ಹೆಚ್ಚಿನ ಅನುದಾನ ಒದಗಿಸಿಕೊಂಡು ಕಾಮಗಾರಿಗೆ ಬೇಕಾಗುವ ಜಾಬ್ ನಂಬರ್ ನೀಡಿ ಕಾಮಗಾರಿಗಳನ್ನು ನಿರ್ವಹಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ಟಿಪ್ಪಣಿ.

–ಮುಂದೂಡಿದೆ–

## 33]. ವಿಷಯದ ಸಂಖ್ಯೆ :–ತೆಆಸ್ಥಾಸ/244/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)131/10–11, ದಿನಾಂಕ:10–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ರವರು ಪತ್ರ ಬರೆದು ಶ್ರೀ ಕೆ. ಎಂ. ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಪ್ರದೇಶ ಕುರುಬರ ಸಂಘ ರವರು ಮನವಿ ಸಲ್ಲಿಸಿ, ತಮ್ಮ ಸಂಘದ ವತಿಯಿಂದ ಶ್ರೀ ಕನಕ ಸಮುದಾಯ ಭವನ ನಿರ್ಮಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ 2010–11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನಕ್ಕಿಂತ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದು ಕನಿಷ್ಠ ರೂ. 2.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸಿ ಸದರಿ ಕಟ್ಟಡ ನಿರ್ಮಾಣ ಕಾರ್ಯಕ್ಕಾಗಿ 2010–11ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (75) ರಲ್ಲಿ **ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ – ಬೆಂಗಳೂರು ಕನಕ ಸ್ಮಾರಕ ಭವನ ನಿರ್ಮಾಣ** ರವರಿಗೆ ನಿಗಧಿ ಪಡಿಸಲಾಗಿರುವ ರೂ. 100.00 ಲಕ್ಷಗಳ (ನೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 10–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 34]. ವಿಷಯದ ಸಂಖ್ಯೆ :–ತೆಆಸ್ಥಾಸ/245/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಅಆ(ಕ/ಆ)ಪಿಎಸ್‌ಆರ್(4)25/10–11, ದಿನಾಂಕ:10–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಕಾರ್ಯದರ್ಶಿಗಳು, ಶ್ರೀ ಕೆ. ಗಣೇಶ್ ರಾವ್ ಮಾನೆ ದಸರಾ ಮಹೋತ್ಸ ಸಮಿತಿ ಮುನಿರೆಡ್ಡಿಪಾಳ್ಯ ರವರು ಸಲ್ಲಿಸಿರುವ ಪತ್ರವನ್ನು ಲಗತ್ತಿಸುತ್ತಾ, ತಮ್ಮ ಸಮಿತಿಯು ದಸರಾ ಉತ್ಸವವನ್ನು ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು ರವರ ಅಧ್ಯಕ್ಷತೆಯಲ್ಲಿ ನಡೆಸಲಾಗುತ್ತಿದ್ದು, ಈ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಈಗಾಗಲೇ ರೂ. 10.00 ಲಕ್ಷ ಅನುದಾನ ಮಂಜೂರಾಗಿದ್ದು, ಸದರಿ ಕಾರ್ಯಕ್ರಮವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದ್ದು ಇನ್ನು ರೂ. 5.00 ಲಕ್ಷಗಳ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ

ಉಳಿಕೆ ರೂ. 176.50 ಲಕ್ಷಗಳ ಪೈಕಿ ರೂ. 135.90 ಲಕ್ಷಗಳು ಈಗಾಗಲೇ ವೆಚ್ಚವಾಗಿದ್ದು, ಉಳಿಕೆ ಮೊತ್ತದಲ್ಲಿ ಸದರಿ ಸಂಸ್ಥೆಗೆ ರೂ. 5.00 ಲಕ್ಷಗಳ (ಐದು ಲಕ್ಷಗಳು ಮಾತ್ರ) ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 10–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 35]. ವಿಷಯದ ಸಂಖ್ಯೆ :–ತೆಆಸ್ಥಾಸ/246/2010–11

ಆಯುಕ್ತರವರ ಟಿಪ್ಪಣಿ ದಿನಾಂಕ : 17–02–2011ರಲ್ಲಿ ವಿವರಿಸಿರುವಂತೆ, ಮಹದೇವಪುರ ವಲಯದ ಕೆ.ಆರ್.ಪುರ ವಾರ್ಡ್ ಸಂಖ್ಯೆ–52 ಕ್ಕೆ 2010–11 ನೇ ಸಾಲಿನ ಆಯವ್ಯಯದಲ್ಲಿ ಹಾಗೂ ಬೀದಿ ದೀಪ ಕ್ರಿಯಾ ಯೋಜನೆಯಲ್ಲಿ ನಿಗದಿಪಡಿಸಿರುವ ಮೊತ್ತವು ಅತೀ ಕಡಿಮೆಯಾಗಿದ್ದು, ಸದರಿ ವಾರ್ಡಿನ ವಿವಿಧ ಬಡಾವಣೆಗಳಲ್ಲಿ ಬೀದಿ ದೀಪ ಅಳವಡಿಸುವ ತುರ್ತು ಅವಶ್ಯಕತೆಯಿದ್ದು, ಸದರಿ ಅವಶ್ಯಕತೆಗೆ ಅನುಗುಣವಾಗಿ ಬೀದಿ ದೀಪ ಕಾಮಗಾರಿಗಳ ಪಟ್ಟಿಯೊಂದಿಗೆ ಹೆಚ್ಚುವರಿ 50.00 ಲಕ್ಷರೂ. ಅನುದಾನ ಒದಗಿಸಲು 52 ನೇ ವಾರ್ಡ್ ಸದಸ್ಯರು ಹಾಗೂ ಸ್ಥಾಯಿ ಸಮಿತಿ ಸದಸ್ಯರು ಆದ ಶ್ರೀ.ಎನ್.ವೀರಣ್ಣರವರು ಕೋರಿರುತ್ತಾರೆ.

ಸದರಿ ಸದಸ್ಯರ ಕೋರಿಕೆ ಮೇರೆಗೆ ಕಾ.ಪಾ.ಅ.(ವಿ) ಮಹದೇವಪುರ ವಲಯ ಇವರು ಕಡತವನ್ನು ಸದರಿ ಕಾಮಗಾರಿಗಳ 50.00 ಲಕ್ಷರೂ ಅಂದಾಜು ಪಟ್ಟಿಗಳೊಂದಿಗೆ ಸಲ್ಲಿಸಿರುತ್ತಾರೆ. 2010–11ನೇ ಸಾಲಿನ ಆಯವ್ಯಯದಲ್ಲಿ ಬೀದಿ ದೀಪ ಅಳವಡಿಸಲು ರೂ.30 ಕೋಟಿ ನಿಗದಿಪಡಿಸಿದ್ದು, ಈ ಹೆಚ್ಚುವರಿ ಅನುದಾನಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಆಯವ್ಯಯವನ್ನು ಪುನಃ ವಿಮರ್ಶಿಸಿ ಹೆಚ್ಚುವರಿ ಅನುದಾನ ಬಿಡುಗಡೆ ಬಗ್ಗೆ ಸೂಕ್ತ ಕ್ರಮಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– 17–02–2011ನೇ ದಿನಾಂಕದ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 36]. ವಿಷಯದ ಸಂಖ್ಯೆ :–ತೆಆಸ್ಥಾಸ/247/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:07–02–2011ರಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ.ಯ ಆರೋಗ್ಯ ಇಲಾಖೆಯ ವೈದ್ಯಕೀಯ ವಿಭಾಗದಲ್ಲಿ 6 ರೆಫರಲ್ ಹಾಗೂ 24 ಹೆರಿಗೆ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿದ್ದು ತಾಯಿ ಮಕ್ಕಳ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳನ್ನು 24/7 ರೀತ್ಯಾ ಒದಗಿಸಲಾಗುತ್ತಿದೆ. ಈ ಸೇವೆಗನ್ನು ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು ಹಾಗೂ ಶುಶ್ರೂಷಕಿಯರು ನೀಡುತ್ತಿದ್ದಾರೆ. ಈ ಎಲ್ಲಾ ಕಿ.ಮ.ಆ.ಸ ಹಾಗೂ 50% ಶುಶ್ರೂಷಕಿಯರು ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದು ಬಹುತೇಕ ಹುದ್ದೆಗಳು ಖಾಲಿ ಇರುವುದರಿಂದ ಈ ಸಿಬ್ಬಂದಿಗಳು ಬಹಳಷ್ಟು ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

Indian Public Health Statndards (IPHS) ಗುಣಮಟ್ಟದಂತೆ ಪ್ರಾಥಮಿಕ ಅರೋಗ್ಯ ಕೇಂದ್ರ (ಪಿ.ಹೆಚ್.ಸಿ) ಹಾಗೂ ಕಮ್ಯೂನಿಟಿ ಹೆಲ್ತ್ ಸೆಂಟರ್ (ಸಿ.ಹೆಚ್.ಸಿ) ಈ ಆಸ್ಪತ್ರೆಗಳಲ್ಲಿ 24/7 ರೀತ್ಯಾ ಕಾರ್ಯನಿರ್ವಹಿಸಲು ಕ್ರಮವಾಗಿ 5 ಹಾಗೂ 19 ಶುಶ್ರೂಷಕಿಯರ ಅಗತ್ಯವಿದೆ.

ಪಾಲಿಕೆಯ ಆಸ್ಪತ್ರೆಗಳಲ್ಲಿ ಸೇವೆಗಳನ್ನು ನೀಡಲು ಶುಶ್ರೂಷಕಿಯರನ್ನು ನಿಯೋಜಿಸಿದಲ್ಲಿ ಕಿ.ಮ.ಆ.ಸರು ಗಳನ್ನು ಆರೋಗ್ಯ ಕೇಂದ್ರ ಹಾಗೂ ಕುಟುಂಬ ಕಲ್ಯಾಣ ಕೇಂದ್ರಗಳಿಗೆ ನಿಯೋಜಿಸಬಹುದಾಗಿದೆ.

ಶುಶ್ರೂಷಕಿಯರನ್ನು ಸರಿಯಾದ ಸಂಖ್ಯೆಗಳಲ್ಲಿ ನಿಯೋಜಿಸಿದ್ದಲ್ಲಿ 24/7 ಗಂಟೆಗಳ ಕಾಲ ಉತ್ತಮ ಸೇವೆ ನೀಡಬಹುದು, ರೆಫರಲ್ ಸಂಖ್ಯೆ ಕಡಿಮೆಗೊಳಿಸಬಹುದು ಆಸ್ಪತ್ರೆಗಳ ಪ್ರಗತಿಯಲ್ಲಿ ಅಭಿವೃದ್ಧಿ ಕಾಣಬಹುದು. ಕರ್ನಾಟಕ ಸರ್ಕಾರದ Karnataka Health System Development & Reforms Project ಯೋಜನೆ ಅಡಿಯಲ್ಲಿ

ಈಗಾಗಲೇ ಸರ್ಕಾರದ ಆಸ್ಪತ್ರೆಗಳಲ್ಲಿ ಶುಶ್ರೂಷಕಿಯರನ್ನು ರೂ.7,000/– ಗೌರವಧನದ ಆಧಾರದ ಮೇಲೆ ನಿಯೋಜಿಸಿಕೊಳ್ಳಲಾಗಿರುವಂತೆ, ಪಾಲಿಕೆಯ ಆರೋಗ್ಯ ಇಲಾಖೆಯ ರೆಫರೆಲ್ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ನಿಯೋಜಿಸಬಹುದಾಗಿದೆ. ಇವರನ್ನು ಅಪರ ಆಯುಕ್ತರು (ಆರೋಗ್ಯ) ಮತ್ತು ಉಪ ಆಯುಕ್ತರು (ಆರೋಗ್ಯ), ಮುಖ್ಯ ಆರೋಗ್ಯಾಧಿಕಾರಿ, ಕಾನೂನು ಕೋಶದ ಪ್ರತಿನಿಧಿ, ವಲಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್), ಆಯಾ ರೆಫರಲ್ ಆಸ್ಪತ್ರೆಯ ಅಧೀಕ್ಷಕುಗಳನ್ನೊಳಗೊಂಡ ಸಮಿತಿಯ ಮೂಲಕ ನೇಮಿಸಿಕೊಳ್ಳಬಹುದಾಗಿದೆ.

**ಷರತ್ತುಗಳು**

ನಿಯೋಜಿಸಿಕೊಳ್ಳುವ ಶುಶ್ರೂಷಕಿಯರು 3 ವರ್ಷದ General Nursing Training ಪದವಿಯನ್ನು, 6 ತಿಂಗಳ Midwifery ತರಬೇತಿ ಪ್ರಮಾಣ ಪತ್ರವನ್ನು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಕಾಲೇಜಿನಿಂದ ಪಡೆದಿರಬೇಕು. Karnataka Nursing Council ನಲ್ಲಿ ಹೆಸರನ್ನು ದಾಖಲಿಸಿರಬೇಕು ಹಾಗೂ ವಯೋಮಿತಿ ಗರಿಷ್ಠ 60 ವರ್ಷ ಮೀರಿರಬಾರದು.

1. ಈ ನಿಯೋಜನೆ ತಾತ್ಕಾಲಿಕವಾಗಿದ್ದು ಒಂದು ವರ್ಷಕ್ಕೆ ಸೀಮಿತವಾಗಿದ್ದು, ಅವಶ್ಯಕತೆ ಇದ್ದಲ್ಲಿ ಈ ನಿಯೋಜನೆಯನ್ನು ಮುಂದುವರಿಸಬಹುದಾಗಿದೆ ಅಥವಾ ಖಾಯಂ ಭರ್ತಿ ಮಾಡಿದ್ದಲ್ಲಿ ಈ ನಿಯೋಜನೆಯನ್ನು ರದ್ದುಪಡಿಸಬಹುದು.
2. ಈ ಶುಶ್ರೂಷಕಿಯರು ನಿಯೋಜಿಸಿದ ಆಸ್ಪತ್ರೆಗಳಲ್ಲಿ ವೈದ್ಯರ ಮೇಲ್ವಿಚಾರಣೆಯಲ್ಲಿ, ಮೇಲಾಧಿಕಾರಿಗಳು ಸೂಚಿಸಿದ ಸ್ಥಳಗಳಲ್ಲಿ ಹಾಗೂ ಪಾಲಿಕೆಯಲ್ಲಿ ಚಾಲ್ತಿ ಇರುವ ಶುಶ್ರೂಷಕಿಯರ ಜವಾಬ್ದಾರಿಗಳನ್ನು ಅರಿತು ಕಾರ್ಯನಿರ್ವಹಿಸಬೇಕು.
3. ಈ ಶುಶ್ರೂಷಕಿಯರ ಕಾರ್ಯನಿರ್ವಹಣೆಯಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಅಂತಹ ಶುಶ್ರೂಷಕಿಯರ ನಿಯೋಜನೆಯನ್ನು ಯಾವುದೇ ಸೂಚನೆ ನೀಡದೆ ರದ್ದುಪಡಿಸಬಹುದು ಹಾಗೂ ಯಾವುದೇ ಕಾನೂನು ತೊಡಕುಗಳಿಗೆ ಸಂಬಂಧಪಟ್ಟ ಶುಶ್ರೂಷಕಿಯರೇ ನೇರ ಜವಾಬ್ದಾರರಾಗಿದ್ದು ಪಾಲಿಕೆಯ ಹೊಣೆಗಾರಿಕೆ ತೆಗೆದುಕೊಳ್ಳುವುದಿಲ್ಲ.
4. ನಿಯೋಜನೆಗೊಂಡ ಶುಶ್ರೂಷಕಿಯರಿಗೆ ರೂ.20/– ಗಳ ಸ್ಟ್ಯಾಂಪ್ ಪೇಪರ್ ಕರಾರು ಪತ್ರ ಪಡೆಯತಕ್ಕದ್ದು.
5. ನಿಯೋಜನೆಗೊಂಡ ಶುಶ್ರೂಷಕಿಯರಿಗೆ ಮಾಹೆಗೆ ರೂ.7,000/– ಹಣ ಪಾವತಿಸಬಹುದಾಗಿದೆ.
6. ಈ ಶುಶ್ರೂಷಕಿಯರಿಗೆ ಯಾವುದೇ ಹಣಕಾಸಿನ ನಿರ್ವಹಣೆ ನೀಡಲಾಗುವುದಿಲ್ಲ.

ಅವಶ್ಯಕತೆಯಿರುವ ಶುಶ್ರೂಷಕಿಯರ ಸಂಖ್ಯೆ ಮತ್ತು ಮಾಸಿಕವಾಗಿ ತಗಲುವ ವೆಚ್ಚಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಆಸ್ಪತ್ರೆಯ ಹೆಸರು | ಆವಶ್ಯಕತೆಯಿರುವ ಶುಶ್ರೂಷಕಿಯರ ಸಂಖ್ಯೆ | ಪ್ರತಿ ಮಹೆ ಗೌರವ ಧನವಾಗಿ ಒಬ್ಬರಿಗೆ ತಗಲುವ ವೆಚ್ಚ | ಒಟ್ಟು ಮೊತ್ತ ಮಾಸಿಕ |
|---|---|---|---|---|
| 1 | ಪೂರ್ವ ವಲಯದ (ಎಲ್ಲಾ ಆಸ್ಪತ್ರೆಗಳಿಗೆ) | 45 | ರೂ.7,000/– | ರೂ.3,15,000/– |
| 2 | ದಕ್ಷಿಣ ವಲಯದ (ಎಲ್ಲಾ ಆಸ್ಪತ್ರೆಗಳಿಗೆ) | 50 | ರೂ.7,000/– | ರೂ.3,50,000/– |
| 3 | ವಲಯದ (ಎಲ್ಲಾ ಆಸ್ಪತ್ರೆಗಳಿಗೆ) | 50 | ರೂ.7,000/– | ರೂ.3,50,000/– |
| **ಒಟ್ಟು ಸಂಖ್ಯೆ (6 ರೆಫರಲ್ + 24 ಹೆರಿಗೆ ಆಸ್ಪತ್ರೆಗಳಿಗೆ)** | | **145** | | **ರೂ.10,15,000/–** |

ಈ ರೀತ್ಯಾ ಪಾಲಿಕೆಯಲ್ಲಿ ತೆಗೆದುಕೊಳ್ಳಬಹುದಾದ ಈ ಶುಶ್ರೂಷಕಿಯರಿಗೆ ತಗಲಬಹುದಾದ ಮೊತ್ತವು ಮಾಸಿಕವಾಗಿ ರೂ.10,15,000/–ಗಳು (ಹತ್ತು ಲಕ್ಷದ ಹದಿನೈದು ಸಾವಿರ ಮಾತ್ರ) ತಗಲುತ್ತದೆ. ವಾರ್ಷಿಕವಾಗಿ ರೂ.1,21,80,000/– ಗಳು (ಒಂದು ಕೋಟಿ ಇಪ್ಪತ್ತೊಂದು ಲಕ್ಷದ ಎಂಭತ್ತು ಸಾವಿರ ಮಾತ್ರ) ತಗಲಬಹುದಾಗಿದ್ದು, ಈ ಮೊತ್ತವನ್ನು ಪಾಲಿಕೆಯ ಆವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನಿಗಧಿಪಡಿಸಲಾದ 14th health medical administrative expenses-PO126 ಪಾಲಿಕೆ ಆಯವ್ಯಯದಲ್ಲಿ ಭರಿಸಬಹುದಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಶುಶ್ರೂಷಕಿಯರನ್ನು ಗೌರವಧನದ ಆಧಾರದ ಮೇಲೆ ತೆಗೆದುಕೊಳ್ಳಲು ಮೇಲ್ಕಂಡಂತೆ ವಿವರಗಳನ್ನು ಸಲ್ಲಿಸಲಾಗಿದ್ದು, ಅನುಮೋದನೆ ನೀಡುವ ಸಂಬಂಧ ಮಂಡಿಸಿರುವ ಆಯುಕ್ತರ ದಿನಾಂಕ 07.02.2011ರ ಟಿಪ್ಪಣಿಯಲ್ಲಿನ ಪುಟ ಸಂಖ್ಯೆ 3 ರಲ್ಲಿರುವ ಕಲಂ 'ಅ' ನ್ನು ಮಾರ್ಪಡಿಸುತ್ತಾ ಬಿಬಿಎಂಪಿಯಲ್ಲಿ ಈಗ ಸ್ಥಾಯಿ ಸಮಿತಿಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ಆಯ್ಕೆ ಸಮಿತಿಯು ಅಸ್ತಿತ್ವಕ್ಕೆ ಬರಲಿರುವುದರಿಂದ ಸದರಿಯವರ ಆಯ್ಕೆ ಪ್ರಕ್ರಿಯೆಯನ್ನು ಸದರಿ ಸ್ಥಾಯಿ ಸಮಿತಿಯ ಮುಖಾಂತರ ನೇಮಿಸಿಕೊಳ್ಳಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿಯ ದಿನಾಂಕ 14-02-2011ರ ನಿರ್ಣಯ.

ನಿರ್ಣಯ :- ದಿನಾಂಕ 07-02-2011ರ ಆಯುಕ್ತರ ಟಿಪ್ಪಣಿ ಬಗ್ಗೆ ತೀರ್ಮಾನಿಸಿರುವ ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ 14-02-2011ರ ನಿರ್ಣಯವನ್ನು ಒಪ್ಪಿದೆ.

## 37]. ವಿಷಯದ ಸಂಖ್ಯೆ :-ತೆಆಸ್ಥಾಸ/248/2010-11

ಆಯುಕ್ತರವರ ಟಿಪ್ಪಣಿ ದಿನಾಂಕ:07-02-2011ರಲ್ಲಿ ವಿವರಿಸಿರುವಂತೆ, ಬಿ.ಬಿ.ಎಂ.ಪಿ.ಯ ಆರೋಗ್ಯ ಇಲಾಖೆಯ ವೈದ್ಯಕೀಯ ವಿಭಾಗದಲ್ಲಿ 6 ರೆಫರಲ್ ಹಾಗೂ 24 ಹೆರಿಗೆ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಅಸ್ಪತ್ರೆಗಳಲ್ಲಿ ತಾಯಿ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ ಒತ್ತುಕೊಟ್ಟು, ಈ ಸೇವೆಗಳನ್ನು ಒದಗಿಸಲಾಗುತ್ತಿದೆ. ರೆಫರಲ್ ಆಸ್ಪತ್ರೆಗಳಲ್ಲಿ ಕ್ಲಿಷ್ಟಕರವಾದ ಹೆರಿಗೆಗಳು, ಸಿಸೇರಿಯನ್ ಮಾಡುವುದು, ಸ್ತ್ರೀ ರೋಗಗಳಿಗೆ ಸಂಬಂಧಿಸಿದಂತೆ ದೊಡ್ಡ ಶಸ್ತ್ರ ಚಿಕಿತ್ಸೆ, ಸಣ್ಣ ಶಸ್ತ್ರ ಚಿಕಿತ್ಸೆಗಳನ್ನು ಮಾಡಲಾಗುತ್ತಿದೆ. ಹೆರಿಗೆ ಆಸ್ಪತ್ರೆಗಳಲ್ಲಿ ಸಾಮಾನ್ಯ ಹೆರಿಗೆಗಳನ್ನು ಮಾಡಲಾಗುತ್ತಿದೆ.
ಸರ್ಕಾರದ ಆರೋಗ್ಯ ಇಲಾಖೆಯಿಂದ ನಿಯೋಜನೆಗೊಂಡ ಈ ವೈದ್ಯರುಗಳ ಸೇವೆಗಳನ್ನು ಕೂಡಲೇ ಹಿಂಪಡೆದು ಮಾತೃ ಇಲಾಖೆಗೆ ಹಿಂದಿರುಗಿಸಬೇಕೆಂದು ಸರ್ಕಾರವು, ಪಾಲಿಕೆಗೆ ಆದೇಶಿಸಿರುತ್ತದೆ. ಈ ದಿಸೆಯಿಂದ, ಪಾಲಿಕೆಯ ಆಸ್ಪತ್ರೆಗಳಲ್ಲಿ ಸ್ತ್ರೀರೋಗ ತಜ್ಞರ ಕೊರತೆಯು ಉಂಟಾಗುತ್ತದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಹೆಚ್ಚಿನ ಸ್ತ್ರೀರೋಗ ತಜ್ಞರು ಪಾಲಿಕೆಯ ಆಸ್ಪತ್ರೆಗಳಲ್ಲಿ ಅತ್ಯವಶ್ಯಕತೆ ಇರುತ್ತದೆ.

ಕರ್ನಾಟಕ ಸರ್ಕಾರದ Karnataka Health System Development & Reform Project ಯೋಜನೆ ಅಡಿಯಲ್ಲಿ ಈಗಾಗಲೇ ಸರ್ಕಾರದ ಆಸ್ಪತ್ರೆಗಳಲ್ಲಿ ವೈದ್ಯರುಗಳನ್ನು ಗೌರವಧನದ ಆಧಾರದ ಮೇಲೆ ನಿಯೋಜಿಸಿಕೊಳ್ಳಲಾಗಿರುವಂತೆ, ಪಾಲಿಕೆಯ ಆರೋಗ್ಯ ಇಲಾಖೆಯ ರೆಫರೆಲ್ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ನಿಯೋಜಿಸಬಹುದಾಗಿದೆ. ಎಂಪ್ಯಾನೆಲ್‌ಮೆಂಟ್ ಅನ್ನು ಅಪರ ಆಯುಕ್ತರು (ಆರೋಗ್ಯ) ಮತ್ತು ಉಪ ಆಯುಕ್ತರು (ಆರೋಗ್ಯ), ಮುಖ್ಯ ಆರೋಗ್ಯಾಧಿಕಾರಿ, ಮುಖ್ಯಲೆಕ್ಕಾಧಿಕಾರಿ, ಕಾನೂನು ಕೋಶದ ಪ್ರತಿನಿಧಿ, ಖಾಸಗಿ ವಲಯದಿಂದ ಒಬ್ಬರು ಹಿರಿಯ ಸ್ತ್ರೀ ರೋಗ ತಜ್ಞರು, ವಲಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್), ಆಯಾ ರೆಫರಲ್ ಆಸ್ಪತ್ರೆಯ ಅಧೀಕ್ಷಕರುಗಳು ಹಾಗೂ ಆಸ್ಪತ್ರೆಯ ಹಿರಿಯ ವೈದ್ಯರುಗಳನ್ನೊಳಗೊಂಡ ಸಮಿತಿಯ ಮೂಲಕ ನೇಮಿಸಿಕೊಳ್ಳಬಹುದಾಗಿದೆ.

**ಷರತ್ತುಗಳು:**

- ಡಿಪ್ಲೊಮೊ/ಮಾಸ್ಟರ್ ಡಿಗ್ರಿ ಇನ್ OBG ಹೊಂದಿರುವ ತಜ್ಞರುಗಳನ್ನು ನಿಯೋಜಿಸಬಹುದು.
- ಎಂಪ್ಯಾನೆಲ್‌ಮೆಂಟ್ ಅವಧಿಯು ಒಂದು ವರ್ಷಕ್ಕೆ ಸೀಮಿತವಾಗಿದೆ, ಅಥವಾ ಖಾಯಂ ಹುದ್ದೆಗಳನ್ನು ಭರ್ತಿ ಮಾಡಿ ವೈದ್ಯರುಗಳ ನಿಯೋಜನೆ, ಆದಾಗ ಈ ಎಂಪ್ಯಾನೆಲ್‌ಮೆಂಟ್ ಅನ್ನು ರದ್ದುಪಡಿಸಲಾಗುತ್ತದೆ.
- ಪ್ರತಿ ರೆಫರಲ್ ಆಸ್ಪತ್ರೆ ವಲಯಕ್ಕೆ ಕನಿಷ್ಠ 3 ಜನ ಸ್ತ್ರೀರೋಗ ತಜ್ಞರುಗಳು ಇರಬೇಕಾಗುತ್ತದೆ.
- ಈ ಎಂಪ್ಯಾನೆಲ್‌ಮೆಂಟ್‌ನಲ್ಲಿ ನಿಯೋಜನೆಗೊಂಡ ಸ್ತ್ರೀರೋಗ ತಜ್ಞರು ಹಾಗೂ ಆಸ್ಪತ್ರೆಯ OPD ವೇಳೆಯಲ್ಲಿ ಲಭ್ಯವಿರಬೇಕು ಹಾಗೂ ದಿನದ 24 ಗಂಟೆಗಳು, ಎಲ್ಲಾ ರಜೆ ದಿನಗಳಲ್ಲೂ ಕರೆ ಬಂದಾಗ ತುರ್ತು ಸಂದರ್ಭದಲ್ಲಿಯೂ ಸಹ ಸೇವೆಯನ್ನು ನೀಡಬೇಕಾಗುತ್ತದೆ. ಈ ತಜ್ಞರುಗಳು ಪಾಲಿಕೆಯ ಅಧೀಕ್ಷಕರು ನಿರ್ದೇಶಿಸಿದಂತೆ ರೆಫರಲ್ ಅಥವಾ ಹೆರಿಗೆ ಆಸ್ಪತ್ರೆಗಳಲ್ಲಿ ಸೇವೆ ನೀಡಬೇಕು. ಇವರ ಸೇವೆಗಳನ್ನು ಬಿಬಿಎಂಪಿ ಆಸ್ಪತ್ರೆಗಳಿಗೆ ನಿಯೋಜಿಸಲಾಗುವುದು.
- ಈ ಸ್ತ್ರೀರೋಗ ತಜ್ಞರಿಗೆ ಯಾವುದೇ ಆರ್ಥಿಕ ಹೊಣೆ ಹಾಗೂ ಆಡಳಿತಾತ್ಮಕ ಹೊಣೆಗಾರಿಕೆಯನ್ನು ನೀಡುವಂತಿಲ್ಲ.

- ಈ ತಜ್ಞರುಗಳು ತಮ್ಮ ಕಾರ್ಯ ವ್ಯಾಪ್ತಿಯ ಒಳಗೆ ಗುಣಮಟ್ಟದ ಕಾರ್ಯ ನಿರ್ವಹಿಸತಕ್ಕದ್ದು, ಕಾರ್ಯ ವ್ಯಾಪ್ತಿಯನ್ನು ಮೀರಿ ಕಾರ್ಯ ನಿರ್ವಹಿಸಿ ತೊಂದರೆಗಳು ಹಾಗೂ ಕಾನೂನು ರೀತ್ಯಾ ದೂರುಗಳು ದಾಖಲಾದಲ್ಲಿ, ಸದರಿ ವೈದ್ಯರೇ ನೇರ ಜವಾಬ್ದಾರರಾಗುತ್ತಾರೆ. ಪಾಲಿಕೆಯು ಅದರ ಹೊಣೆಗಾರಿಕೆಯನ್ನು ತೆಗೆದುಕೊಳ್ಳುವುದಿಲ್ಲ.
- ಈ ತಜ್ಞರು ಆಸ್ಪತ್ರೆಯ ಎಲ್ಲಾ ಹೊರ / ಒಳ ರೋಗಿಗಳಿಗೆ ಸೇವೆ ನೀಡಬೇಕಾಗುತ್ತದೆ. ನಾಯಿ ಕಚ್ಚಿದ ರೋಗಿಗಳಿಗೆ ಚಿಕಿತ್ಸೆ, RNTCP ಮುಂತಾದ ರಾಷ್ಟ್ರೀಯ ಕಾರ್ಯಕ್ರಮಗಳು, ಸಾಮಾನ್ಯ ಖಾಯಿಲೆಗಳಿಗೆ ಚಿಕಿತ್ಸೆ ಹಗೂ ಪಾಲಿಕೆಯ ಎಲ್ಲಾ ಆರೋಗ್ಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಈ ರೀತಿ ಚಿಕಿತ್ಸೆ ನೀಡುವಲ್ಲಿ ಪಾಲಿಕೆಯಲ್ಲಿ ಚಾಲ್ತಿಯಲ್ಲಿನ ನಿಯಮಾವಳಿಗಳನ್ನು ಪಾಲಿಸಬೇಕಾಗುತ್ತದೆ. ಎಲ್ಲಾ ದಾಖಲಾತಿಗಳನ್ನು , ಲಭ್ಯವಿರುವ ದಾಖಲಾತಿ ಪುಸ್ತಕಗಳಲ್ಲಿ ಕಡ್ಡಾಯವಾಗಿ ದಾಖಲಾತಿ ಮಾಡತಕ್ಕದ್ದು. ಈ ತಜ್ಞರು ಆರೋಗ್ಯಾಧಿಕಾರಿಗಳು ಮತ್ತು ಅಧೀಕ್ಷಕರುಗಳ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದೆ.
- ಯಾವುದೇ ಆಡಳಿತಾತ್ಮಕ ಸಮಸ್ಯೆ ಹಾಗೂ ವೈದ್ಯಕೀಯ ಚಿಕಿತ್ಸೆಯಲ್ಲಿ ತೊಂದರೆ ಅಡಚಣೆ ಉಂಟಾದಾಗ ತಕ್ಕಣ ಮೇಲಾಧಿಕಾರಿಗಳ ಗಮನಕ್ಕೆ ತರಬೇಕಾಗುವುದು.
- ಆಸ್ಪತ್ರೆಯ ದೈನಂದಿನ ಔಷಧಿಗಳ ನಿರ್ವಹಣೆಯನ್ನು ಸಹ ಈ ಸ್ತ್ರೀರೋಗ ತಜ್ಞರು ನಿರ್ವಹಿಸಬೇಕಾಗುತ್ತದೆ. ಆದರೆ ಔಷಧಿ ಇಂಡೆಂಟ್ ಜವಾಬ್ದಾರಿಯನ್ನು ಆಡಳಿತಾತ್ಮಕ ವೈದ್ಯರಿಗೆ ನೀಡಬಹುದು.
- ಆಸ್ಪತ್ರೆಯ ಸೇವಾ ಶುಲ್ಕದ ಜವಾಬ್ದಾರಿಯನ್ನು ಸಹ ಆಡಳಿತಾತ್ಮಕ ವೈದ್ಯರಿಗೆ ನೀಡಬಹುದಾಗಿದೆ.
- ಈ ತಜ್ಞರುಗಳು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿ, ಕಾನೂನು ತೊಡಕುಗಳು ಉಂಟಾದಾಗ ಈ ವೈದ್ಯರುಗಳೇ ನೇರ ಜಬಾಬ್ದಾರರಾಗಿದ್ದಲ್ಲಿ ಇಂತಹ ವೈದ್ಯರನ್ನು ಎಂಪ್ಯಾನೆಲ್‌ಮೆಂಟ್‌ನಿಂದ ತಕ್ಷಣ ಸೂಚನೆಯನ್ನು ನೀಡದೆ ರದ್ದು ಮಾಡುವ ಅಧಿಕಾರ ಪಾಲಿಕೆಯದ್ದಾಗಿರುತ್ತದೆ.
- ಮೇಲಿನ ಎಲ್ಲಾ ಷರತ್ತುಗಳಿಗೆ ತಜ್ಞರಿಂದ ರೂ.100.00 ಗಳ ಸ್ಟ್ಯಾಂಪ್ ಪೇಪರ್‌ನ ಕರಾರು ಪತ್ರವನ್ನು ಪಡೆಯಬೇಕಾಗಿರುತ್ತದೆ.
- ಕೆ.ಹೆಚ್.ಎಸ್.ಡಿ,ಆರ್.ಪಿ. ಅಡಿಯಲ್ಲಿ ಗೌರವಧನವಾಗಿ ರೂ.5000–00 retention fee on a monthly basis for availability at all times, Rs.1000.00 per day for OPD for atleast 2 days of OPD in a week ನೀಡಲು ಅವಕಾಶವಿರುತ್ತದೆ. ಆದ್ದರಿಂದ ಪಾಲಿಕೆಯಲ್ಲಿ ಈ ವೈದ್ಯರುಗಳಿಗೆ ರೂ.5000–00 retention fee (ರಜೆ ದಿನಗಳು /ತುರ್ತು ಸಂದರ್ಭಗಳಲ್ಲಿ) ಮತ್ತು ಪ್ರತಿ ಮಾಹೆಗೆ ರೂ.25,000 (25 ದಿನಗಳು) ಒಟ್ಟು 30,000 ನೀಡಬೇಕಾಗುತ್ತದೆ.

ಆರ್ಥಿಕ ಕೆಲಸಗಳಿಗೆ / ಆಡಳಿತಾತ್ಮಕ ವೈದ್ಯರುಗಳಾಗಿ ಪಾಲಿಕೆಯ ಖಾಯಂ ವೈದ್ಯರುಗಳನ್ನು ನಿಯೋಜಿಸಬಹುದು. ಅದರಂತೆ ಅವಶ್ಯಕತೆಯಿರುವ ವೈದ್ಯರುಗಳ ಸಂಖ್ಯೆ ಮತ್ತು ಮಾಸಿಕವಾಗಿ ತಗಲುವ ವೆಚ್ಚ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಆಸ್ಪತ್ರೆಯ ಹೆಸರು | ಅವಶ್ಯಕತೆಯಿರುವ ಪ್ಯಾನಲ್ ಆಫ್ ಓಬಿಜಿ (ಸ್ತ್ರೀರೋಗ ತಜ್ಞರ) ಸಂಖ್ಯೆ | ಪ್ರತಿ ಮಾಹೆ ಗೌರವ ಧನವಾಗಿ ಒಬ್ಬರಿಗೆ ತಗಲುವ ವೆಚ್ಚ | ಒಟ್ಟು ಮೊತ್ತ ಮಾಸಿಕ |
|---|---|---|---|---|
| 1 | ಪೂರ್ವ ವಲಯದ (ಎಲ್ಲಾ ಆಸ್ಪತ್ರೆಗಳಿಗೆ) | 11 | ರೂ.30,000/– (ರಿಟೆಂಶನ್ ಫೀ ಸೇರಿ) | ರೂ.3,30,000/– |
| 2 | ದಕ್ಷಿಣ ವಲಯದ (ಎಲ್ಲಾ ಆಸ್ಪತ್ರೆಗಳಿಗೆ) | 12 | ರೂ.30,000/– (ರಿಟೆಂಶನ್ ಫೀ ಸೇರಿ) | ರೂ.3,60,000/– |
| 3 | ವಲಯದ (ಎಲ್ಲಾ ಆಸ್ಪತ್ರೆಗಳಿಗೆ) | 13 | ರೂ.30,000/– (ರಿಟೆಂಶನ್ ಫೀ ಸೇರಿ) | ರೂ.3,90,000/– |
| **ಒಟ್ಟು ಸಂಖ್ಯೆ (6 ರೆಫೆರಲ್ + 24 ಹೆರಿಗೆ ಆಸ್ಪತ್ರೆಗಳಿಗೆ)** | | **36** | | **ರೂ.10,80,000/–** |

ಈ ರೀತ್ಯಾ ಪಾಲಿಕೆಯಲ್ಲಿ ತೆಗೆದುಕೊಳ್ಳಬಹುದಾದ ಈ ವೈದ್ಯರುಗಳಿಗೆ ತಗಲಬಹುದಾದ ಮೊತ್ತವು ಮಾಸಿಕವಾಗಿ ರೂ.10,80,000/–ಗಳು (ಹತ್ತು ಲಕ್ಷದ ಎಂಭತ್ತು ಸಾವಿರ ರೂ ಮಾತ್ರ) ತಗಲುತ್ತದೆ. ವಾರ್ಷಿಕವಾಗಿ ರೂ.1,29,60,000/–ಗಳು (ಒಂದು ಕೋಟಿ ಇಪ್ಪತ್ತೊಂಭತ್ತು ಲಕ್ಷದ ಅರವತ್ತು ಸಾವಿರ ರೂ ಮಾತ್ರ) ತಗಲಬಹುದಾಗಿದ್ದು, ಈ ಮೊತ್ತವನ್ನು ಪಾಲಿಕೆಯ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ನಿಗಧಿಪಡಿಸಲಾದ 14th health medical administrative expenses-PO125 ಪಾಲಿಕೆ ಆಯವ್ಯಯದಲ್ಲಿ ಭರಿಸಬಹುದಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಲ್ಕಂಡಂತೆ ಪ್ಯಾನೆಲ್ ಆಫ್ ಓ.ಬಿ.ಜಿ. ಸ್ಪೆಷಲಿಸ್ಟ್ (ಸ್ತ್ರೀರೋಗ ತಜ್ಞರು) ಗಳನ್ನು ಗೌರವಧನದ ಆಧಾರದ ಮೇಲೆ ತೆಗೆದುಕೊಳ್ಳಲು ಮೇಲ್ಕಂಡಂತೆ ವಿವರಗಳನ್ನು ಸಲ್ಲಿಸಲಾಗಿದ್ದು, ಅನುಮೋದನೆ ನೀಡುವ ಸಂಬಂಧ ಮಂಡಿಸಿರುವ ಆಯುಕ್ತರ ದಿನಾಂಕ 07.02.2011ರ ಟಿಪ್ಪಣಿಯಲ್ಲಿನ ಪುಟ ಸಂಖ್ಯೆ 22 ರಲ್ಲಿರುವ ಕಲಂ 'ಅ' ನ್ನು ಮಾರ್ಪಡಿಸುತ್ತಾ

ಬಿಬಿಎಂಪಿಯಲ್ಲಿ ಈಗ ಸ್ಥಾಯಿ ಸಮಿತಿಗಳು ಅಸ್ತಿತ್ವಕ್ಕೆ ಬಂದಿರುವುದರಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯಆಯ್ಕೆ ಸಮಿತಿಯು ಅಸ್ತಿತ್ವಕ್ಕೆ ಬರಲಿರುವುದರಿಂದ ಸದರಿಯವರ ಆಯ್ಕೆ ಪ್ರಕ್ರಿಯೆಯನ್ನು ಸದರಿ ಸ್ಥಾಯಿ ಸಮಿತಿಯ ಮುಖಾಂತರ ನೇಮಿಸಿಕೊಳ್ಳಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಮಿತಿಯ ದಿನಾಂಕ 14–02–2011ರ ನಿರ್ಣಯ.

<u>ನಿರ್ಣಯ :– ದಿನಾಂಕ 07–02–2011ರ ಆಯುಕ್ತರ ಟಿಪ್ಪಣಿ ಬಗ್ಗೆ ತೀರ್ಮಾನಿಸಿರುವ ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ 14–02–2011ರ ನಿರ್ಣಯವನ್ನು ಒಪ್ಪಿದೆ.</u>

## 38]. ವಿಷಯದ ಸಂಖ್ಯೆ :–ತೆಆಸ್ಥಾಸ/249/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:14–2–2011ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ 191ರ ವ್ಯಾಪ್ತಿಯಲ್ಲಿ ಕೆ.ಎಸ್.ಆರ್.ಪಿ ಕ್ವಾರ್ಟಸ್ ವಸತಿ ಸಮುಚ್ಚಯವಿದ್ದು ಈ ಬಡಾವಣೆಯ ರಸ್ತೆಗಳ ಅಭಿವೃದ್ಧಿ ಮತ್ತು ಬೀದಿ ದೀಪಗಳ ಅಭಿವೃದ್ಧಿ ಹಾಗೂ ದುರಸ್ಥಿ ಪಡಿಸುವಂತೆ ಈ ಭಾಗದ ಪಾಲಿಕೆ ಸದಸ್ಯರಾದ ಶ್ರೀಮತಿ ಕವಿತಾ ಬಾಬುರಾಜ್ ರವರು ಕೋರಿರುತ್ತಾರೆ. ಈ ಸಂಬಂಧ ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯ ಮತ್ತು ಪಾಲಿಕೆ ಸದಸ್ಯೆ ಶ್ರೀಮತಿ ಕವಿತಾ ಬಾಬುರಾಜ್‌ರವರು ಬಿಬಿಎಂಪಿ ಅಧಿಕಾರಿಗಳೊಂದಿಗೆ ದಿನಾಂಕ: 23.11.2010 ರಂದು ಸ್ಥಳ ಪರಿವೀಕ್ಷಣೆ ಮಾಡಿರುತ್ತಾರೆ. ಅಲ್ಲದೆ ಸದರಿ ಉದ್ದೇಶಿತ ಕಾಮಗಾರಿಯ ಸ್ಥಳವನ್ನು ಮಾನ್ಯ ಆಯುಕ್ತರ ಆದೇಶದಂತೆ ಪ್ರಧಾನ ಅಭಿಯಂತರರು ಸಹಾ ದಿನಾಂಕ 25.11.2010ರಂದು ಪರಿವೀಕ್ಷಣೆ ಮಾಡಿರುತ್ತಾರೆ. ಪರಿವೀಕ್ಷಣಾ ಸಮಯದಲ್ಲಿ ಪ್ರಧಾನ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಆದೇಶದಂತೆ ವಿವಿಧ ಅಂಶಗಳನ್ನೊಳಗೊಂಡ ಬೀದಿ ದೀಪಗಳ ಅಭಿವೃದ್ಧಿ ಮತ್ತು ದುರಸ್ಥಿ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ಸಿದ್ದಪಡಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಸಶಸ್ತ್ರ ಮೀಸಲು ಪಡೆಯ 9ನೇ ಬೆಟಾಲಿಯನ್‌ರವರು ದಿನಾಂಕ 15.12.2010ರಿಂದ ದಿನಾಂಕ 20.12.2010ರವರೆಗೆ 59ನೇ ಅಖಿಲ ಭಾರತ ಪೊಲೀಸ್ ಕ್ರೀಡಾ ಕೂಟವನ್ನು ಏರ್ಪಡಿಸಿದ್ದರಿಂದ ಹಾಗೂ ಸದರಿ ವಸತಿ ಸಮುಚ್ಚಯಕ್ಕೆ ಹಲವಾರು ಗಣ್ಯರು ಆಗಮಿಸುವ ಸಂಭವವಿದೆ ಎಂದು ಕಮಾಂಡೆಂಟ್‌ರವರು ದಿನಾಂಕ 15.10.2010ರಂದು ಮಾನ್ಯ ಆಯುಕ್ತರಿಗೆ ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ.

ಕಾಮಗಾರಿಯು ನಿಗದಿತ ಅವಧಿಯೊಳಗೆ ಪೂರ್ಣಗೊಳ್ಳಬೇಕಿರುವುದರಿಂದ ಜಂಟಿ ಆಯುಕ್ತರು, ಬೊಮ್ಮನಹಳ್ಳಿಯವರ ಶಿಫಾರಸ್ಸಿನ ಮೇರೆಗೆ ಮೆ: ಕೆ.ಆರ್.ಐ.ಡಿ.ಎಲ್‌ರವರಿಗೆ ನಿರ್ವಹಿಸಲು ಆದೇಶಿಸಿ ಮೂಲ ಕಡತದ ಟಿಪ್ಪಣಿ ಹಾಳೆಯಲ್ಲಿ ದಿನಾಂಕ 01.12.2010ರಂದು ಅನುಮೋದನೆ ನೀಡಿದ್ದು, ಜಾಬ್ ಕೋಡನ್ನು ಸಹಾ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಮತ್ತು ಕಾಮಗಾರಿಯು ತ್ವರಿತವಾಗಿ ಪೂರ್ಣಗೊಳ್ಳಬೇಕಿದ್ದುದರಿಂದ ಕಾಮಗಾರಿಯನ್ನು ನಿರ್ವಹಿಸಲು ಮೆ: ಕೆ.ಆರ್.ಐ.ಡಿ.ಎಲ್ ಸಂಸ್ಥೆಯವರೊಂದಿಗೆ ಕರಾರು ಮಾಡಿಕೊಂಡು ದಿನಾಂಕ 14.12.2010ರಂದು ಕಾರ್ಯಾದೇಶವನ್ನು ಸಹಾ ನೀಡಲಾಗಿದೆ. ಸದರಿ ಸಂಸ್ಥೆಯವರು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು ಬಿಲ್ಲನ್ನು ಪಾವತಿಸುವಂತೆ ಮನವಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯನ್ನು ತುರ್ತು ಕಾಮಗಾರಿಗಳಿಗೆ ಮೀಸಲಿಟ್ಟ ಅನುದಾನ "P–0541" ಲೆಕ್ಕ ಶೀರ್ಷಿಕೆಯಡಿ ರೂ.9.50 ಲಕ್ಷ ಗಳಿಗೆ ಮಂಜೂರಾತಿ ನೀಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಮೇಲ್ಕಂಡ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅವಗಾಹನೆಗೆ ತರುತ್ತಾ ಪ್ರಶ್ನೆಯಲ್ಲಿರುವ ಕಾಮಗಾರಿಗೆ ಸ್ಥಿರೀಕರಣವನ್ನು ಪಡೆಯುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ :– ದಿನಾಂಕ 14–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 39]. ವಿಷಯದ ಸಂಖ್ಯೆ :–ತೆಆಸ್ಥಾಸ/250/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಸಂಖ್ಯೆ: ಬಿ12(3ಎ)ಸಿಪಿಆರ್/49/10–11, ದಿನಾಂಕ:14–02–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರವರ ಪತ್ರ ಸಂಖ್ಯೆ:ಸಾನ್ಯಾಸ್ಥಾನ/ಪಿಆರ್/24/10–11. ರ ಪತ್ರದಲ್ಲಿ ಪಾಲಿಕೆಯು ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಹೊರಹೊಮ್ಮಿರುವುದರಿಂದ, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿಯನ್ನು ಹೊಂದಿದ್ದು, ಪ್ರಸ್ತಕ ಸಾಲಿನಲ್ಲಿ ಸುಮಾರು 9000 ಕೋಟಿ ಆಯವ್ಯಯವನ್ನು ಮಂಡಿಸಿರುವುದರಿಂದ, ಸದರಿ ಆಯವ್ಯಯದಲ್ಲಿ ಶೇಕಡ 22.75ರ ಕಲ್ಯಾಣ ಕಾರ್ಯಕ್ರಮಗಳನ್ನು ಸಹ ತ್ವರಿತವಾಗಿ ಅನುಷ್ಟಾನಗೊಳಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಏಳಿಗೆಗಾಗಿ ಪಾಲಿಕೆಯು ಯೋಜನೆಯನ್ನು ರೂಪಿಸಿ ಸೌಲಭ್ಯವನ್ನು ಸಂವಿಧಾತ್ಮಕವಾಗಿ ದೊರಕಿಸಿ ಕೊಡಬೇಕಾಗಿರುವುದರಿಂದ, ಪಾಲಿಕೆಯಲ್ಲಿ ಉಪ ಆಯುಕ್ತರು(ಕಲ್ಯಾಣ), ಕಲ್ಯಾಣಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿ ಇದ್ದರೂ ಸಹ ಹಲವಾರು ವರ್ಷಗಳಿಂದ ಕಲ್ಯಾಣ ಕಾರ್ಯಕ್ರಮಗಳು ಸಾರ್ವಜನಿಕರಿಗೆ ತಲುಪದೇ ಅನುದಾನವು ಪ್ರತಿ ವರ್ಷ ಕ್ಯಾರಿ ಫಾರ್ವಡ್ ಆಗುತ್ತಲೇ ಬರುತ್ತಿರುವುದರಿಂದ, ಸಾರ್ವಜನಿಕರಿಂದ ಟೀಕೆಗೆ ಪಾಲಿಕೆ ಗುರಿಯಾಗಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪಾಲಿಕೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸಲು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಗೆ, ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸಾಕಷ್ಟು ತಿಳುವಳಿಕೆ ಹಾಗೂ ಅನುಭವವುಳ್ಳ ಒಬ್ಬ ಆಪ್ತಕಾರ್ಯದರ್ಶಿ/ಸಲಹೆಗಾರರನ್ನು ಗೌರವಧನದ ಮೇಲೆ ನೇಮಿಸಿಕೊಂಡು ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ಜಾರಿಗೊಳಿಸುವುದು ಅವಶ್ಯಕವಾಗಿರುವುದರಿಂದ, ಈ ಸಂಬಂಧ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂವಿಧಾನಿಕ ರಕ್ಷಣಾತ್ಮಕ ಅನುಷ್ಟಾನದ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ, ಕೇಂದ್ರ ಹಾಗೂ ರಾಜ್ಯ ಮತ್ತು ನಗರ ಮಿತಿಯಲ್ಲಿ ಸರ್ಕಾರದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಯೋಜನೆಗಳನ್ನು ಫಲಾನುಭವಿಗಳಿಗೆ ಒದಗಿಸುವಲ್ಲಿ ಅಪಾರ ಅನುಭವವುಳ್ಳ ಜೊತೆಗೆ ಹಿಂದುಳಿದ ಹಕ್ಕುಗಳು, ಸಾಮಾಜಿಕ ನ್ಯಾಯ, ಉದ್ಯೋಗ, ಶೈಕ್ಷಣಿಕ ಕ್ಷೇತ್ರ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಸಾಲ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸುವಲ್ಲಿ ಮತ್ತು ಎಸ್.ಸಿ.ಪಿ.ಯೋಜನೆಗಳ ಬಗ್ಗೆ ಅಪಾರ ಅನುಭವ ಇರುವ ಶ್ರೀ ಕೆ.ಪಳನಿವೇಲು ರವರನ್ನು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಆಪ್ತಕಾರ್ಯದರ್ಶಿ/ಸಲಹೆಗಾರರನ್ನಾಗಿ ಗೌರವಧನದ ಮೇಲೆ ನೇಮಿಸಲು ಕೋರಿರುತ್ತಾರೆ.

ಈ ಸಂಬಂಧ ಶ್ರೀ ಕೆ. ಪಳನಿವೇಲು ಇವರನ್ನು 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಾವಳಿಗಳ ನಿಯಮ 20(ಬಿ)ರನ್ವಯ ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿರವರ ಆಪ್ತಕಾರ್ಯದರ್ಶಿ/ಸಲಹೆಗಾರರನ್ನಾಗಿ ನೇಮಕ ಮಾಡಿಕೊಳ್ಳಲು ಸರ್ಕಾರದ ಪೂರ್ವಾನುಮತಿ ಪಡೆದ ನಂತರ, ಸದರಿಯವರನ್ನು ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ, ಶ್ರೀ ಕೆ.ಪಳನಿವೇಲು ರವರನ್ನು ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿರವರ ಆಪ್ತಕಾರ್ಯದರ್ಶಿ/ ಸಲಹೆಗಾರರನ್ನಾಗಿ ನಿಯಮಾವಳಿಯ ರೀತ್ಯ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿರುವ ಟಿಪ್ಪಣಿ.

–ಮುಂದೂಡಿದೆ–

## 40]. ವಿಷಯದ ಸಂಖ್ಯೆ :–ತೆಆಸ್ಥಾಸ/251/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:14–02–2011ರಲ್ಲಿ ವಿವರಿಸಿರುವಂತೆ, ಕೋರಮಂಗಲ ಉಪ ವಿಭಾಗ ಜಕ್ಕಸಂದ್ರ ವಾರ್ಡ್ 173ರ ವೆಂಕಟಪುರ ಗ್ರಾಮದಿಂದ ಸರ್ಜಾಪುರ ಮುಖ್ಯ ರಸ್ತೆಗೆ KSRP 4ನೇ ಪಡೆಯವರಿಂದ ಅನಧೀಕೃತವಾಗಿ ಸಾರ್ವಜನಿಕ ರಸ್ತೆಗೆ ತಡೆಗೋಡೆಯನ್ನು ನಿರ್ಮಿಸಿದ್ದು, ಈ ತಡೆಗೋಡೆಯನ್ನು ತೆರವುಗೊಳಿಸುವ ವಿಚಾರವಾಗಿ ಕರ್ನಾಟಕ ವಿಧಾನ ಸಭೆ ಅರ್ಜಿಗಳ ಸಮಿತಿಯು ದಿನಾಂಕ: 18/02/2010 ರಂದು ಪರಿಶೀಲನೆ ಮಾಡಿ ಸದರಿ ಜಮೀನಿನ ಮಧ್ಯದಲ್ಲಿರುವ ರಸ್ತೆಯ ಬದಲಾಗಿ KSRP 4ನೇ ಪಡೆಯ ಕಾಂಪೌಂಡ್ ಗೋಡೆಯ ಪಕ್ಕದಲ್ಲಿರುವ ಹಾಲಿ 30 ಅಡಿ ರಸ್ತೆಯನ್ನು ಇನ್ನೂ 10 ಅಡಿ ಅಗಲ ಮಾಡಿ ಒಟ್ಟು 40 ಅಡಿ ಅಗಲೀಕರಣಗೊಳಿಸಬೇಕೆಂದು ಅಥವಾ ಪ್ರಸಕ್ತವಿರುವ ತಡೆಗೋಡೆಯನ್ನು ಕಾಂಪೌಂಡ್ ಒಳಗಡೆ ಸ್ಥಳಾಂತರಿಸಿ ಹಾಲಿ ಇರುವ ರಸ್ತೆಗೆ 10 ಅಡಿ ಹೆಚ್ಚಿಗೆ ವಿಸ್ತೀರ್ಣಗೊಳಿಸಿ 40 ಅಡಿ ರಸ್ತೆಯನ್ನಾಗಿ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿ ಕೊಡಲು ಶಿಫಾರಸ್ಸು ಮಾಡಲಾಗಿರುತ್ತದೆ.

ಸಮಿತಿಯ ಶಿಫಾರಸ್ಸಿನಂತೆ ಮುಖ್ಯ ಅಭಿಯಂತರರು(ದಕ್ಷಿಣ) ರವರು KSRP 4ನೇ ಪಡೆಯ ಕಾಂಪೌಂಡ್ ಗೋಡೆಯ ಪಕ್ಕದಲ್ಲಿರುವ ಹಾಲಿ 30 ಅಡಿ ರಸ್ತೆಯನ್ನು ಇನ್ನೂ 10 ಅಡಿ ರಸ್ತೆಯಾಗಿ ಅಗಲೀಕರಣಗೊಳಿಸಲು ಹಾಗೂ ಅಭಿವೃದ್ಧಿ ಪಡಿಸಲು ರೂ: 230.00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.

ಈ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿದ್ದು, ಇದಕ್ಕೆ ತಗುಲುವ ಮೊತ್ತ ರೂ:230.00 ಲಕ್ಷಗಳ ವಿಶೇಷ ಅನುಧಾನ ಬಿಡುಗಡೆ ಮಾಡಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

–ಮುಂದೂಡಿದೆ–

## 41]. ವಿಷಯದ ಸಂಖ್ಯೆ :–ತೆಆಸ್ಥಾಸ/252/2010–11

ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ:ನಅಇ/85/ಎಂಎನ್‌ಜಿ/2010, ದಿನಾಂಕ:21–7–2010 ರಲ್ಲಿ ಸರ್ಕಾರದ ದಿನಾಂಕ:02–06–2003 ರ ಮಾರ್ಗಸೂಚಿಯಂತೆ ನಗರ ಪಾಲಿಕೆ ಸ್ವತ್ತನ್ನು ವಿಲೇ ಮಾಡಬೇಕಾದಲ್ಲಿ ಸಾರ್ವಜನಿಕ ಹರಜಿನ ಮೂಲಕವೇ ವಿಲೇ ಮಾಡಬೇಕಾಗಿರುತ್ತದೆ. ಆದರೆ, ಶೇಷಾದ್ರಿಪುರಂ, ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಕೃಷ್ಣ ಫ್ಲೋರ್ ಮಿಲ್ ಪಕ್ಕದಲ್ಲಿರುವ ನಗರಪಾಲಿಕೆ ವಸತಿಗೃಹಗಳನ್ನು ಪಾಲಿಕೆಯ ನೌಕರರಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ವಸತಿಗೃಹಗಳು ವಾಸ ಮಾಡಲು ಯೋಗ್ಯವಿಲ್ಲದೇ ಇದ್ದು, ಕಟ್ಟಡಗಳು ಶಿಥಿಲಗೊಂಡಿರುತ್ತವೆ. ಆದುದರಿಂದ, ಸದರಿ ವಸತಿ ಗೃಹಗಳಲ್ಲಿ ವಾಸ ಮಾಡುತ್ತಿರುವ ನೌಕರರ ಕುಟುಂಬದವರಿಗೆ ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ: ನಅಇ/20/ಎಂ.ಎನ್.ಜಿ/99(8), ದಿನಾಂಕ:15–5–2000 ರ ಆದೇಶದಂತೆ ಪ್ಲಾಟ್‌ಫಾರಂ ರಸ್ತೆಯಲ್ಲಿರುವ ಚಾಲಕರ ವಸತಿಗೃಹ 'ಬಿ' ಬ್ಲಾಕ್‌ನ್ನು ಒಡೆದು ಹಾಕಿ, ಅಲ್ಲಿ ವಾಸಿಸುತ್ತಿರುವ ನೌಕರರಿಗೆ ನಿವೇಶನ ಅಳತೆ 15X15 ಅಡಿಗಳಂತೆ ವಿಂಗಡಿಸಿ ಹಂಚಿಕೆ ಮಾಡಲಾಗಿರುವಂತೆ ಶೇಷಾದ್ರಿಪುರಂ ಪ್ಲಾಟ್‌ಫಾರಂ ರಸ್ತೆಯಲ್ಲಿ ಹಂಚಿಕೆ ಮಾಡಿರುವ ನಾಲ್ಕು ವಸತಿಗೃಹಗಳನ್ನು ಪಾಲಿಕೆಯ ನೌಕರರಿಗೂ ಸಹ ಮಾರುಕಟ್ಟೆ ದರದಂತೆ ಬೆಲೆ ವಿಧಿಸಿ ನಿಗದಿಪಡಿಸಿಕೊಂಡ ತದನಂತರ, ನೌಕರರಿಂದ ಕಟ್ಟಡಕ್ಕೆ ತಗಲುವ ವೆಚ್ಚವನ್ನು ಪಾವತಿ ಮಾಡಿಕೊಂಡು ನಂತರ ಮುಂದಿನ ಹತ್ತು ವರ್ಷಗಳಲ್ಲಿ ಯಾರಿಗೂ ಪರಭಾರೆ ಮಾಡತಕ್ಕದ್ದಲ್ಲ ಎಂಬ ಷರತ್ತಿಗೊಳಪಟ್ಟು ಗುತ್ತಿಗೆ ಮಾರಾಟ ಮಾಡಿ ಕರಾರು ಪತ್ರ ನೋಂದಾಯಿಸಲು ಅನುಮೋದನೆ ಕೋರಿ ದಿನಾಂಕ: 22–1–2010 ರಂದು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಟಿಪ್ಪಣಿಯಂತೆ, ಈ ಕೆಳಕಂಡ ಪಾಲಿಕೆಯ ನೌಕರರಿಗೆ ಮಾರಾಟ ಮಾಡಲು ಹಾಗೂ ಕ್ರಯ ಪತ್ರ ನೀಡಲು ತೀರ್ಮಾನಿಸಲಾಗಿದೆ.

| ಕ್ರ.ಸಂ. | ನೌಕರರ ಹೆಸರು | ಪದನಾಮ | ಹಂಚಿಕೆ ಮಾಡಿರುವ ವಸತಿ ಗೃಹ ಸಂಖ್ಯೆ | ವಿಸ್ತೀರ್ಣ | ಮಾರುಕಟ್ಟೆ ದರ | ಷರಾ |
|---|---|---|---|---|---|---|
| 1 | ಶ್ರೀ ಡಿ.ಪಳನಿ | ವಾಹನ ಚಾಲಕರು | 41/1 | 55 X 20 ಚ.ಅಡಿ | 13,20,000.00 | |
| 2 | ಶ್ರೀ ಆರ್.ವೆಂಕಟೇಶ್ | ವಾಹನ ಚಾಲಕರು | 42/1 | 55 X 20 ಚ.ಅಡಿ | 13,20,000.00 | |
| 3 | ಶ್ರೀ ಎಸ್.ಶ್ರೀಧರ್ | ವಾಹನ ಚಾಲಕರು | 42/2 | 55 X 20 ಚ.ಅಡಿ | 13,20,000.00 | |
| 4 | ಶ್ರೀ ಎನ್.ಎಸ್. ವೆಂಕಟೇಶ್ | ದ್ವಿ.ದ.ಸ. | 41/2 | 55 X 20 ಚ.ಅಡಿ | 13,20,000.00 | |
| ಒಟ್ಟು | | | | | 52,80,000.00 | |

| **ನಾಲ್ಕು ಜನರಿಗೆ ಒಟ್ಟು ಐವತ್ತೆರಡು ಲಕ್ಷದ ಎಂಭತ್ತು ಸಾವಿರ ರೂಪಾಯಿಗಳು ಮಾತ್ರ** |
|---|

ಮೇಲ್ಕಂಡ ಪಾಲಿಕೆಯ ನೌಕರರಿಗೆ ಮಾರುಕಟ್ಟೆ ದರದಂತೆ ನಿವೇಶನದ ಬೆಲೆಯನ್ನು ಚದರ ಅಡಿಗೆ ರೂ.1,200.00 ರಂತೆ ನಿಗಧಿಪಡಿಸಲಾಗಿದೆ. ಸದರಿ ನಾಲ್ಕು ಜನ ನೌಕರರಿಗೆ 55X20=1,110 ಚದರ ಅಡಿಗಳ ವಿಸ್ತೀರ್ಣದ ವಸತಿ ಗೃಹ ಹಂಚಿಕೆ ಮಾಡಲಾಗಿದ್ದು, ಒಬ್ಬ ನೌಕರರ ವಸತಿಗೃಹದ ವಿಸ್ತೀರ್ಣ ಒಟ್ಟು 1,100 ಚದರ ಅಡಿಗಳಿದ್ದು, ನಿವೇಶನ ಮಾರುಕಟ್ಟೆಯ ದರವು ರೂ.13,20,000/– ಗಳಂತೆ, 4 ವಸತಿಗಳ ಒಟ್ಟು 4,400 ಚದರ

ಅಡಿಗಳಿಗೆ ತಗಲುವ ವೆಚ್ಚ ರೂ.52,80,000/– ಗಳಾಗುತ್ತದೆ. ಈ ಮೊತ್ತವನ್ನು ಪಾಲಿಕೆಯ ಖಜಾನೆಗೆ ಜಮಾ ಮಾಡಿಕೊಂಡ ನಂತರ ಸರ್ಕಾರದ ಆದೇಶದ ದಿನಾಂಕ:15–5–2000 ರಂತೆ ಷರತ್ತು ವಿಧಿಸಿ, ಕ್ರಯಕ್ಕೆ ನೀಡಲು ಹಾಗೂ ಈ ವಿಷಯದಲ್ಲಿ ಸೂಕ್ತ ಸಲಹಾ ಶಿಫಾರಸ್ಸುಗಳನ್ನು ನೀಡಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ಸದರಿ ಪ್ರಕರಣವನ್ನು ಸಲ್ಲಿಸಲು ಅನುಮೋದನೆ ಕೋರಿ ಸ್ಥಾಯಿ ಸಮಿತಿಗಳು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ : 12–08–2010 ರ ಟಿಪ್ಪಣಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಗಿದ್ದು (14–12–2010), ಆಯುಕ್ತರ ದಿನಾಂಕ:12–08–2010 ರ ಟಿಪ್ಪಣಿಯನ್ನು ಒಪ್ಪಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:21–12–2010 ರ ನಿರ್ಣಯ ಹಾಗೂ ಆಯುಕ್ತರ ದಿನಾಂಕ:12–08–2010 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 11–01–2011 ರ ನಿರ್ಣಯ ಹಾಗೂ ದಿನಾಂಕ 01–02–2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಪ್ರಸ್ತಾಪಿತ ವಿಷಯದ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮರು ಮಂಡಿಸಲು ತೀರ್ಮಾನಿಸಿರುವ ಕುರಿತು.

<u>–ಮುಂದೂಡಿದೆ–</u>

## <u>ಹೆಚ್ಚುವರಿ ವಿಷಯಗಳು :–</u>

### <u>01]. ವಿಷಯದ ಸಂಖ್ಯೆ :–ತೆಆಸ್ಥಾಸ/253/2010–11</u>

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಜಆ(ಕ/ಆ)ಪಿಎಸ್ಆರ್(4)159/10–11, ದಿನಾಂಕ:24–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಅಧ್ಯಕ್ಷರು, **"ಸರ್ವಜ್ಞ ಮಿತ್ರ ವೃಂದ (ರಿ)"** ಬೆಂಗಳೂರು, ರವರು ಸಲ್ಲಿಸಿರುವ ಪತ್ರವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವುದಾಗಿ, ಸದರಿ ಸಂಸ್ಥೆಯು ಹರವಾರು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಈ ಸಂಬಂಧ ಸದರಿ ಸಂಸ್ಥೆಯು ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ 2010–11ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾಯ್ದಿರಿಸಿರುವ ರೂ. 3.00 ಲಕ್ಷ ಅನುದಾನ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸಿ, **"ಸರ್ವಜ್ಞ ಮಿತ್ರ ವೃಂದ (ರಿ)"** ಬೆಂಗಳೂರು, 2010–11ನೇ ಸಾಲಿನ ಆಯವ್ಯಯದಲ್ಲಿ ರೂ. 3.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವುದನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010

ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (67) ರಲ್ಲಿ **"ಸರ್ವಜ್ಞ ಮಿತ್ರ ವೃಂದ (ರಿ), 9ನೇ ಬಡಾವಣೆ, ಜಯನಗರ,"** ರವರಿಗೆ ನಿಗಧಿ ಪಡಿಸಲಾಗಿರುವ ರೂ. 3.00 ಲಕ್ಷಗಳ (ಮೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 24–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 02]. ವಿಷಯದ ಸಂಖ್ಯೆ :–ತೆಆಸ್ಥಾಸ/254/2010–11

ಆಯುಕ್ತರವರ ಟಿಪ್ಪಣಿ ಸಂಖ್ಯೆ: ಜಆ(ಕ/ಆ)ಪಿಎಸ್‌ಆರ್(4)160/10–11, ದಿನಾಂಕ:24–02–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಮಾನ್ಯ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮಾನ್ಯ ಆಯುಕ್ತರಿಗೆ ಪತ್ರ ಬರೆದು ಅಧ್ಯಕ್ಷರು, **"ರಕ್ಷಾ ಫೌಂಡೇಷನ್"** ಬೆಂಗಳೂರು, ರವರು ಸಲ್ಲಿಸಿರುವ ಪತ್ರವನ್ನು ತಮ್ಮ ಪತ್ರದೊಂದಿಗೆ ಲಗತ್ತಿಸಿರುವುದಾಗಿ, ಸದರಿ ಸಂಸ್ಥೆಯು ಹರವಾರು ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದ್ದು, ಈ ಸಂಬಂಧ ಸದರಿ ಸಂಸ್ಥೆಯು ತಮ್ಮ ಸಂಸ್ಥೆಯ ಕಾರ್ಯಚಟುವಟಿಕೆಗಳಿಗಾಗಿ 2010–11ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾಯ್ದಿರಿಸಿರುವ ರೂ. 3.00 ಲಕ್ಷ ಅನುದಾನ ಮಂಜೂರು ಮಾಡಲು ಕೋರಿರುತ್ತಾರೆಂದು ತಿಳಿಸಿ, **"ರಕ್ಷಾ ಫೌಂಡೇಷನ್"** ಬೆಂಗಳೂರು, 2010–11ನೇ ಸಾಲಿನ ಆಯವ್ಯಯದಲ್ಲಿ ರೂ. 3.00 ಲಕ್ಷಗಳನ್ನು ಕಾಯ್ದಿರಿಸಲಾಗಿರುವುದನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (68) ರಲ್ಲಿ **"ರಕ್ಷಾ ಫೌಂಡೇಷನ್, ಜಯನಗರ"**,ರವರಿಗೆ ನಿಗಧಿ ಪಡಿಸಲಾಗಿರುವ ರೂ. 3.00 ಲಕ್ಷಗಳ (ಮೂರು ಲಕ್ಷಗಳು ಮಾತ್ರ) ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ :– ದಿನಾಂಕ 24–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

## 03]. ವಿಷಯದ ಸಂಖ್ಯೆ :–ತೆಆಸ್ಥಾಸ/255/2010–11

ಆಯುಕ್ತರವರ ಟಿಪ್ಪಣಿ ದಿನಾಂಕ:10–02–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಯೋಜನೆ ಪಶ್ಚಿಮ ರವರು, Construction of Swimming pool at J.P.Park in Mathikere Ward No. 17 ಕಾಮಗಾರಿಯನ್ನು ಕೈಗೊಂಡಿದ್ದು, ಇದಕ್ಕಾಗಿ 2009–10ನೇ ಸಾಲಿನಲ್ಲಿ ರೂ.489.00 ಲಕ್ಷಗಳಿಗೆ ಕಾಮಗಾರಿ ಸಂಕೇತ **000-10-N-P-H-O-MI-002 ಆಯವ್ಯಯ ಲೆಕ್ಕ ಶೀರ್ಷಿಕೆ 11– ತೋಟಗಾರಿಕೆ ಮತ್ತು ಪರಿಸರ**

**ನಿರ್ವಹಣೆ – ಮೂಲಭೂತ ಸೌಕರ್ಯಗಳು – ಜೆ.ಪಿ.ಪಾರ್ಕ್ ಸುಂದರೀಕರಣ 3ನೇ ಹಂತ – ಪಿ.ಸಂಖ್ಯೆ 974** ರಲ್ಲಿ ಆಯವ್ಯಯದಲ್ಲಿ ನಿಗಧಿಪಡಿಸಿರುವ ಮೊತ್ತ ರೂ.100.00 ಗಳಿಗೆ ಎದುರಾಗಿ ರೂ.489.00 ಲಕ್ಷಗಳಿಗೆ ಕಾಮಗಾರಿ ಸಂಕೇತವನ್ನು ನೀಡಲಾಗಿರುತ್ತದೆ. ಆದರೆ ಯಾವುದೇ ಪಾವತಿ 2009–10 ರಲ್ಲಿ ಆಗಿರುವುದಿಲ್ಲ.

2010–11ನೇ ಸಾಲಿನ ಆಯವ್ಯಯದಲ್ಲಿ **ಮುಂದುವರೆದ ಕಾಮಗಾರಿಯಾಗಿ** ಸದರಿ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಮೇಲ್ಕಂಡ ಕಾಮಗಾರಿಗೆ ಅನುದಾನದ ಅವಕಾಶವನ್ನು ಕಲ್ಪಿಸಿರುವುದಿಲ್ಲ.

2010–11ನೇ ಸಾಲಿನ ಆಯವ್ಯಯದಲ್ಲಿ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ರೂ.150.00 ಲಕ್ಷಗಳ ಅನುದಾನವನ್ನು ಚಾಲ್ತಿ ಕಾಮಗಾರಿಗಾಗಿ ಮೀಸಲಿರಿಸಿದ್ದು, ದಿನಾಂಕ 4–2–2011 ರಂತೆ ರೂ.267.19 ಲಕ್ಷಗಳ ವೆಚ್ಚವನ್ನು ಭರಿಸಲಾಗಿದೆಯೆಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ. ಎಫ್.ಬಿ.ಎ.ಎಸ್.ಗಣಕ ಕೇಂದ್ರದಿಂದ ಪಡೆದ ಪಟ್ಟಿಯನ್ನು ಲಗತ್ತಿಸಿದೆ.

2010–11ನೇ ಸಾಲಿನಲ್ಲಿ ಸದರಿ ಕಾಮಗಾರಿ ಸಂಕೇತಕ್ಕೆ ಎದುರಾಗಿ ರೂ.295.22 ಲಕ್ಷಗಳು ಪಾವತಿಗಾಗಿ ಕಡತವನ್ನು ಸ್ವೀಕರಿಸಿದೆ.

| ಕಾಮಗಾರಿ ವಿವರ | ಲೆಕ್ಕ ಶೀರ್ಷಿಕೆ | 2010–11ನೇ ಸಾಲಿನ ಇರುವ ಅನುದಾನ | ಪರಿಷ್ಕೃತ ಆಯವ್ಯಯದಲ್ಲಿ ಒದಗಿಸಬೇಕಾದ ಅನುದಾನ | ಷರಾ |
|---|---|---|---|---|
| Construction of Swimming pool at J.P.Park in Mathikere Ward No. 17 | **ಆಯವ್ಯಯ ಲೆಕ್ಕ ಶೀರ್ಷಿಕೆ 11– ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ – ಮೂಲಭೂತ ಸೌಕರ್ಯಗಳು – ಜೆ.ಪಿ.ಪಾರ್ಕ್ ಸುಂದರೀಕರಣ 3ನೇ ಹಂತ – ಪಿ.ಸಂಖ್ಯೆ 974** | ಮುಂದುವರೆದ ಕಾಮಗಾರಿಗೆ ಅನುದಾನ ಒದಗಿಸಿರುವುದಿಲ್ಲ | ರೂ.295.22 ಲಕ್ಷಗಳು | ಅನುದಾನ ಒದಗಿಸಿರುವುದಿಲ್ಲ ಕಾಮಗಾರಿ ಪ್ರಗತಿಯಲ್ಲಿದೆ. |

**ಆದ್ದರಿಂದ 2010–11ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 11– ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ – ಮೂಲಭೂತ ಸೌಕರ್ಯಗಳು – ಜೆ.ಪಿ.ಪಾರ್ಕ್ ಸುಂದರೀಕರಣ 3ನೇ ಹಂತ – ಪಿ.ಸಂಖ್ಯೆ 974 ರಲ್ಲಿ ರೂ.295.22 ಲಕ್ಷಗಳ ಅನುದಾನವನ್ನು ಮುಂದುವರೆದ ಕಾಮಗಾರಿಗಾಗಿ 2010–11ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸುವ ಷರತ್ತಿಗೆ ಒಳಪಟ್ಟು ಸೇರ್ಪಡೆಗೊಳಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.**

ನಿರ್ಣಯ :– ದಿನಾಂಕ 10–02–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.

**04]. ವಿಷಯದ ಸಂಖ್ಯೆ :–ತೆಆಸ್ಥಾಸ/179/2010–11**

ಮಾನ್ಯ ಆಯುಕ್ತರವರ ಟಿಪ್ಪಣೆ ಸಂಖ್ಯೆ:ಎ3(2)/ಪಿ.ಆರ್/212/10–11 ದಿನಾಂಕ:31–12–2010 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:15, ರಾಜಾಜಿನಗರ 2ನೇ ಬ್ಲಾಕ್, 19ನೇ ಮೈನ್, ನಂ.21 ಮತ್ತು 22 ನೇ ಕ್ರಾಸ್ ಮಧ್ಯದಲ್ಲಿರುವ ಸಿ.ಎ. ನಿವೇಶನದ ಉತ್ತರ ಭಾಗದಲ್ಲಿ 10X10 ಚದರ ಅಡಿಯಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಳ್ಳಲು ಶ್ರೀ. ವಿ.ಆರ್.ಕುಮಾರ್, ಗಾಯತ್ರಿ ನಗರ, ಬೆಂಗಳೂರು ಇವರಿಗೆ ಪಾಲಿಕೆಯು ದಿನಾಂಕ:17–11–1998 ರಲ್ಲಿ ಅನುಮೋದನೆ ನೀಡಿ 3 ವರ್ಷದ ಅವಧಿಗೆ ಮಾಹೇಯಾನ ರೂ.200/– ಕ್ಕೆ ಲೈಸನ್ಸ್ ಫೀ ಎಂಬುದಾಗಿ ಷರತ್ತಿನ ಅನ್ವಯ ನೀಡಲಾಗಿರುತ್ತದೆ. ಆ ಭಾಗದಲ್ಲಿ ಉದ್ಯಾನವನ ಅಭಿವೃದ್ಧಿಪಡಿಸುತ್ತಿರುವುದರಿಂದ ಬದಲಿ ಜಾಗವನ್ನು ನೀಡಲಾಗುವುದೆಂದು ದಿನಾಂಕ: 25–10–2002 ರಲ್ಲಿ ಭರವಸೆ ನೀಡಿದ್ದರೂ ಈವರೆವಿಗೂ ನನಗೆ ಬದಲಿ ಜಾಗವನ್ನು ನೀಡಿರುವುದಿಲ್ಲವೆಂದು ಅರ್ಜಿ ಸಲ್ಲಿಸಿರುತ್ತಾರೆ.

ಕಡತದಲ್ಲಿ ಲಗತ್ತಿಸಿರುವ ಪುಟ ಸಂಖ್ಯೆ 13 ರಲ್ಲಿನ ಹಿಂಬರಹದ ಅನುಸಾರ ಗುತ್ತಿಗೆ ಅವಧಿಯು 2001 ಕ್ಕೆ ಮುಕ್ತಾಯಗೊಂಡು ಮಹಾನಗರ ಪಾಲಿಕೆಯ ಇವರ ನವೀಕರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿದೆ ಎಂಬುದಾಗಿರುತ್ತದೆ.

ತದನಂತರ ಅರ್ಜಿದಾರರು ಅರ್ಜಿ ಸಲ್ಲಿಸಿ ರೇಸ್‌ಕೋರ್ಸ್ ರಸ್ತೆಯಲ್ಲಿ ಜೆ.ಡಿ.ಎಸ್. ಪಕ್ಷದ ಕಛೇರಿ ಹತ್ತಿರವಿರುವ ಭಾಗದಲ್ಲಿ 10X10 ಅಡಿ ಗುತ್ತಿಗೆಗೆ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ.

ಉಪ ಆಯುಕ್ತರು (ಆಸ್ತಿಗಳು) ರವರು ದಿನಾಂಕ:5–10–2010 ರಂದು ಸ್ಥಳ ಪರಿಶೀಲನೆ ಮಾಡಿ ಪ್ರಸ್ತುತ ಜಾಗವು ನಗರದ ಹೃದಯ ಭಾಗದಲ್ಲಿದ್ದು, ಬೆಲೆಬಾಳುವಂತಹ ಹಾಗೂ ಜನನಿಬಿಡ ಪ್ರದೇಶದಲ್ಲಿರುತ್ತದೆ.

ಕೋರಿರುವ ಸ್ಥಳದ ಅಕ್ಕಪಕ್ಕದಲ್ಲಿ ಹಾಪ್‌ಕಾಮ್ಸ್ ಮಳಿಗೆ, ಬಿ.ಬಿ.ಎಂ.ಪಿ ಸುಲಭ ಶೌಚಲಯ ಮತ್ತು ನಂದಿನಿ ಡೈರಿ ಇರುತ್ತದೆ. ಇದರ ಪಕ್ಕದಲ್ಲಿ ಲಭ್ಯವಿರುವ ಖಾಲಿ ಸ್ಥಳದಲ್ಲಿ ಗಿಡಗಳನ್ನು ಬೆಳೆಸಿದ್ದು, ಸಾರ್ವಜನಿಕ ಉದ್ದೇಶಕ್ಕೋಸ್ಕರ ಉಪಯೋಗಿಸಿಕೊಳ್ಳುವುದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಅಪರ ಆಯುಕ್ತರು (ಕಲ್ಯಾಣ ಮತ್ತು ಆಸ್ತಿಗಳು) ರವರು ಈ ಪ್ರಸ್ತಾವನೆ ಮರು ಪರಿಶೀಲಿಸಲು ಸೂಚಿಸಿರುತ್ತಾರೆ. ಸ್ಥಳೀಯ ಅಧಿಕಾರಿಗಳು ಅರ್ಜಿದಾರರಿಂದ ಪ್ರಮಾಣ ಪತ್ರ ಬರೆದು ಅದರಲ್ಲಿ ಅರ್ಜಿದಾರರು ನಿರುದ್ಯೋಗಿಯಾಗಿದ್ದು, ಯಾವುದೇ ವರಮಾನವಿರುವುದಿಲ್ಲ ಮತ್ತು ಅಪ್ರಾಪ್ತ ಮಕ್ಕಳಿರುತ್ತಾರೆಂದು ತಿಳಿಸುತ್ತಾ, ತಹಶೀಲ್ದಾರ್‌ರಿಂದ ಸಲ್ಲಿಸಲಾಗಿರುವ ಆದಾಯ ಪ್ರಮಾಣ ಪತ್ರದ ಪ್ರಕಾರ ವಾರ್ಷಿಕ ಆದಾಯ ರೂ.11,000/– ಇರುತ್ತದೆ.

ಕರ್ನಾಟಕ ಮುನಿಷಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ–176 ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಇ/129/ಡಿ.ಎಂ.ಡಿ./2002, ದಿನಾಂಕ: 2–6–2002 ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸರ್ಕಾರಿ ಆದೇಶ ಸಂಖ್ಯೆ:ನಇ/222/ಎಂ.ಎನ್.ವೈ/2008, ದಿನಾಂಕ: 3–9–2009 ರ ಅನುಸಾರ ಬೃಹತ್ ಬೆಂಗಳೂರು ಮಹಾಗನರ ಪಾಲಿಕೆ ಸರಹದ್ದಿನಲ್ಲಿ ಬರುವ ಸಾರ್ವಜನಿಕ ಸ್ವತ್ತುಗಳನ್ನು ಬೇರೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವುದಾಗಲಿ ಅಥವಾ ಮಾರಾಟ ಮಾಡುವ ಬದಲಾಗಿ ಸರ್ಕಾರವೇ ಸೂಕ್ತವಾಗಿ ಅಭಿವೃದ್ಧಿಪಡಿಸುವ ಬಗ್ಗೆ ಸಲಹೆ ನೀಡಲು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇರುವ ಸಮಿತಿಯ ಸಲಹೆ ಪಡೆಯಬೇಕೆಂಬುದಾಗಿ ಇರುತ್ತದೆ.

ಒಂದು ವೇಳೆ ಗುತ್ತಿಗೆಗೆ ನೀಡಿದಲ್ಲಿ ಪ್ರಸಕ್ತ ಸಾಲಿನ ಮಾರುಕಟ್ಟೆ ದರದಲ್ಲಿ ಶೇ.10% ರಷ್ಟು ವಾರ್ಷಿಕ ದರವನ್ನು ನಿಗದಿಪಡಿಸಬಹುದಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ 3 ರಸ್ತೆಗಳ ಮಧ್ಯದಲ್ಲಿ ಬರುವ ಪ್ರದೇಶದಲ್ಲಿರುವ ಭಾಗವನ್ನು ಗುತ್ತಿಗೆಗೆ ಕೋರಲಾಗಿದ್ದು, ಮೇಲ್ಕಂಡ ಸರ್ಕಾರಿ ಆದೇಶಗಳನ್ವಯ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ : 31–12–2010 ರ ಟಿಪ್ಪಣಿಯನ್ನು ಒಪ್ಪುತ್ತಾ 3ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 11–01–2011 ರ ನಿರ್ಣಯ

ನಿರ್ಣಯ:– ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು, ಆಯುಕ್ತರ ದಿನಾಂಕ 31–12–2010 ರ ಟಿಪ್ಪಣಿ ಹಾಗೂ ದಿನಾಂಕ : 11–01–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ: 3000/– (ಮೂರು ಸಾವಿರ ಮಾತ್ರ) ಗುತ್ತಿಗೆ ಹಣ ನಿಗಧಿಪಡಿಸಿ ಮೂರು ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡುವುದೆಂದು ಸಮಿತಿಯು ತೀರ್ಮಾನಿಸಿದೆ.

**(ಪಿ.ಎನ್.ಸದಾಶಿವ)**
ಅಧ್ಯಕ್ಷರು
ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ